# DAMAGE BOOK

UNIVERSAL
LIBRARY
OU_202300
UNIVERSAL
LIBRARY

**OSMANIA UNIVERSITY LIBRARY**

Call No. K 82 R25M    Accession No. K7030

Author రావు, శ్రీ ఏ ఎస్

Title మను . 1949

This book should be returned on or before the date last marked below.

ಮನೋಹರ ಗ್ರಂಥಮಾಲೆಯ ೯೭ನೆಯ ಕುಸುಮ

# ಮಗು

( ನಾಲ್ಕಂಕಿನ ಸಾಮಾಜಿಕ ನಾಟಕ )

ಬರೆದವರು :

**ಕೆ. ಎ. ಎನ್. ರಾವ್.**

ಅಕ್ಟೋಬರ

೧೯೪೯

**ಮನೋಹರ ಗ್ರಂಥಪ್ರಕಾಶನ ಸಮಿತಿ**

**ಧಾರವಾಡ.**

ಸಾಹಿತ್ಯವಿಷಯದಲ್ಲಿ ಸಲಹೆಗಾರರು :

ಶ್ರೀ. ದ. ರಾ. ಬೇಂದ್ರೆ, ಎಂ. ಎ.

ಶ್ರೀ. ವಿ. ಕೃ. ಗೋಕಾಕ, ಬಿ. ಎ., (ಆಕ್ಸಫರ್ಡ)

ಶ್ರೀ. ರಂ. ಶ್ರೀ. ಮುಗಳಿ, ಎಂ. ಎ. ಬಿಟಿ.

**ಬೆಲೆ ೧–೮–೦**


ಪ್ರಕಾಶಕ:
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲಾ
ಧಾರವಾಡ.

ಮುದ್ರಕ :
ವಿ. ವಾಯ್. ಜರಾರ
ಕರ್ನಾಟಕ ಪ್ರಿಂಟಿಂಗ ವರ್ಕ್ಸ
ಧಾರವಾಡ.

# ಕೃ ತ ಜ್ಞ ತೆ

ಶತಗ್ರಂಥಸ್ಪರ್ಧೆಯಲ್ಲಿ ಬಹುಮಾನ ಪಡೆದ ಈ ನಾಲ್ಕಂಕಿನ ಸಾಮಾಜಿಕ ನಾಟಕವನ್ನು ಗ್ರಂಥಮಾಲೆಯಲ್ಲಿ ಪ್ರಕಟಿಸಲು ಅನುಮತಿ ಕೊಟ್ಟದ್ದಕ್ಕಾಗಿ ಶ್ರೀಮಾನ್ ಕೆ. ಎ. ಎನ್. ರಾವ್ ಅವರಿಗೆ ನಾವು ಉಪಕೃತರಾಗಿದ್ದೇವೆ.

—**ಸಂಪಾದಕ.**

# ಬರಲಿರುವ ಕುಸುಮಗಳು

**ಗಂಗಾಸಾನಿ**

( ಸಾಮಾಜಿಕ ನಾಟಕ )

ಬರೆದವರು : ' ಗಿರಿಮಾತಾ '

**ಮಿದಿನಾಪುರಮಲ್ಲ**

( ಸಾಹಸಜೀವನವನ್ನು ಚಿತ್ರಿಸುವ ಕಾದಂಬರಿ )

ಬರೆದವರು : ಗುರುರಾಜ

**ಮೂಕಬಲಿ**

( ಸಾಮಾಜಿಕ ಕಾದಂಬರಿ )

ಬರೆದವರು : ಜಡಭರತ

**ಸಮರಸವೇ ಜೀವನ**

( ಇಜ್ಜೋಡಿನ ಕೊನೆಯ ಭಾಗ )

ಬರೆದವರು : ವಿ. ಕೃ. ಗೋಕಾಕ

**ತಾಯಿ**

( ಪರ್ಲ್‌ಬಕ್ಕಳ ಕಾದಂಬರಿಯ ಆಧಾರದಿಂದ )

ಬರೆದವರು : ಕೃಷ್ಣಕುಮಾರ

**ಮಾನಸಪುತ್ರ**

( ಸಾಮಾಜಿಕ ಕಾದಂಬರಿ )

ಬರೆದವರು : ದ. ರಾ. ಬೇಂದ್ರೆ

# ಮಗು

**( ನಾಲ್ಕಂಕಿನ ಸಮಾಜಿಕ ನಾಟಕ )**

## ಪಾತ್ರಗಳು :

ರಾಮಚಂದ್ರ................ಮಗು

ಗುಂಡಪ್ಪ....................ರಾಮಚಂದ್ರನ ತಂದೆ.

ಲಕ್ಷ್ಮಮ್ಮ ....................ರಾಮಚಂದ್ರನ ತಾಯಿ

ತಾರಾ ....................ರಾಮಚಂದ್ರನ ಹೆಂಡತಿ

ದೇವಯ್ಯ ..................ತಾರಾನ ತಂದೆ

ಸರೋಜ ..................ತಾರಾನ ಜತೆಗಾತಿ

ಸ್ಥಳ: ಮೈಸೂರು, ಶಿವಮೊಗ್ಗ.

# ಅಂಕ ೧.

## ದೃಶ್ಯ ೧.

[ಸ್ಥಳ: ಮೈಸೂರು ಕೃಷ್ಣಮೂರ್ತಿಪುರ.]

ನಿವೃತ್ತ ಗುಮಾಸ್ತೆ ಗುಂಡಪ್ಪನ ಮನೆಯ ಹಜಾರ. ಮಧ್ಯತರಗತಿಯ ಸಂಸಾರದ ಅಚ್ಚುಕಟ್ಟು. ಗೋಡೆಯ ಪಕ್ಕದಲ್ಲಿ ಪೆಟ್ಟಿಗೆಗಳು; ಅವುಗಳ ಮೇಲೆ ಹಾಸಿಗೆಯ ಸುರುಳಿಗಳು. ಗೋಡೆಗೆ ಸಾಲಾಗಿ ತಗಲುಹಾಕಿ ಹತ್ತಾರು ದೇವರ ಪಟಗಳು. ಅವುಗಳಲ್ಲಿ ಗಜಲಕ್ಷ್ಮಿಯದು ಬಹಳ ಮುಖ್ಯವಾಗಿ ಎದ್ದು ಕಾಣುತ್ತದೆ. ಮೇಲೆ ಗಳುಗಳಿಂದ ನೆರಿಗೆಯ ಮಡಿಸೀರೆಗಳು ತೂಗಾಡುತ್ತಿರುತ್ತವೆ. ಮೂಲೆಯಲ್ಲಿ ಒರಗಿಸಲ್ಪಟ್ಟು ನಿಂತ ಮಡಿಕೋಲು. ಒಳಬಾಗಿಲಿನ ಹೊಸಿಲ ಮೇಲೆ ರಂಗವಲ್ಲಿ, ಕುಂಕುಮ. ಬಾಗಿಲಿನ ಮೇಲೆ ಹಳೆಯ ಒಣಮಾವಿನ ಎಲೆಯ ತೋರಣ. ಗೋಡೆಯ ಮೇಲೆ ಕಾರಣೆ ಮತ್ತು ವಾದಿಕೆಯ ಚಿತ್ರ. ಗೋಡೆಗಳು ಸೇರಿದೆಡೆ, ಬಾಗಿಲು ಕಿಟಕಿಗಳ ಚೌಕಟ್ಟು ಇವುಗಳಲ್ಲಿ ಜಾಡದ ಪರೆಯು ವಿಶೇಷವಾಗಿ ಕಾಣುತ್ತದೆ. ನೆಲದ ಮೇಲೆ ಒಂದು ಕಡೆ ಮಂದಲಿಗೆ ಹಾಸಿದೆ. ಇನ್ನೊಂದು ಕಡೆ ದೊಡ್ಡ ಮಣೆ ಹಾಕಿದೆ. ದೃಶ್ಯವು ಕಣ್ಣಿಗೆ ಕಂಡಾಗ ನಿವೃತ್ತ ಗುಮಾಸ್ತೆ ಗುಂಡಪ್ಪನೂ ಅವನ ಹೆಂಡತಿ ಲಕ್ಷ್ಮಮ್ಮನೂ ನೆಲದ ಮೇಲೆ ಇದಿರಾಗಿ ಗೋಡೆಗೆ ಒರಗಿಕೊಂಡು ಕುಳಿತಿರುತ್ತಾರೆ. ಗುಂಡಪ್ಪನು ಹೆಸರಿಗೆ ತಕ್ಕಂತೆ ದಪ್ಪದೇಹದ ಮನುಷ್ಯ. ಸುಮಾರು ಐವತ್ತೇಳು ವರ್ಷ ವಯಸ್ಸು. ತಲೆಯ ಹಿಂಭಾಗದಲ್ಲಿ ನರೆತ ದಪ್ಪ ಜುಟ್ಟು. ಮೂರು ನಾಲ್ಕು ದಿನದ ಬಿಳಿಗಡ್ಡ. ಮೀಸೆ. ಕಿವಿಯಲ್ಲಿ ಬಿಳಿಯ ಕಲ್ಲಿನ ದತ್ತಕಡಕು. ಹಣೆಯಲ್ಲಿಯ ಅಡ್ಡಗಂಧ, ಉಟ್ಟ ಕೆಂಪು ಮಗುಟ, ಹೊದ್ದ ಮಾಸಲು ಬಣ್ಣದ ಟವಲು ಇವು ಅವನು ಆಗ ತಾನೆ ದೇವರ ಪೂಜೆ ಮಾಡಿ ಬಂದವನೆಂದು ಸೂಚಿಸುತ್ತವೆ. ಅರ್ಧ ಟವಲಿನಿಂದ ಮುಚ್ಚಿ, ಕೂದಲು ಕವಿದು ಕಾಣುವ ಹೊಟ್ಟೆಯ ಭಾಗದ ಮೇಲೆ ಅರೆಕಪ್ಪು ಬಣ್ಣದ ಜನಿವಾರಕ್ಕೆ ಗಂಟುಹಾಕಿದ ಚಿನ್ನದ ಉಂಗುರವೊಂದು. ಅವನ ಪಕ್ಕದಲ್ಲಿ ಒಂದು ಬೆಳ್ಳಿಯ ನಸ್ಯದ ಡಬ್ಬಿ ಇರುತ್ತದೆ. ಸೊಂಟಕ್ಕೆ ಸಿಕ್ಕಿಸಿ ಬಣ್ಣಬಣ್ಣದ ಚೌಕವೊಂದು. ಲಕ್ಷ್ಮಮ್ಮನು ಕೃಶವಾದ ಶರೀರದ, ಬಿಳಿಚಿಕೊಂಡ ಬಣ್ಣದ, ಸುಕ್ಕಿದ ಮೊಗದ, ಉಬ್ಬಿದ ಹಲ್ಲು, ಆಳದ ಕಣ್ಣುಗಳ, ಅರೆನೆರೆತ ನಣ್ಣ ಹೆರಳಿನ ತಲೆಯ, ಆಂಚಿನ ತೊಡೆದ ಕೆನ್ನೆಗಳ, ದೊಡ್ಡ ಅಡ್ಡ ಕುಂಕುಮದ ಹಣೆಯ, ಕೆಂಪು ಬೆಂಡೋಲೆ ಕಿವಿಯ, ಬಂದಿಸರಗಳ ಸಣ್ಣ ಕುತ್ತಿಗೆಯ, ಕುತ್ತಾಲು ಸೀರೆಯನ್ನುಟ್ಟ, ಕಣದ ರವಕೆಯನ್ನು ತೊಟ್ಟ ಲಕ್ಷಣವಾದ ಸಾಂಪ್ರದಾಯಿಃ ಮುತ್ತೈದೆ. ಮುಂದೆ ಹೂಬತ್ತಿಯ ಸಲಕರಣೆ.

ಎದುರಿಗೆ ತೂಗುಹಾಕಲ್ಪಟ್ಟ ಗಡಿಯಾರವು ಹನ್ನೊಂದನ್ನು ತೋರಿಸುತ್ತದೆ. ತೆರೆಯು ಮೇಲೆ ಹೋದಾಗ ಗುಂಡಪ್ಪನು ನಸ್ಯ ಹಾಕುತ್ತಲೂ ಲಕ್ಷ್ಮಮ್ಮನು ಬತ್ತಿ ಹೊಸೆಯುತ್ತಲೂ ಇರುತ್ತಾರೆ. ಒಳಗಡೆ ಎರಡು ಸೀನಿನ ಶಬ್ದ]

**ಗುಂಡಪ್ಪ :** ಮಗು ! ಬೇಗ ಬೇಗ ಮಾಡು, ಆಗಲೇ ಹೊತ್ತಾಗುತಾ ಬಂತು. ಹುಂ ತಡಮಾಡುತ್ತಾ ಇರಬೇಡ! ಆಯ್ತೋ ಇಲ್ಲವೋ ಇನ್ನೂ ?

ತೆರೆಯ ಒಳಗಡೆ: 'ಅಪ್ಪ ! ಆಗಿಹೋಯ್ತು. ಈಗಲೇ ಮುಗಿಸುತ್ತೀನಿ. ಗಂಟೆ ಎಷ್ಟಾಯ್ತೋ ಈಗ?'

( ಪ್ರವೇಶ ರಾಮಚಂದ್ರ. ಸಣಕಲು ಶರೀರದ ವ್ಯಕ್ತಿ. ವಯಸ್ಸು ಇಪ್ಪತ್ತೆರಡು-ಮೂರು. ರೋಗದ ಮೊಗ. ಬೆದರು ಬೆದರಿನ ಕಣ್ಣು, ದಪ್ಪ ಕನ್ನಡಕ. ಅವನ ಚಲನೆಗಳಲ್ಲಿ ವಯಸ್ಸಿಗೆ ತಕ್ಕ ತೂಕವಿರದೆ ಮಕ್ಕಳ ಸ್ವಭಾವವು ಕಾಣುತ್ತದೆ. ತಲೆಯ ಮುಂದೆ ಕ್ರಾಪು ಹಿಂದೆ ಸಣ್ಣ ಜುಟ್ಟು. ಪಟ್ಟೆಪಂಚೆಯನ್ನುಟ್ಟಿದ್ದಾನೆ. ತೆಳ್ಳನೆಯ ಬನಿಯನ್ ಹಾಕಿದ್ದಾನೆ.)

**ರಾಮಚಂದ್ರ :** (ಪ್ರವೇಶಿಸಿದವನೇ ಗಡಿಯಾರದ ಕಡೆಗೆ ನೋಡಿ) ಓಹೋ, ಹನ್ನೊಂದೆ? ಇನ್ನು ಒಂದೇ ಗಂಟೆ ಉಳಿದಿದೆ—ಭೇಟಿಗೆ!

**ಗುಂಡಪ್ಪ :** ಮತ್ತೆ ಏನು ಅಂತ ತಿಳಿದುಕೊಂಡಿದ್ದಿ? ಬೆಳಿಗ್ಗೆಯಿಂದ ತಿವಿತಾ ಇದ್ದೀನಿ. ಆದರೂ ಹೀಗೆ. ಹೊಗು, ಹೋಗು ಬೇಗ.

**ರಾಮಚಂದ್ರ :** (ಅಪರಾಧಿಯಂತೆ) ಆಗಲಪ್ಪ. ಇಗೊ, ಈ ಕ್ಷಣ.

**ಲಕ್ಷ್ಮಮ್ಮ:** (ಕತ್ತೆತ್ತಿ) ಮಗು, ಇದೇನಪ್ಪ? ಚೆನ್ನಾಯ್ತು. ಬೆಳಿಗ್ಗೆಯಿಂದ ಆಗಲೇ ಐದು ಆರು ಸಾರಿ ಸೀನು ಬಂದಿದೆ, ಬರಿ ಬನಿಯನ್ ಹಾಕಿಕೊಂಡು ಎದೆ ಬಿಟ್ಟುಕೊಂಡೇ ಇದ್ದೀಯಲ್ಲ? ಹೋಗು, ಹೋಗು, ಸದ್ಯ ಬೇಗ ಒಂದು ಷರಟನ್ನು ಹಾಕಿಕೊಳ್ಳಪ್ಪ. ಇಲ್ಲದೆ ಇದ್ದರೆ ಹೊದ್ದುಕೊ. ಇನ್ನೇನಾದರೂ ಆದೀತು. ಹಿಂದಿನ ಕೋಣೇಲಿದೆ—ಅಗಸನಿಂದ ಬಂದ ಮಡಿಷರಟು.

**ರಾಮಚಂದ್ರ :** ಆಗಲಮ್ಮ, ಆಗಲಿ. (ರಂಗಭೂಮಿಯನ್ನು ಓಡುತ್ತ ದಾಟಿ ಮರೆಯಾಗುತ್ತಾನೆ.)

**ಲಕ್ಷ್ಮಮ್ಮ :** ಪಾಪ, ಏನೂ ತಿಳಿಯೋದಿಲ್ಲ, ನಮ್ಮ ಮಗೂಗೆ. ನೋಡಿ ಅವನ ಆರೋಗ್ಯದ ವಿಷಯದಲ್ಲೂ ಸಹ ನಾವೇ ಹೇಳಬೇಕು.

**ಗುಂಡಪ್ಪ** : ನಾವು ಹೆಜ್ಜೆ ಹೆಜ್ಜೆಗೂ ಕೈಹಿಡಿದು ನಡೆಸದೆ ಇದ್ದ
ಇವನು ಏನಾಗುತ್ತಿದ್ದನೋ ಏನೋ !

**ಲಕ್ಷಮ್ಮ** : ನಾವು ಹಾಗೆ ಬೆಳೆಸುವ ಹೊತ್ತಿಗೇ ಅವನೂ ಒಬ್ಬ
ಮನುಷ್ಯ ಅಂತ ಆಗುತ್ತಾ ಇದ್ದಾನೆ.

**ಗುಂಡಪ್ಪ** : ಹುಂ, ಆದರೆ ಇನ್ನೂ ಬಹಳ ಕಾಲ ಬೇಕು—ಅವನ
ತನಗೆ ತಾನೇ ಯೋಚಿಸಿಕೊಳ್ಳೋದಿಕ್ಕೆ, ನಡೆದುಕೊಳ್ಳೋದಿಕ್ಕೆ.

**ಲಕ್ಷಮ್ಮ** : ಹೌದು, ಅವನಷ್ಟಕ್ಕೆ ಅವನ್ನೇ ಬಿಟ್ಟರೆ ಆಗಿಹೋಯ್ತು
ಅವನ ಪಾಡು. ಬದುಕುತ್ತಾನೇ ಹೇಳಿ? ನಾವು ಇದ್ದು, ಕೂತಾಗ, ನಿಂತಾ
ಗೆಲ್ಲ ಹೇಳಿದರೇ ಈ ಚಂದ. ಇವನ ಎದೆ ಏನು ಗಟ್ಟಿ—ಹೀಗೆ ಬಿಟ್ಟುಕೊಂಡು
ಇರುತ್ತಾನಲ್ಲ?

**ಗುಂಡಪ್ಪ** : ಸರಿ, ನಾಲ್ಕು ಮೆಟ್ಟಲು ಹತ್ತಿದರೆ ಮೂರು ದೂ
ಜೋರಾಗಿ ನಡೆದರೇ ಉಸಿರು ಹತ್ತಿ ಬರುತ್ತೆ. ಅವನ ಪ್ರಕೃತಿಯನ್ನು ಅವನು
ತಿಳಿದುಕೊಂಡಿಲ್ಲ. ತಿಳಿದುಕೊಂಡಿದ್ದರೂ ಅದಕ್ಕೆ ತಕ್ಕಂತೆ ನಡೆದುಕೊಳ್ಳೋ
ದಿಕ್ಕೆ ತಿಳಿಯೋದಿಲ್ಲ.

**ಲಕ್ಷಮ್ಮ** : ನಾವೇನೋ ಕಷ್ಟಪಟ್ಟು (ರಾಮಚಂದ್ರನು ಬನಿಯನ್ ಹಾ
ಕೊಂಡು ರಂಗಭೂಮಿಯನ್ನು ಮತ್ತೆ ಓಡುತ್ತ ದಾಟಿ, ಬಂದ ಕೊಣೆಗೇ ಹೋಗು
ತ್ತಾನೆ) ಯಾವಾಗಲೂ ನೋಡಿಕೊಂಡು ಗಾಳಿಬಡಿತಕ್ಕೆ ಬಿಡದೆ, ಬಿಸಿಲಿ
ಶಾಖಕ್ಕೆ ಬಿಡದೆ, ನೆರಿಯ ನೆರಳಿನಲ್ಲೇ ಮರೆಯಾಗಿ ಬೆಳಸಿಕೊಂಡು ಬಂದಿದ್ದ
ರಿಂದ ಅವನದ್ದೂ ಒಂದು ಜೀವ ಅಂತ ಉಳಿದುಕೊಂಡಿದೆ. ಬಣ್ಣ
ಗೊಂಬೆಯ ಹಾಗಾದರೂ ಬಾಳುತ್ತಾ ಇದ್ದಾನೆ—ನಮ್ಮ ಕಣ್ಣಿನ ಮುಂದೆ.

**ಗುಂಡಪ್ಪ** : ಸಧ್ಯ ನಾವು ಹೇಳಿದ್ದನ್ನಾದರೂ ಚಾಚೂ ಬಿಡದೆ ಕೇ
ಕೊಂಡು ನಡೆದುಕೊಳ್ಳುತ್ತಾನಲ್ಲ ಅದೇ ನಮ್ಮ ಪುಣ್ಯ, ಅವನ ರಕ್ಷಣೆ.

**ಲಕ್ಷಮ್ಮ** : ಪಾಪ, ಅವನು ಮೊದಲಿನಿಂದಲೂ ಹಾಗೆ. ಹಾಕಿದ ಗೆ
ದಾಟೋನಲ. ಹೇಳಿದ ಕೆ. 'ಉಹುಂ' ಅಂದದ ನೇ ಕಾಣೆ.

**ಗುಂಡಪ್ಪ :** ಇಲ್ಲದೆ ಇತರ ಹುಡುಗರಂತೆ ಸ್ವಾತಂತ್ರ್ಯ, ಸ್ವಾತಂತ್ರ್ಯ ಅಂತ ಇವನೂ ಅವಿವೇಕದಿಂದ ಹಾರಾಡಿದ್ದರೆ, ಇವನ ಗತಿ ಆಗುತ್ತಿತ್ತು ಗಂಗಮ್ಮನ ಪಾಲು.

**ಲಕ್ಷ್ಮಮ್ಮ :** ಛೆ, ಅಂಥ ಹಟವನ್ನೇ ಕಂಡು ಅರಿಯ. ಎದುರು ಮಾತು ಅನ್ನೋದಂತೂ ತಿಳಿದೇ ತಿಳಿಯದು. ಆದರಲ್ಲಿಲ್ಲ ಅವನೂ ಪುಣ್ಯ ಮಾಡಿದ್ದಾನೆ ನಾವೂ ಪುಣ್ಯ ಮಾಡಿದ್ದೀವಿ. ಇಬ್ಬರಿಗೂ ಕಷ್ಟ ಇಲ್ಲ, ನಷ್ಟ ಇಲ್ಲ.

**ಗುಂಡಪ್ಪ :** ಅದೆಲ್ಲ ಮೊದಲಿಂದ ದಾರಿ ಹಾಕಿ ಬೆಳಸಿಕೊಂಡು ಬಂದೆವಲ್ಲ ಅದರ ಫಲ ಅನ್ನು.

**ಲಕ್ಷ್ಮಮ್ಮ :** ಅವನನ್ನೇನು ಹಾಗೆ ಹೀಗೆ ಬೆಳೆಸಿದೆವೆ? ಗಿಣಿ ಸಾಕಿದ ಹಾಗೆ ಬೆಳಸಿಕೊಂಡು ಬಂದಿದೀವಿ—ಗಿಣಿ ಹಾಗೆ.

**ಗುಂಡಪ್ಪ :** ಇವತ್ತಿಗೂ ನಾವು ಹೇಳಿದ್ದೆ, ಕಲಿಸಿದ್ದೆ, ಮಾಡಿಸಿದ್ದೆ. ಹಾಗೆ ಆಗೋ ಹೊತ್ತಿಗೇ ಅವನು ಇನ್ನೂ ಸೇರವಾಗಿದ್ದಾನೆ, ಕ್ಷೇಮವಾಗಿದ್ದಾನೆ.

**ಲಕ್ಷ್ಮಮ್ಮ :** ಅವನಿಗೆ ಬಂದ ಕಾಯಿಲೆಗಳಲ್ಲಿ ನಾವು ಸಾಕಿದ ಹಾಗೆ ಸಾಕದೆ ಇದ್ದರೆ ಅವನು ಬದುಕುತ್ತಿದ್ದನೇ—ಹೇಳಿ? ಎರಡು ವರ್ಷದ ತನಕ ಸೊಂಟಬಿಟ್ಟು ಇಳಿಸಿದೆವೆ—ಅವನನ್ನ?

**ಗುಂಡಪ್ಪ :** ಹೆಜ್ಜೆ ಇಡೋದು ಅಂತ ಕಲತಿದ್ದೂ ಮೂರು ವರ್ಷಕ್ಕೇ. ಆವರ ಅಜ್ಜನೋ ಹೇಗೆ ನೋಡಕೋತಾ ಇದ್ದರು?

**ಲಕ್ಷ್ಮಮ್ಮ :** ಅಬ್ಬಬ್ಬ! ಆವರ ಪ್ರೀತಿ, ಎಚ್ಚರಿಕೆ ನಮಗೆ ತಾನೆ ಬಂದೀತೆ? ಉಹುಂ. ಅವನನ್ನ ಎಡಬಿಡತಾ ಇರಲಿಲ್ಲವಲ್ಲ. ಹಿಂದೇ ಮುಂದೇ ಸುತ್ತಿಕೊಂಡು ಅವನಿಗೆ ಬೇಕಾದ್ದೆಲ್ಲ—ಸೂಚನೆ ಕಂಡರೇ ಸಾಕು—ನಡೆಸಿಕೊಂಡು ಒಂದಿಷ್ಟು ಕೆಲಸ ಮಾಡಿಸದೆ, ಶ್ರಮ ಕೊಡದೆ ಎಲ್ಲ ತಾವೇ ಮಾಡಿಕೊಂಡು ಬರುತ್ತಾ ಇದ್ದರಲ್ಲ—ಅವರು ಇರುವವರೆಗೆ, ಅವನ ವಯಸ್ಸಿನ ಲೆಕ್ಕ ಅವರಿಗೆ ಇಲ್ಲವೇ ಇಲ್ಲ. ಎಷ್ಟಾದರೆ ಏನು? ನಾಲ್ಕು ವರ್ಷ ತುಂಬಿದ್ದರೂ ಎಲ್ಲಿ ಬಿದ್ದಾನೋ ಎದ್ದಾನೋ ಅಂತ ಹೆದರಿ ಕೈಬಿಟ್ಟು ಒಂದು ದಿನ ನಡೆಸಲಿಲ್ಲವೊ. ಐದು ವರ್ಷಕ್ಕೇ ಅವನು ಮನೇಲಿ ಹಾಗೂ ಹೀಗೂ ತಾನೇ

ಓಡಾಡಿದ್ದು. ಆಗಲೂ ಅವನ ಮೇಲೆ ಒಂದು ಕಣ್ಣು ಇಟ್ಟೇ ಇರುತ್ತಾ ಇದ್ದರು. 'ಓಡಬೇಡ' ಅನ್ನೋದು, 'ಹೊಸಲು ನೋಡಿಕೊ' ಅನ್ನೋದು ಯಾವಾಗಲೂ ಅವನ ಚಿಂತೆಯೇ ಚಿಂತೆ. ಏಳು ವರ್ಷ ಆಗಿ ಅವನೇ ಬೇಡ ಎಂದರೂ ಬಿಡುತ್ತಾ ಇದ್ದರೆ? ಹಿತ್ತಲಿಗೆ ಹೋದರೆ ನೀರು ಹಾಕೋದು, ಕೈಕಾಲು ತೊಳಿಸೋದು, ಒರಸಿ ಅಂಗಿ ತೊಡಸೋದು, ಗುಂಡಿ ಹಾಕೋದು ನೀರು ತುಂಬಿಕೊಡೋದು, ಹಲ್ಲು ಉಜ್ಜೋದು ಎಲ್ಲ. ಆವಾಗಲೂ ಅವನಿಗೆ ಅನ್ನ ಕಲಸಿ ಇಡದೆ ಅವರು ತುತ್ತು ಎತ್ತುತ್ತಾ ಇದ್ದರೆ? ಒಂದು ಕಿತ್ತಳೆ ಹಣ್ಣು ತಿನ್ನಬೇಕಾದರೂ ಅವರೇ ಬಿಡಿಸಿ ಕುಸುಮ ತಿನ್ನಿಸಬೇಕು–ಸಿಪ್ಪೆ, ಬೀಜ ಎಲ್ಲಿ ನುಂಗಿ ಕರುಳಿನಲ್ಲಿ ಸಿಕ್ಕಿಕೊಳ್ಳುತ್ತೋ ಅಂತ ಅವರಿಗೆ ಗಾಬರಿ. ಮೊನ್ನೆ ಅನ್ನೋ ಹಾಗಿದೆ, ಅವನಿಗೆ ಮಡಿ ಉಡಿಸೋದು ಕೊಂಚ ತಡಮಾಡಿ ಅವನಿಗೇ ಬಿಟ್ಟಾಗ ಎಷ್ಟು ಅಸಮಾಧಾನಪಟ್ಟುಕೊಂಡರು? ಅವನು ಮೊನ್ನೆ ಮೊನ್ನೆವರಿಗೂ ಅವನಿಗಾಗಿ ಏನು ತಾನೆ ಮಾಡಿಕೊಳ್ಳುತ್ತಿದ್ದ? ಬಟ್ಟೆ ಸಹಿತ ಸರಿಯಾಗಿ ಹಾಕಿಕೊಳ್ಳೋದಿಕ್ಕೆ ಬರದು; ಸುಮ್ಮನೆ ಬಂದು ಮುಂದೆ ನಿಂತುಕೊಂಡುಬಿಡುತ್ತಿದ್ದ.

**ಗುಂಡಪ್ಪ :** ಚೆನ್ನಾಗಿ ಕಾಪಾಡಿಕೊಂಡು ಬಂದರು, ಒಳ್ಳೆ ತಯಾರಿ ಕೊಟ್ಟರು ಪಾಪ! ಒಂದು ದಿನ ಮಣ್ಣು ಕಲ್ಲಿನಲ್ಲಿ ಆಡಿ ಬಟ್ಟೆ ಕೊಳೆ ಮಾಡಿಕೊಳ್ಳೋದಕ್ಕೆ ಬಿಡಲಿಲ್ಲ. ಒಂದು ದಿನ ನೀರಿನಲ್ಲಿ ಆಡಿ ಬಟ್ಟೆ ಒದ್ದೆ ಆದದ್ದಿಲ್ಲವೊ. ಇನ್ನು ಅಂಥ ಇಂಥ ಆಟ ಚೇಷ್ಟೆ ಅಂದರೆ ಅವನ್ನಂತೂ ಕಾಣೋಕೇ ಬಿಡಲಿಲ್ಲವೊ.

**ಲಕ್ಷ್ಮಮ್ಮ :** ಸರಿ, ಸ್ಕೂಲು ಮಾರುದ್ದ ದೂರದಲ್ಲಿದ್ದರೂ, ಅವರು ಇರುವವರೆಗೂ ಅವನು ಒಂದು ದಿನ ಒಬ್ಬನೇ ಹೋದದ್ದುಂಟೆ? ಅವನ ಪುಸ್ತಕ ಸಹಿತ ಅವರೇ ಹೊತ್ತುಕೊಂಡು ಹೋಗಬೇಕು. ಅಷ್ಟು ಸಹಿತ ಅವನಿಗೆ ಆಯಾಸ ಕೂಡದು. ನಾನೇ ಒಂದೆರಡು ಸಲ ಅವನೇ ತೆಗೆದು ಕೊಂಡು ಹೋಗಲಿ ಅಂದೆ. ಅದಕ್ಕೆ 'ಸರಿ, ಅವನಿಗೆ ಅಷ್ಟಿದಿಯೇ ಶಕ್ತಿ?' ಅಂದುಬಿಟ್ಟರು. ಸರಿ ಒಂದು ಚಂಬು ನೀರು ಎತ್ತಗೊಡಿಸುತ್ತ ಇರಲಿಲ್ಲ. ಕಡೇಗೆ ಸೊಳ್ಳೇಪರದೇ ತೆಗೆಯೋದಿಕ್ಕೂ ಅವರನ್ನೇ ಕೂಗುತ್ತಾ

ಇದ್ದ. ಸ್ಕೂಲಿನಲ್ಲೂ ಸಹಿತ ಅವನ ಜತೇಲಿ ಪ್ರಾರ್ಥನೆಗೆ ನಿಂತಿರೋ ರಂತೆ. ಅದು ಹೇಗೆ ಪಾಠದ ಹೊತ್ತಿನಲ್ಲಿ ಬಿಟ್ಟಿರುತ್ತಿದ್ದರೋ! ಅದು ಮುಗೀತು ಅಂದರೆ ಕಾದಿದ್ದು ಕರೆದುಕೊಂಡು ಬಂದುಬಿಡುತ್ತಿದ್ದರು.

**ಗುಂಡಪ್ಪ :** ಅವನಿಗೆ ಬಿಸಿಲಿನಲ್ಲಿ ಆಟ ಆಡಿದರೆ ಆಗೋದಿಲ್ಲ ಅನ್ನೋದು ಚೆನ್ನಾಗಿ ಗೊತ್ತು. ಸರಿ, ಒಂದು 'ಪಲ್ಟಿ' ಹೊಡೆಯೋಕೆ ಹೋದರೆ ಅವರು ಬಿಡುತ್ತಿದ್ದರೆ—ಕತ್ತು ಉಳುಕೀತು, ಮಾಸ ಕಡಿಮೆ ಯಾದ ಕೈಕಾಲ ಮೂಳೆಗೆ ಪೆಟ್ಟು ತಗಲೀತು ಅಂತ? ನಾವು ಎಷ್ಟೆಷ್ಟೋ ನೋಡಿಕೊಂಡರೂ ಅವರ ಹಾಗೆ ಎಚ್ಚರಿಕೆಯಿಂದ ನೋಡಿಕೊಳ್ಳೋದಕ್ಕೆ ನಮಗೂ ಸಹ ಸಾಧ್ಯವಿಲ್ಲ. ಅಲ್ಲದೆ ಎಲ್ಲಿ ಅಂಥ ಇಂಥ ಹುಡುಗರ ಜತೆಗೆ ಸೇರಿ ಕೆಟ್ಟ ಅಭ್ಯಾಸ ಕಲಿತುಕೊಂಡುಬಿಡುತ್ತಾನೋ ಅಂತ ಮಹಾಭಯ. ಅವನು ಅಸರಂಜಿ ಹಾಗೆ ಇರಬೇಕು ಅಂತ ಅವರಿಗೆ.

**ಲಕ್ಷಮ್ಮ :** ಅವನು ಯಾವಾಗಲೂ ಅವರ ಜತೇಲೇ ಇದ್ದು ದೊಡ್ಡ ತರಹ, ಗಂಭೀರ ಕಲಿತುಕೊಂಡನೇ ಹೊರತು ಬಾಕೀ ಹುಡುಗರ ಕಪಿತನ, ಹಾರಾಟ, ಹೆಚ್ಚು ಮಾತು ಒಂದಿಷ್ಟೂ ಬರಲಿಲ್ಲ. ಎಲ್ಲ ದೊಡ್ಡ ಮನುಷ್ಯನ ಹಾಗೆ.

**ಗುಂಡಪ್ಪ :** ಜ್ಞಾಪಕ ಇಲ್ಲವೆ? ಎಷ್ಟು ಗಂಭೀರ, ಎಷ್ಟು ನಾಚಿಕೆ ಅವನಿಗಿತ್ತು ಅಂದರೆ, ಮೊದಲು ಎರಡು ಪರೀಕ್ಷೆಯಲ್ಲಿ ಅವನನ್ನು ಬಾಯಿ ಬಿಡಿಸೋದಿಕ್ಕೆ ನಮಗೆ, ಮೇಷ್ಟರಿಗೆ ಎಲ್ಲರಿಗೂ ಸಾಕುಸಾಕಾಗಿ ಹೋಯ್ತು. ಎಷ್ಟು ಉಪದೇಶ, ಎಷ್ಟು ಪುಸಲಾವಣೆ, ಎಷ್ಟು ಆಸೆ, ಎಷ್ಟು ಹೆದರಿಕೆ ತೋರಿಸಬೇಕಾಯ್ತು—ಇದೊಂದು ಆಗಬೇಕಾದರೆ. ಸ್ಕೂಲಿನ ಹೊರಗಂತು ಮಾತೇ ಆಡಪೆ ಮೂರು ವರ್ಷ ಕಳೆದನಲ್ಲ. ಒಂದು ದಿನ ಅವರ ಮೇಷ್ಟರು 'ಇದೇನು?' ಅಂತ ಕೇಳಿದರು. ಆದರೆ ಅವನು ಎಷ್ಟು ದೊಡ್ಡ ತರಹ ದಲ್ಲಿ ತಯಾರಾದೋನು ಅನ್ನೊದು ಅವರಿಗೇನು ಗೊತ್ತು? ಬಾಕಿ ಮಕ್ಕಳ ಸಂಗವೇ ಅವನಿಗೆ ಬೇಡ. ಎಲ್ಲ ಪ್ರತ್ಯೇಕ ಆಗಬೇಕು ಅವನಿಗೆ.

**ಲಕ್ಷ್ಮಮ್ಮ :** ಬಾಕಿ ಕೆಲವು ಮಕ್ಕಳ ಹಾಗೆ ಒಂದು ದಿನ ಸ್ಲೇಟು ಒಡೆದು ಕೊಳ್ಳೋದೇ, ಬಳಪ ಮುರಿಯೋದೆ, ಪುಸ್ತಕ ಹರಿಯೋದೆ ? ರಾಮ ರಾಮ ! ಅವನು ಕಂಡೇ ಅರಿಯ.

**ಗುಂಡಪ್ಪ :** ಇವನ ಬೆಳವಣಿಗೆ ಕಂಡು ಪಕ್ಕದ ಮನೆ ಶಾಮಣ್ಣ ನವರಿಗೆ ಮಾತ್ರ ಆಗುತ್ತಾ ಇರಲಿಲ್ಲ. ಅವರ ಮಗು ಹಾಗೆ ಇವನೂ ಯಾವುದಕ್ಕೂ ಜಗ್ಗದೆ ಹುಚ್ಚುಹುಚ್ಚನಾಗಿ ಆಡಿಕೊಂಡು ದುಷ್ಟನಾಗ ಲಿಲ್ಲ ಅಂತ ಅವರಿಗೆ ಏನು ಅಸೂಯೇನೋ ಏನೋ. 'ಅವನಷ್ಟಕ್ಕೆ ಅವನನ್ನು ಬಿಡಿ, ಅವನಷ್ಟಕ್ಕೆ ಅವನನ್ನು ಬಿಡಿ' ಅಂತ ನಾವಿರಸಲ ಹೇಳೋರು

**ಲಕ್ಷ್ಮಮ್ಮ :** ಅವರಿಗೇನು ಗೊತ್ತು ಇವನ ಸಮಾಚಾರ ? ಬಿಟ್ಟಿದ್ದರೆ ಆಗುತ್ತಿತ್ತು ನೆಟ್ಟಗೆ. ಅವರ ಮಗ ಅಷ್ಟು ಗಟ್ಟಿ, ಅವನಿಗೂ ನಿತ್ಯ ಗಾಯ, ರಕ್ತ, ಔಷಧಿ ಇದ್ದೇ ಇರುತ್ತಾ ಇತ್ತು. ಇನ್ನು ಇವನು ಅಂದರೆ ಕೈಕಾಲು ಮುರಿದುಕೊಂಡೋ ತಲೆ ಒಡೆದುಕೊಂಡೋ ಬರುತ್ತಿದ್ದ ಅಷ್ಟೆ. ದಾರಿಯಲ್ಲಿ ದನಾನೋ, ನಾಯೀನೋ ಹತ್ತಿರ ಬಂದರೆ ಹೆದರಿ ಕಿರಿಚಿಕೊಂಡು ಜ್ವರಗಿರ ಬಂದು ಮಲಗಿಕೊಳ್ಳುತ್ತಿದ್ದ. ಈಗಲೂ ದನ ಕಂಡರೆ ಮೈಲಿ ದೂರ ಹೋಗು ತ್ತಾನೆ. ಆಗ ಗಡಗಡ ಅಂತ ನಡುಗುತ್ತಲೇ ಇದ್ದ. ಸರಿ ಒಂದು ಗೊದ್ದ ಬಂದರೆ ಕಿರಿಚಿಕೊಳ್ಳುತ್ತಿದ್ದ, ಹುಡುಗ ಅಂತ ಆಗಿದ್ದಾಗ. ನಾವೇ ಓಡಿಸ ಬೇಕು. ಇಲಿ, ಕಪ್ಪೆ ಅಂದರಂತೂ ದೇವರೇ ಗತಿ. ರಾತ್ರಿ ಹೇಳಬಿಟ್ಟರೆ ನಾವೇ ಎತ್ತುಕೊಂಡು--ಹೋಗೇ ತಿರುಗಾಡಿಸಬೇಕು ; ನೆಲದ ಮೇಲೆ ಕಾಲಿಟ್ಟಾನೆ ಅವನು, ಜಪ್ಪಯ್ಯ ಅಂದರೂ ?

**ಗುಂಡಪ್ಪ :** ಇಷ್ಟಕ್ಕೂ ಅವನಿಗೇನು ತಿಳಿವಳಿಕೆ ಆಗ ? ನಾವು ಹೇಳದೆ ಮುಂದುವರಿಯೋ ಹಾಗೇ ಇಲ್ಲ. ಇಂಥವನನ್ನು ಹೇಗೆ ಅವನಷ್ಟಕ್ಕೆ ಅವನಿಗೇ ಬಿಟ್ಟುಬಿಡೋದು ? ಅದೂ ನ್ಯಾಯವೋ ?

**ಲಕ್ಷ್ಮಮ್ಮ :** ಆಗಿನ ಮಾತೇಕೆ ? ಈಗಲಾದರೂ ನಾವು ಹೇಳದೇ ಇದ್ದರೆ ಅವನಿಗಾಗಿ ಅವನು ಏನು ಮಾಡಿಕೊಳ್ಳಬಲ್ಲ ಪಾಪ ! ಏನೂ ಅರಿಯದ ಹುಡುಗ. ವಯಸ್ಸು ಇಷ್ಟು ಆಯ್ತು ಅಂತ ತೀರ ನಿರ್ವಾಹ

ವಿಲ್ಲದೇ ಇದ್ದ ದಿನದಿನದ ಸಣ್ಣ ಪುಟ್ಟ ಕೆಲಸ ಅಷ್ಟು ಮಾಡಿಕೊಳ್ಳಬಲ್ಲ ಅಷ್ಟೆ. ಅದೂ ಹೇಗೆ ಹೇಗೋ.

**ಗುಂಡಪ್ಪ :** ಪರೀಕ್ಷೆ ಒಂದು ಆವನಾಗೆ ಅವನು ಅಷ್ಟು ಇಷ್ಟು ಮಾಡಿಕೊಂಡದ್ದು ಅಂತ ಅಂದರೂ ಅನ್ನಬಹುದು. ಲೌಕಿಕ ಅವನಿಗೆ ಏನು ತಿಳಿದಿದೆ ?

**ಲಕ್ಷ್ಮಮ್ಮ :** ಸರಿ. ಅದೆಲ್ಲ ತಿಳಿದು ಸ್ವತಂತ್ರಿಸಿ ಮಾಡೋ ವಯಸ್ಸೆ ಅವನಿಗೆ ? ಮನೆಯಾಯ್ತು. ಸ್ಕೂಲಾಯ್ತು. ಅವನಾಯ್ತು ಅವನ ಪಾಠ ಆಯ್ತು. ಇವನ್ನ ಬಿಟ್ಟು ಹೆಚ್ಚಿಗೆ ಹವ್ಯಾಸಕ್ಕೇ ಹೋದೋನಲ್ಲ. ಹೋಟಲು, ನಾಟಕ ಸಿನೀಮ, ಆ ಕುಣಿತ ಈ ಮೆರೆತ ಒಂದೂ ಕಂಡೋನೆ ಅಲ್ಲ.

**ಗುಂಡಪ್ಪ :** ಅಂತೂ ನಾವು ಇನ್ನೂ ಇರೋವರೆಗೂ ಅವನಿಗೇನು ಯಾವ ಕಷ್ಟನೂ ಕೊಡೋದಿಲ್ಲ. ಯಾವುದನ್ನೂ ಅವನಿಗೆ ಅವನೇ ಬಡಿದಾಡು ಅಂತ ಬಿಡೋದೂ ಇಲ್ಲ ಆಮೇಲಂತೂ ಅವನಿಗೆ ಇದ್ದೇ ಇದೆ. ಈಗಿನಿಂದ ಅವನೇಕೆ ಯಾವುದು ಸರಿ, ತಪ್ಪು, ಲಾಭ, ನಷ್ಟ, ಹಾಗೆ ಹೀಗೆ ಅಂತ ಒದ್ದಾಡಿಕೊಳ್ಳಬೇಕು. ನಾವಿಲ್ಲವೆ—ಅದನೆಲ್ಲ ನಿರ್ಧರಿಸೋದಿಕ್ಕೆ, ಹೇಳೋದಿಕ್ಕೆ ? ನಾವು ಹೇಳಿದಂತೆ ಅವನು ಕೇಳಿಕೊಂಡಿದ್ದರೆ ಸಾಕು–ನಮ್ಮ ಕಣ್ಣು ಮುಂದಿನ ಗೊಂಬೆಯಂತೆ. ನಿದಾನವಾಗಿ ಬರಲಿ ಸ್ವತಂತ್ರ, ಪ್ರತಿಷ್ಠೆ ಎಲ್ಲ.

**ಲಕ್ಷ್ಮಮ್ಮ :** ಅಷ್ಟೆ. ಅದೇ ಕ್ಷೇಮ, ಸುಲಭ. ಅವನೂ ಸ್ವತಂತ್ರ ಗಿತಂತ್ರ ಅಂತ ಬಡಿದಾಡೋ ಪುಂಡನೇನಲ್ಲ. ಎರಡು ಮೂರು ವರ್ಷ ಆಗಿದ್ದಾಗ ಹೇಗಿದ್ದನೊ ಈಗಲೂ ಅದೇ ಹಸುಗೂಸು. ಸ್ವಲ್ಪವೂ ತನ್ನ ಶ್ರೇಷ್ಠವಿಲ್ಲ. ಬಸವಣ್ಣನ ಹಾಗೆ—ಹೇಳಿದ್ದಕ್ಕೆಲ್ಲ 'ಹುಂ' ಇವತ್ತಿನ ವರೆಗೂ, ಬುದ್ಧಿಗುರುತು ತಿಳಿದ ಮೇಲೆ, ನಿಮಗಾಗಲಿ ನನಗಾಗಲಿ ಮುಖ ಕೊಟ್ಟು ಮಾತಾಡೋದೂ ಸಹ ಇಲ್ಲವಲ್ಲ. ಎಷ್ಟು ಗೌರವ, ಎಷ್ಟು ಭಕ್ತಿ ಇಟ್ಟುಕೊಂಡಿದ್ದಾನೆ. ಈ ಕಾಲದಲ್ಲಿ ಇಂಥ ಮಗ ಇರೋದು....ಅಂದರೆ....

**( ಪ್ರವೇಶ ರಾಮಚಂದ್ರ. ಸೂಟು, ಷೂ ಹಾಕಿದ್ದಾನೆ. ಟೈ ಕಟ್ಟಿದ್ದಾನೆ. ಜರತಾರಿ ಪೇಟ ಸುತ್ತಿದ್ದಾನೆ. )**

**ಗುಂಡಪ್ಪ :** ಓ, ಆಯಿತೇನು ? ಎಲ್ಲಿ, ನೋಡೋಣ ?

(ರಾಮಚಂದ್ರನು ಪರೀಕ್ಷೆಗಾಗಿ ನೆಟ್ಟಗೆ ನಿಂತುಕೊಳ್ಳುತ್ತಾನೆ. ಎರಡು ಹನಿ ಬೆವರು ಕೆನ್ನೆಗಳ ಮೇಲೆ ಇಳಿಯುತ್ತವೆ.) ಪೇಟದ ಅಂಚು ಕೊಂಚ ಮುದುರಿಕೊಂಡಿದೆ. ಟೈ ನೋಡು ಎಡೆಕ್ಕೆ ವಾರೆಯಾಗಿದೆ. ನಿನ್ನ ಕೈಚೌಕ ಎಲ್ಲಿ? ಮೇಲು ಜೇಬಿಗೆ ಸೇರಿಸಬೇಕು. ಕೋಟು ಜೇಬಿನ ಮುಚ್ಚಳ ಮೇಲೆ ಹಾಕಿಕೋ. (ರಾಮಚಂದ್ರನು ತಂದೆಯ ಸಲಹೆಯಂತೆ ಕನ್ನಡಿಯ ಮುಂದೆ ಸರಿಮಾಡಿಕೊಳ್ಳಲು ಯತ್ನಿಸುತ್ತಾನೆ) ತಾಳಪ್ಪ. ನಿನಗೆ ಅದು ಸರಿಯಾಗಿ ಬರೋದಿಲ್ಲ. ನಾನೇ ಸರಿಯಾಗಿ ಮಾಡಬೇಕು. (ಗುಂಡಪ್ಪನು ಎದ್ದು, ತನಗೆ ತೋರಿದಂತೆ ಮಾರ್ಪಾಡನ್ನು ಮಾಡುತ್ತಾನೆ. ಅನಂತರ ಮೇಲಿನಿಂದ ಕೆಳಗಿನವರೆಗೂ ವಿಮರ್ಶಕದೃಷ್ಟಿಯಿಂದ ಮಗನನ್ನು ನೋಡಿ) ಈಗ ಸರಿಯಾಯಿತು. ನಾನು ನಿನ್ನೆ ಹೇಳಿಕೊಟ್ಟಿದ್ದನ್ನೆಲ್ಲ ನೆನಪಿನಲ್ಲಿ ಇಟ್ಟುಕೊಂಡಿದ್ದೀಯೋ ?

**ರಾಮಚಂದ್ರ :** ಹುಂ. (ತಲೆಯಲ್ಲಾಡಿಸುತ್ತಾನೆ)

**ಗುಂಡಪ್ಪ :** ಹೇಗೆ ನಮಸ್ಕಾರ ಮಾಡುತ್ತೀ ತೋರಿಸು.

**ರಾಮಚಂದ್ರ :** (ನಾಚಿಕೊಳ್ಳುತ್ತ) ಅಪ್ಪ, ಅದೆಲ್ಲ........

**ಗುಂಡಪ್ಪ :** ಹಾಗಲ್ಲ ಮಗು. ದೊಡ್ಡ ಅಧಿಕಾರಿಗಳನ್ನು ತೃಪ್ತಿ ಪಡಿಸಬೇಕಾದರೆ ಬುದ್ಧಿಗಿಂತಲೂ ನಡೆವಳಿಕೆಯೇ ಮುಖ್ಯ. ನಾ ಹೇಳುತ್ತೀನಿ ಕೇಳು. ನೀನಿನ್ನೂ ಹುಡುಗ, ಏನೂ ತಿಳಿಯದು. ನನಗೆ ಅಂದರೆ ನಲವತ್ತು ವರುಷ........

**ರಾಮಚಂದ್ರ :** ಆಗಲಪ್ಪ (ನಮ್ರತೆ, ಧೈರ್ಯಗಳಿಂದ 'ನಮಸ್ಕಾರ!' ಅಂದು ದೇಹವನ್ನು ಬಗ್ಗಿಸಿ, ತಲೆಯನ್ನು ವಾರೆಯಾಗಿಸಿ ಅಭಿನಯಿಸುತ್ತಾನೆ)

**ಗುಂಡಪ್ಪ :** ವಾಪಸು ಬರುವಾಗ ಹಿಂತಿರುಗಬೇಡ. ಹಾಗೇ ಹಿಂದ ಹಿಂದಕ್ಕೇ ಬರಬೇಕು—ಅವರಿಂದ ಕೊಂಚ ದೂರ; ಗೊತ್ತಾಯ್ತೇ ?

**ರಾಮಚಂದ್ರ :** ಹುಂ.

**ಗುಂಡಪ್ಪ :** ಅವರು ಏನಾದರೂ ಹಾಸ್ಯವೆಂದು ಮಾತನಾಡಿ ನಕ್ಕರೆ ನೀನು ಮೃದುವಾಗಿ ನಸುನಗೆಯನ್ನು ತೋರಿಸಬೇಕಷ್ಟೆ. ಗಟ್ಟಿಯಾಗಿ ನಗಲೂಬಾರದು, ಸುಮ್ಮನೆಯೂ ಇರಬಾರದು ತಿಳೀತೆ ?

**ರಾಮಚಂದ್ರ :** ಹುಂ.

**ಗುಂಡಪ್ಪ :** ಏನೋ ಸಿಟ್ಟಾದರೂ ಅಂತ ಇಟ್ಟುಕೋ. ಕಡೆಗೆ ಏನೋ ಒಂದು ಮಾತೂ ಆಡಿದರೂ ಅನ್ನು. ನೀನು ಏನಾದರೂ ಸಮಾಧಾನ ಹೇಳೋದಿಕ್ಕೆ ಹೋಗಬೇಡ. ಮರುಮಾತಂತು ಕೊಡಲೇ ಕೂಡದು. ಹಾಗೇನಾದರೂ ಮಾಡಿದರೆ ಕೆಲಸವೇ ಕೆಟ್ಟುಹೋಗುತ್ತೆ, ಗೊತಾಯ್ತೇ?

**ರಾಮಚಂದ್ರ :** ಹುಂ.

**ಗುಂಡಪ್ಪ :** ಯಾವ ಪ್ರಶ್ನೆಗೂ 'ಇಲ್ಲ' 'ಉಂಟು' ಎಂದು ಖಂಡಿತವಾಗಿ ಉತ್ತರಕೊಡಬೇಡ. 'ಹಾಗಿರಬೇಕು, ಹೀಗಿರಬಹುದು' ಅನ್ನುವ ರೀತಿಯೇ ಬಹಳ ಸಹಾಯಮಾಡುತ್ತದೆ. ಅವರೇನಾದರೂ ತಪ್ಪು ಹೇಳಿದರೆ, ಬುದ್ಧಿವಂತಿಕೆ ತೋರಿಸಿಕೊಳ್ಳೋದಿಕ್ಕೆ ಅವರನ್ನು ತಿದ್ದೋಕೆ ಹೊರಡಬೇಡ. ಅದು ಯಾವ ಅಧಿಕಾರಿಗೂ ಸರಿಬೀಳೋದಿಲ್ಲ. ಸುಮ್ಮನಿದ್ದುಬಿಡುವುದು ಸರ್ವಸೌಖ್ಯ.

**ರಾಮಚಂದ್ರ :** ಆಗಲಿ.

**ಗುಂಡಪ್ಪ :** ನೌಕರಿಯಲ್ಲಿ ತಪ್ಪುಮಾಡಿದರೂ ಪರವಾಯಿಲ್ಲ. ವಿರೋಧ ಮಾತ್ರ ಕಟ್ಟಿಕೊಳ್ಳಕೂಡದು. ಆಗಲಿ ಹೊತ್ತಾಗುತ್ತ ಬಂತು. (ಲಕ್ಷಮ್ಮನ ಕಡೆ ನೋಡಿ) ಎಲ್ಲಿ ಅಂದ್ರೆ, ಆ ಮಂತ್ರದ ದಾರ? (ಲಕ್ಷಮ್ಮನು ಹತ್ತಿ ಬುಟ್ಟಿಯಿಂದ ಕರಿಯ ದಾರವೊಂದನ್ನು ಕೊಡುತ್ತಾಳೆ. ಗುಂಡಪ್ಪನು ಅದನ್ನು ತೆಗೆದುಕೊಂಡು) ಇದು ಸರ್ವಸಿದ್ಧಿ ದಾರ. ಶಾಸ್ತ್ರಿಗಳು ಮಂತ್ರಿಸಿ ಕೊಟ್ಟಿದ್ದಾರೆ. (ಮಗನ ಕೈಗೆ ಕಟ್ಟುತ್ತಾನೆ. ಮತ್ತೆ ಲಕ್ಷಮ್ಮನನ್ನು ಉದ್ದೇಶಿಸಿ) ಇನ್ನು ಮಗು ಹೊರಡಬಹುದು ತಾನೆ? ದೇವರಿಗೆ ತುಪ್ಪದ ದೀಪ ಹಚ್ಚಿಸಿದ್ದೀಯಾ?

**ಲಕ್ಷಮ್ಮ :** ಬೆಳಿಗ್ಗೆಯಿಂದ ಆರಿಸೇ ಇಲ್ಲ.

**ಗುಂಡಪ್ಪ :** ಮಗು, ದೇವರಿಗೆ ನಮಸ್ಕಾರ ಮಾಡಿದ್ದೆಯಾ ಬೆಳಿಗ್ಗೆ?

**ರಾಮಚಂದ್ರ :** ಹುಂ. ಈಗ ಒಳಗಡೆ ಹೋಗಿದ್ದಾಗ ಮಾಡಿ ಬಂದೆ.

**ಗುಂಡಪ್ಪ :** ಸರಿ. ಮಗು, ನನಗೆ ನಮಸ್ಕಾರ ಮಾಡು. (ಗುಂಡಪ್ಪ ಕಾಲನ್ನು ಜೋಡಿಸಿ ನಿಂತುಕೊಳ್ಳುತ್ತಾನೆ. ರಾಮಚಂದ್ರನು ಬಗ್ಗಿ ಪಾದಗಳನ್ನು

ಮುಟ್ಟಿ ನಮಸ್ಕರಿಸುತ್ತಾನೆ. ಗುಂಡಪ್ಪನು ' ಶತಮಾನಂಭವತಿ...." ಎಂದು ಮೊದಲುಮಾಡಿ "ಸಕಲ ಇಷ್ಟಾರ್ಥಸಿದ್ಧಿರಸ್ತು" ಎಂದು ಕೊನೆಮಾಡುತ್ತಾನೆ) ಇನ್ನು ನಿಮ್ಮ ಅಮ್ಮನಿಗೆ. ಚೆನ್ನಾಗಿ ಆಶೀರ್ವಾದ ಮಾಡು ಅಂದ್ರೆ (ರಾಮಚಂದ್ರನು ತಾಯಿಗೂ ಅದೇ ರೀತಿ ನಮಸ್ಕಾರವನ್ನು ಮಾಡುತ್ತಾನೆ.)

**ಲಕ್ಷಮ್ಮ :** ಶ್ರೀ ರಾಮಚಂದ್ರ ಹೇಗೆ ತಂದೆತಾಯಿಯಲ್ಲಿ ಭಕ್ತಿಯಿಟ್ಟು ಮಾದರಿಯಾಗಿ ಸುಖವಾಗಿ ಬಾಳಿದನೋ ಹಾಗೇ ನೀನೂ ತಣ್ಣಗೆ ಬಾಳಪ್ಪ. ಕೆಲಸ ಸಿಕ್ಕಲಿ.

**ರಾಮಚಂದ್ರ** : ಅಪ್ಪ, ಅಮ್ಮ, ಹೋಗಿಬರುತ್ತೀನಿ

**ಗುಂಡಪ್ಪ ಲಕ್ಷಮ್ಮ :** ಒಳ್ಳೇದು, ಒಳ್ಳೇದು. (ಲಕ್ಷಮ್ಮ ದೃಷ್ಟಿ ನೆಟಿಗೆ ಮುರಿಯುತ್ತಾಳೆ)

**ಗುಂಡಪ್ಪ :** ಚೌಕದಿಂದ ಗಾಡಿ ಮಾಡಿಕೊಂಡು ಹೋಗು.

**ರಾಮಚಂದ್ರ** : ಅರಾರ ಕಚೇರಿ ಏನು ಬಹಳ ಹತ್ತಿರ....

**ಗುಂಡಪ್ಪ :** ನೋಡಿದೆಯ. ನಿನಗೆ ತಿಳಿಯೋದಿಲ್ಲ ಮಗು. ನಾ ಹೇಳಿದ ಹಾಗೆ ಮಾಡು. ನಿನಗೆ ಅಷ್ಟೆಲ್ಲ ಈ ಉರಿಬಿಸಿಲಿನಲ್ಲಿ ನಡೆಯೋ ಶಕ್ತಿ ಇಲ್ಲ. ನಾ ಹೇಳುತ್ತೀನಿ ಕೇಳು, ನಿನ್ನ ವಿಷಯ.

**ರಾಮಚಂದ್ರ** : ಆಗಲಿ, ಆಗಲಿ ಹಾಗೇ. (ರಾಮಚಂದ್ರನು ಹೊರಗೆ ಹೆಜ್ಜೆಯಿಡುತ್ತಾನೆ)

**ಗುಂಡಪ್ಪ :** ಜೋಪಾನ, ಎಷ್ಟೋ ಅಷ್ಟು ಮಾತು. ಹೆಚ್ಚು ಸ್ವತಂತ್ರಿಸಿ ಹೋಗಲೇಬೇಡ. ನೀನಿನ್ನೂ ಹುಡುಗ. ಲೌಕಿಕ ಇನ್ನೂ ತಿಳಿಯದು. ನಾ ಹೇಳಿದ್ದನ್ನೆಲ್ಲ ಮತ್ತೊಂದು ಸಲ ಜ್ಞಾಪಿಸಿಕೊ.

**ರಾಮಚಂದ್ರ** : ಹುಂ.- (ಹೋಗುವನು. ಕೊಂಚಕಾಲ ಮಾತಿಲ್ಲ)

**ಗುಂಡಪ್ಪ :** ಅಲ್ಲಿ ಏನು ಮಾಡುತ್ತಾನೋ ಏನೋ. ನಾನಂತೂ ವಾರದಿಂದ ಅವನಿಗೆ ದಿನ ರಾತ್ರಿ ಉಪದೇಶ ಮಾಡಿದ್ದೀನಿ.

**ಲಕ್ಷ್ಮಮ್ಮ :** ನಿಜ, ಏನೂ ಅರಿಯದ ಹುಡುಗ. ಇದಂತೂ ಮೊದಲನೇ ಅನುಭವ. ಏನು ಭಯಪಟ್ಟುಕೊಳ್ಳುತ್ತಾನೊ ಏನೋ. ಅಂತೂ ಪರವಾಯಿಲ್ಲ ಅಂತ ಕಾಣುತ್ತೆ. ನೀವು ಹೇಳಿದ್ದಕ್ಕೆ ಕೊಂಚವೂ ತಪ್ಪೋದಿಲ್ಲ.

**ಗುಂಡಪ್ಪ :** ಅವನನ್ನು ಒಬ್ಬನೇ ಯಾವುದಕ್ಕೆ ಕಳುಹಿಸೋದಿಕ್ಕೂ ನನಗೆ ಧೈರ್ಯವಿಲ್ಲ. ಪಾಪ! ಏನು ಕಂಡಿದಾನೆ ಮಗು? ಹುಂ. ಏನಾದರೂ ಆಗಲಿ.

**ಲಕ್ಷ್ಮಮ್ಮ :** ಯೋಚಿಸಬೇಡಿ. ಮಗು ಕೆಲಸ ಸಂಪಾದಿಸಿಕೊಂಡೇ ಬರುತ್ತಾನೆ. ನೋಡುತ್ತಾ ಇರಿ.

**ಗುಂಡಪ್ಪ :** ಆದರೆ ನಾನೂ ಅವನ ಜತೆ ಹೋಗೋಕೆ ಆಗೋ ಹಾಗಿದ್ದರೆ.... ಪಾಪ! ಏನೇನೂ ತಿಳಿವಳಿಕೆ ಸಾಲದು....ಹುಂ.... ನನಗೆ ಮನಸ್ಸೆಲ್ಲ ಅಲ್ಲೇ ಇದೆ ಅಂದ್ರೆ....ಹೇಗಾದರೂ ಆಗಲಿ, ನಾನೂ ಹೋಗಿ ಸಾಧ್ಯವಾದಷ್ಟು ಅವನಿಗೆ ಹತ್ತಿರ ಇದ್ದು ಸಮಯಕ್ಕೆ ಸರಿಯಾಗಿ ಸಲಹೆಯಾದರೂ ಕೊಡಬೇಕು. ಅಲ್ಲಿ ಗುಮಾಸ್ತರು ಅವರನ್ನು ಗೊತ್ತು ಮಾಡಿಕೊಂಡು ಏನಾದರೂ ಒಳಗುಟ್ಟು ಇದ್ದರೆ ತಿಳಿಯಬೇಕು. ಸುಮ್ಮನೆ ಅದೃಷ್ಟಕ್ಕೆ, ಮಗುಶಕ್ತಿಗೇ ಬಿಡೋ ವಿಷಯ ಅಲ್ಲ. ಎರಡು ವರ್ಷದ ನಿರುದ್ಯೋಗ ಈಗಲಾದರೂ ತೀರಲೇಬೇಕು. ಹುಂ, ಹೊರಟುಬಿಡುತ್ತೀನಿ. ಈ ಬಟ್ಟೆ ಹಾಕಿಕೊಳ್ಳೋದಿಕ್ಕೆ ಅಷ್ಟು ಹೊತ್ತು ಹೋಗುತ್ತಲ್ಲ.

**ಲಕ್ಷ್ಮಮ್ಮ :** ಹಾಗೇ ಮಾಡಿ. ಮಗೂಗೆ ಬಿಡೋಕಿಂತ ನೀವೇ ಹೋದರೆ ಎಷ್ಟಾದರೂ ವಾಸಿ

— ತೆರೆ —

## ದೃಶ್ಯ ೨

ಸ್ಥಳ : ಅಠಾರಾ ಕಚೇರಿಯ ಮುಂದಿನ ದಾರಿಯಲ್ಲಿ ಗುಂಡಪ್ಪನು ನಡೆಯುತ್ತಿರುತ್ತಾನೆ. ಕಚ್ಚೆಪಂಚೆ ಕ್ಲೋಸ್ ಕಾಲರು ಕೋಟು, ಹಳೆಯ ಜರತಾರಿ ಪೇಟ. ಕಾಲಿಗೆ ಏನೂ ಇಲ್ಲ. ಎದಿರುಗಡೆಯಿಂದ ರಾಮಚಂದ್ರನ ಪ್ರವೇಶ. ಅವನು ಯೋಚನೆಯಲ್ಲಿ ಮುಳುಗಿ ಕತ್ತೆತ್ತದೆಯೇ ನಡೆಯುತ್ತಾನೆ.

(ಹೊತ್ತು : ಸುಮಾರು ಹನ್ನೆರಡೂವರೆ ಗಂಟೆ ಮಧ್ಯಾಹ್ನ)

**ಗುಂಡಪ್ಪ**: ( ರಾಮಚಂದ್ರನನ್ನು ನೋಡಿ ) ಮಗು ! ಮಗು ! ( ಆತುರದಿಂದ ಬೈಸಿಕಲ್ಲೊಂದಕ್ಕೆ ಡಿಕ್ಕಿ ಹೊಡೆಯುವುದನ್ನು ಸ್ವಲ್ಪದರಲ್ಲಿ ತಪ್ಪಿಸಿಕೊಂಡು ಹಾದಿಯನ್ನು ಹಾಯ್ದು ಎದುರಿನಂಚಿಗೆ ಹಾರಿಕೊಂಡು ಮಗನ ಹತ್ತಿರಕ್ಕೆ ಹೋಗುತ್ತಾನೆ)

**ರಾಮಚಂದ್ರ** : ( ಬೆಚ್ಚಿ, ಕತ್ತನ್ನು ಮೇಲೆತ್ತಿ ಗುಂಡಪ್ಪನನ್ನು ಕಂಡು ) ಇದೇನಪ್ಪ!

**ಗುಂಡಪ್ಪ** : ಆಗಿಹೋಯ್ತೆ ? ಏನಾಯ್ತು ? ನಿನ್ನ ಒಪ್ಪಿಕೊಂಡರೆ ? ಕೆಲಸ ಸಿಕ್ಕಿತೇ ?

**ರಾಮಚಂದ್ರ** : ( ಅನುಮಾನಿಸುತ್ತ ) ಇ....ಲ್ಲ

**ಗುಂಡಪ್ಪ** : ಹ ! ಯಾಕೆ ? ಏನಾಯ್ತು ? ಸಾಹೇಬರು ಏನು ಕೇಳಿದರು ?

**ರಾಮಚಂದ್ರ** : ಅವರು ಏನನ್ನೂ ಕೇಳಲೇ ಇಲ್ಲ.

**ಗುಂಡಪ್ಪ** : ಕೇಳಲೇ ಇಲ್ಲ ! ಮತ್ತೆ—ನೋಡಿದರೋ ?

**ರಾಮಚಂದ್ರ** : ಕತ್ತೆತ್ತಿ ಸರಿಯಾಗಿ ನೋಡಲೂ ಇಲ್ಲ.

**ಗುಂಡಪ್ಪ** : ನೋಡಲೂ ಇಲ್ಲ ! ಮತ್ತೆ–ಕರೆಸಿದ್ದು ಯಾಕೆ ? ಇದೆಲ್ಲ ಏನು ? ಬೇಗ ಹೇಳು.

**ರಾಮಚಂದ್ರ** : ಸುಮ್ಮನೆ ಹೆಡ್ ಗುಮಾಸ್ತೆಯ ಬಳಿಗೆ ಕಳುಹಿಸಿದರು.

**ಗುಂಡಪ್ಪ** : (ಸ್ವಲ್ಪ ಸಮಾಧಾನದಿಂದ ತಲೆದೂಗುತ್ತ) ಕಳುಹಿಸಿದರೋ. ಸರಿ. ಮತ್ತೆ ಇನ್ನೇನು. ಎಲ್ಲೆಲ್ಲೂ ಹಾಗೇ. ಗುಮಾಸ್ತರು ಅಂದರೆ ಏನು

ಸಾಮಾನ್ಯ ಅಲ್ಲ. ನನಗೆ ಚೆನ್ನಾಗಿ ಗೊತ್ತು. ಗುಡಿಯಲ್ಲಿ ಪೂಜಾರಿ ಹೇಗೋ ಹಾಗೆ. ನಾನು ನೌಕರಿಯಲ್ಲಿ ಇರುವವರೆಗೂ ನನ್ನ ನೋಡದೆ ನಮ್ಮ ಸಾಹೇಬರ ಬಳಿಗೆ ಹೋಗೋಣ ಅಂದರೆ ಏನು. ಎಲ್ಲರಿಗೂ ಗೊತ್ತು ಹಾಗೆ ಮಾಡಿದರೆ ಏನು ಪರಿಣಾಮ ಅಂತ. ಸಾಹೇಬರಿಗೆ ಅಧಿಕಾರಿ ಅನ್ನೋ ಹೆಸರು ಮಾತ್ರ. ರುಜೂನೂ ಒಂದು ಹಾಕಬಹುದು, ಸಂಬಳಾನೂ ತಗೋಬಹುದು ಅಷ್ಟೆ. ನಿಜವಾದ ಅಧಿಕಾರ ಇರೋದು ಗುಮಾಸ್ತರಲ್ಲೆ. ಏನೋ ಸಿಂಹಾಸನದ ಹಿಂದಿನ ಶಕ್ತಿ ಅಂತಾರಲ್ಲ ಹಾಗೆ. ಪಾಪ! ಸಾಹೇಬರುಗಳಿಗೆ ಏನು ಗೊತ್ತು ಈ ಕಾಲದಲ್ಲಿ. ಗುಮಾಸ್ತರು ಹೇಳಿದ್ದು ಅವರು ಮಾಡಿದ್ದು ....ಹಂ. ನಾನೇನೋ ಹೇಳುತ್ತಾ ಇದ್ದೀನಿ ಇರಲಿ. ಗುಮಾಸ್ತೆ ಏನು ಹೇಳಿದರು ?

**ರಾಮಚಂದ್ರ** : ಕೆಲಸ ಬೇಕಾದರೆ ಐನೂರು ರೂಪಾಯಿ ಲಂಚ....

**ಗುಂಡಪ್ಪ :** ಹುಶ್! ಹುಶ್! ಲಂಚ ಅನ್ನಬೇಡ. ಸಂಭಾವನೆ. ಸಂಭಾವನೆ ತಿಳೀತೆ? ಅದು ಲೌಕಿಕ, ಗೊತ್ತಾಯ್ತೆ ?........ಐನೂರೋ ? ಗುಮಾಸ್ತರಿಗೆ ಇನ್ನೂರು ಸಾಹೇಬರಿಗೆ ಮುನ್ನೂರು, ಇಲ್ಲವೆ ಗುಮಾಸ್ತರಿಗೇ ಮುನ್ನೂರು ಸಾಹೇಬರಿಗೆ ಇನ್ನೂರು........ಇರಬಹುದು.

**ರಾಮಚಂದ್ರ :** ಏನಪ್ಪ, ಇದೆಲ್ಲ ಹೇಸಿಕೆ ವಿಚಾರ ಅಲ್ಲವೆ ?

**ಗುಂಡಪ್ಪ :** ಆಂ! ಏನು? ಏನಂದೆ? ಅಪ್ಪ, ನಿನಗೇನು ಗೊತ್ತು ಪ್ರಪಂಚದ ವಿಚಾರ? ಇನ್ನೂ ಕಣ್ಣು ತೆಗೀತಾ ಇದ್ದೀಯೆ. ಎಲ್ಲೆಲ್ಲೂ ಹೀಗಲ್ಲದೆ ಬೇರೆ ದಾರಿಯೇ ಇಲ್ಲ. ಇದೇ ರಾಜಮಾರ್ಗ. ಎಲ್ಲರೂ ಹಾಗೇ ಮಾಡುತ್ತಾರೆ, ಆದುದರಿಂದ ಅದಕ್ಕೆ ಅಪಮಾನ ಏನೂ ತಗಲೋದಿಲ್ಲ. ಅವಕ್ಕೆಲ್ಲ ಹಿಂಜರಿಯಬಾರದು. ಯಾವಾಗ ಯಾವ ನೀತಿಯೋ ಅದನ್ನೇ ಅನುಸರಿಸಬೇಕು ಆದರಿಂದ ನಾವೂ ಲಾಭಪಡೆಯಬಹುದು. ಇಲ್ಲದಿದ್ದರೆ ಸಾವು ಬರಿ ಬಲಿ ಆಗುತ್ತೇವೆ ಅಷ್ಟೆ, ಸರಿ. ನೀನು ಏನು ಉತ್ತರ ಹೇಳಿದೆ?

**ರಾಮಚಂದ್ರ :** ಕೆಲಸ ಬೇಡ ಅಂತ....

**ಗುಂಡಪ್ಪ :** ಅಯ್ಯೋ, ಅವಿವೇಕ ಆಯ್ತು !

**ರಾಮಚಂದ್ರ** : ಇಲ್ಲ. ಹಾಗೆ ಹೇಳಬೇಕು ಅಂತ ಅನ್ನಿಸಿತು ಮೊದಲು. ಆದರೆ....

**ಗುಂಡಪ್ಪ** : ಆದರೆ ?

**ರಾಮಚಂದ್ರ** : ನೀನು ಹೇಳಿದ್ದೆಯಲ್ಲ ' ಯಾವುದಕ್ಕೂ ಖಂಡಿತವಾಗಿ ಉತ್ತರ ಹೇಳಬಾರದು ' ಅಂತ...

**ಗುಂಡಪ್ಪ** : ಭಲ ! ಭಲ ! ಒಳ್ಳೇದು ಮಾಡಿದೆ. ನೋಡಿದೆಯಾ ನನ್ನ ಬುದ್ಧಿವಾದ ?....ಹುಂ....ಏನಂದೆ ?

**ರಾಮಚಂದ್ರ** : ನಮ್ಮ ತಂದೆ ಕೇಳಿ ನಾಳೆ ಹೇಳುತ್ತೀನಿ ಅಂತ.

**ಗುಂಡಪ್ಪ** : (ಮಗನ ಬೆನ್ನನ್ನು ತಟ್ಟುತ್ತ) ಸೊಗಸಾಯಿತು. ಸೊಗಸಾಯಿತು. ಅದೇ ಹೇಳಬೇಕಾಗಿತ್ತು. ಅನುಮಾನ ಆದಾಗೆಲ್ಲ ಹಾಗೆ ಹೇಳಬೇಕು. ನಮ್ಮನ್ನು ಕೇಳದೆ ಯಾವುದನ್ನೂ ಮಾಡೋಕೆ ಹೋಗಬೇಡ.... ಅದು ಸರಿ. ಈಗ ಐನೂರು ರೂಪಾಯಿ ಹೊಂದಿಸೋದು ಹೇಗೆ ಅಂತ ? (ತುಟಿಯ ಮೇಲೆ ಬೆರಳನ್ನಿಟ್ಟುಕೊಂಡು ಮೇಲೆ ನೋಡುತ್ತ ಯೋಚಿಸುತ್ತಾನೆ)

**ರಾಮಚಂದ್ರ** : ಹಾಗಾದರೆ ಅವನ್ನ ಕೊಡೋದೇ ಸರಿಯೆ ?

**ಗುಂಡಪ್ಪ** : ಇನ್ನೇನು ? ಇನ್ನೇನು ? ಅನುಮಾನ ಏನಿದೆ. ಈ ಕಾಲದಲ್ಲಿ....ಓ....ಸಂಬಳ ಎಷ್ಟಂತೆ ?

**ರಾಮಚಂದ್ರ** : ಮೂವತ್ತು.

**ಗುಂಡಪ್ಪ** : ಅಷ್ಟು ಯಾರು ಕೊಡುತ್ತಾರೆ—ಅಂಗಲಾಚಿದರೂ. ಬೀಜ ಬಿತ್ತದೇ ಹಣ್ಣು ಎಲ್ಲಿಂದ ಬರುತ್ತೆ ?

**ರಾಮಚಂದ್ರ** : ಅಪ್ಪ, ನನಗೇನೋ....(ಉದ್ಗಾರ ತೆಗೆಯುತ್ತಾನೆ)

**ಗುಂಡಪ್ಪ** : ಇರಲಿ ಬಿಡು, ಸುಮ್ಮನೆ ಗೊಣಗುಟ್ಟಬೇಡ. ಇದರ ಬೆಲೆ ನೀನು ತಿಳಿಯೋದಿಕ್ಕೆ ಇನ್ನೂ ಬಹಳ ಕಾಲ ಬೇಕಾಗುತ್ತೆ. ಆ ಮೇಲೆ ನಿನಗೇ ಗೊತ್ತಾಗುತ್ತೆ ನಾನು ಹೇಳಿದ್ದು ಸರಿಯೋ ತಪ್ಪೋ. ಈಗ ನಾನು ಹೇಳಿದ ಹಾಗೆ ನಡೆದುಕೊ. ಬಾಕಿ ಹುಡುಗರ ಹಾಗೆ ಮುಸುಗುಟ್ಟಬೇಡ.

ಅದು ವಿವೇಕವೂ ಅಲ್ಲ, ವಿಧೇಯತೆಯೂ ಅಲ್ಲ. ಈ ವಯಸ್ಸಿನಲ್ಲಿ ಎಲ್ಲ ನಮ್ಮ ಹಾಗೆ ತಿಳಿದವರ ಮೇಲೆ ಭಾರ ಹಾಕಬೇಕು. (ರಾಮಚಂದ್ರನು ತಲೆ ತಗ್ಗಿಸಿ ಸುಮ್ಮನಾಗುವನು) ಅದೆಲ್ಲ ಸರಿ. ಈಗ ಆ ದುಡ್ಡನ್ನು ಎಲ್ಲಿಂದ ತರೋದು ಅಂತ ಯೋಚನೆ ಅಷ್ಟೆ. ನಾಳೆನೊಳಗೇ ಆಗಬೇಕು....ಸಾಲ ಹುಟ್ಟೋದು ಬಹಳ ಕಷ್ಟ. ನನಗೆ ತಿಳಿದೋರು ಯಾರೂ....ಉಹುಂ. ಮನೆ ಮೇಲೆ ಮೂರು ಕಾಸೂ ಹುಟ್ಟುವ ಹಾಗಿಲ್ಲ—ಆಗಲೇ ಭೋಗ್ಯವಾಗಿ ಹೋಗಿದೆ. ಮತ್ತೆ....

**ರಾಮಚಂದ್ರ** : ಅಪ್ಪ, ಇಷ್ಟೆಲ್ಲ ಕಷ್ಟ ಪಟ್ಟುಕೊಂಡು....ಸಾಲ....
....ಶೂಲ....

**ಗುಂಡಪ್ಪ** : ಅದೆಲ್ಲ ಇರಲಿ, ನನಗೆ ಬಿಡು ಮಗು. ನಿನಗೆ ಯಾಕೆ ಅದರ ಚಿಂತೆ? ಒಂದು ಕಷ್ಟ ಸಾಗಿಸಬೇಕಾದರೆ ಇನ್ನೊಂದನ್ನು ತರಲೇ ಬೇಕು. ಸಣ್ಣದರಿಂದ ದೊಡ್ಡದನ್ನು ಮೀಟಬೇಕು ಅಷ್ಟೆ.. ಅಷ್ಟು ಬುದ್ಧಿ ವಂತಿಕೆ ಮಾತ್ರ ಸಾಧ್ಯ ಜೀವನದಲ್ಲಿ....ಸರಿ ಇನ್ನೇನೂ ಗತಿಯಿಲ್ಲ—ಆ ಮಾರ್ವಾಡಿ ಹತ್ತಿರಕ್ಕೇ ಹೋಗಿ ನೋಡಬೇಕು. ಅಬ್ಬಬ್ಬ, ಈ ಹಾಳು ಮಾರ್ವಾಡಿಗಳು! ಆದರೆ ಮಾಡೋದೇನು? ಇನ್ನು ಯಾರು ಕೊಡುತ್ತಾರೆ? ಬಿಟ್ಟರೆ, ರೈಲು ಬಂದಾಗ ನಿದ್ದೆ ಹೋದ ಹಾಗೆ ಆಗುತ್ತೆ....ಸರಿ! 'ಧೈರ್ಯಂ ಸರ್ವತ್ರ ಸಾಧನಂ' ದೇವರೇ ಗತಿ. ಇದಕ್ಕೆ ಬೇರೆ ಉಪಾಯ ಏನಿದೆ? ಹುಂ! ಬಾ, ಹೋಗೋಣ ಅವನಲ್ಲಿಗೆ.

**ರಾಮಚಂದ್ರ** : ಏನು, ನಾನೂ?

**ರಾಮಚಂದ್ರ** : ಹುಂ. ಅಲ್ಲದೆ? ನಿನಗೆ ಮೆಜಾರಿಟೆ ಬಂದಿದೆ—ಗೊತ್ತೆ? ಮಾರ್ವಾಡಿ ಏನೇನು ವಿಚಾರಿಸುತ್ತಾನೊ, ಏನೇನು ಷರತ್ತು ಹಾಕುತ್ತಾನೋ ಹೇಗೊ. ಅಲ್ಲದೆ ನಿನ್ನ ಬಟ್ಟೆ ಬರೆ ಎಲ್ಲ ನೋಡಿ, ನೌಕರಿ ವಿಷಯ ಕೇಳಿ ಅವನು ಸಾಲ ಕೊಡೋದಿಕ್ಕೆ ಒಪ್ಪಿದರೆ ಒಪ್ಪಬಹುದು. ನೀನೂ ಇದಕ್ಕೆಲ್ಲ ಕೈಹಾಕಬೇಕಪ್ಪ ಮಗು—ಇನ್ನು ಮೇಲೆ. ಆದರೆ ನೀನೇ ಮಾಡೋಡಿಕ್ಕೆ ಹೋಗದೆ ಸುಮ್ಮನೆ ನಾನು ಹೇಳಿದಂತೆ ಮಾಡಬೇಕು ಅಷ್ಟೆ—ವಿಷಯವೆಲ್ಲ ನಿನಗೂ ಗೊತ್ತಾಗಿದೆ ಅಂತ ನನಗೆ ಭರವಸೆ ಬರುವವರೆಗೆ.

ಕೆಲಸ ಒಂದು ಸಿಗೋ ಹಾಗಿದೆಯಲ್ಲ, ಏನಾದರೂ ಆಗಲಿ. ಬಾ, ಹೋಗೋಣ. ತಡ ಯಾಕೆ? ಹ! ಅಲ್ಲಿ ನೀನು ಏನೂ ಮಾತಾಡಬೇಡ. ಕೆಲಸ ಕೆಟ್ಟು ಹೋದೀತು....ನನ್ನ ಮಾತಿಗೆ ಸುಮ್ಮನೆ ಸಮ್ಮತಿ ಸೂಚಿಸ ಬೇಕು ಅಷ್ಟೆ. ಬಾಕಿಯುದನ್ನೆಲ್ಲ ನಾನು ನಡೆಸಿಕೊಂಡು ಹೋಗುತ್ತೀನಿ.

(ಗುಂಡಪ್ಪನು ಮಗನ ಕೈಹಿಡಿದುಕೊಂಡು ಮುಂದುವರಿಯುತ್ತಾನೆ)

— ತೆರೆ —

## ದೃಶ್ಯ ೩

[ಸ್ಥಳ: ಗುಂಡಪ್ಪನ ಮನೆಯ ಅಡಿಗೆಮನೆ. ಲಕ್ಷಮ್ಮನು ಕಾಫಿ ಕಾಯಿಸುತ್ತಿರುತ್ತಾಳೆ. ರಾಮಚಂದ್ರನು ಪಟ್ಟೆಪಂಚೆಯನ್ನುಟ್ಟು, ಷರಟನ್ನು ಹಾಕಿಕೊಂಡು ಗೋಡೆಯ ಅಂಚಿನಲ್ಲಿ ನಿಂತುಕೊಂಡು ಮಾತನಾಡುತ್ತಾನೆ.]

ಕಾಲ: ನಂಜೆ ಐದೂವರೆ ಗಂಟೆ.

**ರಾಮಚಂದ್ರ**: (ಆವೇಶದಿಂದ) ಅದೆಂಥ ಹಾಳು ಮಾರ್ವಾಡಿ, ಅಮ್ಮ. ಬರೆಯೋದು ನೇಕಡ ಒಂಬತ್ತು, ಲೆಕ್ಕ ಹಾಕುವುದು ಪದಿನೈದರ ಹಾಗೆ.

**ಲಕ್ಷಮ್ಮ**: ಹಾಗೇ ಮಗು. ಸಾಲಕ್ಕೆ ಕೈ ನೀಡಿದರೆ ಬರೆದ ಕರಾರಿಗೆ ಒಪ್ಪಬೇಕು. ನಿಮ್ಮ ತಂದೆ ಎಲ್ಲ ಯೋಚಿಸಿಕೊಂಡೇ, ನಿರ್ವಾಹವಿಲ್ಲದೆ ಒಪ್ಪಿಕೊಂಡಿದ್ದಾರೆ. ಅವರಿಗೆ ಎಲ್ಲ ಗೊತ್ತು. ತುಂಬ ಅನುಭವ.

**ರಾಮಚಂದ್ರ**: ಇರಬಹುದು, ಆದರೆ ಈ ಸಾಲ ಎಷ್ಟು ಅನ್ಯಾಯ!

**ಲಕ್ಷಮ್ಮ**: ಅನ್ಯಾಯ, ನ್ಯಾಯ ಅನ್ನೋದು ಏನು ಮಗು? ಯಾರಾದರೂ ನಮಗೆ ಕೇಡು ಮಾಡಿದರೆ ಅದು ಅನ್ಯಾಯ. ನಾವು ಯಾರಿಗಾದರೂ ಕೇಡು ಮಾಡಿದರೆ ಅದು ನ್ಯಾಯ ಅಷ್ಟೆ.

**ರಾಮುಚಂದ್ರ :** ಇನ್ನೂ ಏನಮ್ಮ. ಆಗಲೇ ಒಂದು ವರ್ಷದ ಬಡ್ಡಿ ಸಹ ಕಳೆದುಕೊಂಡು ಕೊಟ್ಟೆ.

**ಲಕ್ಷ್ಮಮ್ಮ :** ಹುಂ! ಅದೇನು ಮಾಮೂಲು ಇರಬೇಕು.

**ರಾಮುಚಂದ್ರ :** ಏನು ಮಾಮೂಲೋ ನಾನು ಕಾಣೆ. ಇದಕ್ಕಾಗಿ ಐನೂರು ತರಬೇಕಾದ ಕಡೆ ಆರನೂರು ತೆಗೆಯಬೇಕಾಯ್ತು. ಕೈಗೆ ಬಂದದ್ದು ಐನೂರು ಹತ್ತು.

**ಲಕ್ಷ್ಮಮ್ಮ :** ಹೀಗಲ್ಲದೆ ಮಾರ್ವಾಡಿಗಳು ಕೋಟ್ಯಾಧೀಶ್ವರರಾಗುತ್ತಾರೆಯೆ? ಹತ್ತು ಜನದ್ದನ್ನು ಬಾಚಿಹಾಕಿಕೊಂಡರೇ ಹಣವಂತನಾಗೋದು.

**ರಾಮುಚಂದ್ರ :** ಇದು ಲೆಕ್ಕಾಚಾರ ಅಲ್ಲ. ಶುದ್ಧ ದರೋಡೆ.

**ಲಕ್ಷ್ಮಮ್ಮ :** ಹೂಂ ಕಣಪ್ಪ, ಈಗ ರಾಜ್ಯವೇ ದರೋಡೆಯೋರದ್ದು. ಇನ್ನು ಯಾರೇನು ಮಾಡೋಕೆ ಸಾಧ್ಯ? ಸುಮ್ಮನೆ ಅನುಭವಿಸೋದು. ಇದೆಲ್ಲ ನಿನಗೆ ಇನ್ನೂ ತಲೆಗೆ ಹತ್ತಿಲ್ಲ. ಇನ್ನೂ ಹುಡುಗತನ. ನಿಮ್ಮ ತಂದೆ ಕೇಳು. ಅವರಿಗೆ ಒಳಗುಟ್ಟೆಲ್ಲ ಗೊತ್ತು.

**ರಾಮುಚಂದ್ರ :** ಇನ್ನೊ ಏನು ಷರತ್ತು ಅಂತಿ?

**ಲಕ್ಷ್ಮಮ್ಮ :** ಏನು ?

**ರಾಮುಚಂದ್ರ :** ವರ್ಷ ಕಳೆದ ಕೂಡಲೆ ಕೊಡದೇ ಹೋದರೆ ದಾವಾ ಮಾಡಿ ಕೋರ್ಟಿಗೆ ಎಳೀತಾನಂತೆ.

**ಲಕ್ಷ್ಮಮ್ಮ :** ಅದೇನು ಆಗೋದೆ ಎಲ್ಲೆಲ್ಲೂ; ಸಾಲ ತೀರಿಸದೆ ಹೋದಾಗ.

**ರಾಮುಚಂದ್ರ :** ಇದಕ್ಕೆಲ್ಲ ಸಿಕ್ಕೋ ಹಾಗಿದ್ದೂ ಅಪ್ಪ ಬರೆದು ಕೊಟ್ಟನಲ್ಲ.

**ಲಕ್ಷ್ಮಮ್ಮ :** ಇನ್ನೇನು ಮಾಡುತ್ತಾರೆ, ಗತಿಯಿಲ್ಲ. ಅಂತೂ ಅಷ್ಟಕೆ ಹೋಗೋಕೆ ಬಿಡೋಯಿಲ್ಲ ಅನ್ನು ಅವರು. ಅಷ್ಟರಲ್ಲೇ ಏನಾದರೂ ಮಾಡುತ್ತಾರೆ. ಬಹಳ ಬದ್ಧಿವಂತರು. ಇಲ್ಲಿಯವರೆಗಾಗಲೇ ಎಷ್ಟೋ

ಗಂಡ ದಿಂದ ನುಣಚಿಕೊಂಡಿದ್ದಾರೆ. ನೌಕರಿಯಲ್ಲಿರೋವರೆಗೂ ದಿನ ಬೆಳಗಾದರೆ ಏನಾದರೂ ಒಂದು ಫಜೀತಿ ಇರದೆ ಇರುತ್ತಲೇ ಇರಲಿಲ್ಲ. ಎಲ್ಲಾನೂ ಹೇಗೊ ಅಂತೂ ನಿಭಾಯಿಸಿಕೊಂಡು ಬಂದರು. ಎಷ್ಟೋ ಸಲ ಕೆಲಸವೇ ಹೋಗಿ ಜೈಲಿಗೇ ಹೋಗುವವರೆಗೂ ಬಂದುಬಿಟ್ಟಿತ್ತು. ಆದರೆ ಅವರೇ ಜಗ್ಗಿದೋರು ? ಹಾಗೂ ಹೀಗೂ ಮಾಡಿ, ಅವರು ಇವರಿಗೆ ಹೇಳಿ, ಎಲ್ಲರನ್ನೂ ಹೇಗೆ ಹೇಗೋ ಸರಿಮಾಡಿಕೊಂಡು ಪ್ರತಿಯೊಂದನ್ನೂ ಗೆದ್ದರು. ಬಿಡಲಿಲ್ಲ. ನೌಕರಿಯಲ್ಲಿ ಬಡ್ತಿ ಒಂದಾಗಲಿಲ್ಲ. ಅದಕ್ಕೇನು ಮಾಡೋದು. ಅದೆಲ್ಲ ನಮ್ಮ ಅದೃಷ್ಟ. ಹಾಗೆ ಅಂತ ಮೇಲಿನ ಸಂಪಾದನೆ ಗೇನು ಕಡಿಮೆ ಇರಲಿಲ್ಲ. ಹಾಗಿಲ್ಲದೆ ಇದ್ದರೆ ನಿನ್ನ ಬಿ. ಎ. ವರೆಗೂ ಓದಿಸೋಕೆ ಆ ಸಣ್ಣ ಸಂಬಳದಲ್ಲಿ ಸಾಕಾಗುತ್ತಾ ಇತ್ತೆ ? ಪಾಪ, ಪಾಪ ! ದುಡಿಮೆ, ದಾಕ್ಷಿಕದಲ್ಲಿ ಎತ್ತಿದ ಕೈ. ಸಾಹೇಬರಿಗಂತು ಅಚ್ಚುಮೆಚ್ಚು– ಎಲ್ಲೆಲ್ಲಿ ಹೋದರೂ.

**ರಾಮುಚಂದ್ರ** : ( ಅನುಮಾನದಿಂದ ) ಅದೇನೊ ಹೇಗೊ. ಅಪ್ಪ ಇದ ರಲ್ಲಿ ಏನು ಮಾಡುತ್ತಾನೋ ಏನೋ. ಅಂತೂ ಈ ಹಾಳು ನಾಲಕ್ಕೆ ಕೈ ಹಾಕುವ ಬದಲು ಕೆಲಸವೇ ಬೇಡ ಅನ್ನಿಸುತ್ತಿತ್ತು ನನಗೆ. ಈಗಲೂ....

**ಲಕ್ಷ್ಮಮ್ಮ** : ಅದನ್ನು ನಿಮ್ಮ ತಂದೆಗೆ ಬಿಡು. ಅವರಿಗಿಂತ ನಮಗೆ ಏನು ಗೊತ್ತು ? ಎಲ್ಲ ಒಳ್ಳೇದಕ್ಕೇ ಮಾಡಿದಾರೆ. ಮುಂದೆ ಗೊತಾಗುತ್ತೆ.

**ರಾಮುಚಂದ್ರ** : ಆ ಪತ್ರಕ್ಕೆ ನನ್ನ ರುಜು ಬೇರೆ ಮಾಡಿಸಿಕೊಂಡಿದ್ದಾನೆ ಮಾರ್ವಾಡಿ.

**ಲಕ್ಷ್ಮಮ್ಮ** : ಹುಂ. ಇನ್ನೇನು ನೀನೂ ನಿದಾನವಾಗಿ ಪ್ರಪಂಚಕ್ಕೆ ಇಳೀತಾ ಇಲ್ಲವೆ ? ಎಲ್ಲ ಒಂದೊಂದಾಗಿ ಅನುಭವ. ಈಗ ಇರೋ ಹಾಗೇ ಇದ್ದರೆ, ನಾಳೆ ಸಂಸಾರ ಹೇಗೆ ನಿಭಾಯಿಸೋದು ? ಕಷ್ಟ, ಸುಖ ಎಲ್ಲ ಕೊಂಚ ಕೊಂಚ ತಿಳಿದುಕೊಂಡಿರಬೇಕು. ಇದೇ ಮೊದಲನೆಯ ಪಾಠ ಅನ್ನು. ಇನ್ನೂ ಬೇಕಾದಷ್ಟಿವೆ. ನಿನ್ನ ಕೆಲಸ ಅಷ್ಟನ್ನು ಕಲಿಸುತ್ತೆ. ನಿಮ್ಮ ತಂದೆಯಂತೂ ಯಾವ ಸಂದರ್ಭದಲ್ಲೂ ನಿನಗೆ ಎಲ್ಲವನ್ನೂ ತಿಳಿಸಿ ನಡೆಸಿಕೊಡುತ್ತಾರೆ. ಧೈರ್ಯವಾಗಿರು, ಭಯಪಡಬೇಡ.

**ರಾಮಚಂದ್ರ** : ಏನಾದರೂ ಇದೊಂದು ಇಲ್ಲದೇ ಇದ್ದಿದ್ದರೆ........

**ಲಕ್ಷ್ಮಮ್ಮ** : ಎಲ್ಲ ನಮ್ಮ ಇಷ್ಟದಂತೆ ಆಗುತ್ತೆಯೆ ? ಹಾಗಾದರೆ ನಮ್ಮನ್ನು ಹಿಡಿಯೋರು ಯಾರು? ಎಲ್ಲ ಆ ಹಣೇಬರಹದ ಹಾಗೆ ಆಗಿ ಹೋಗುತ್ತೆ.

**ರಾಮಚಂದ್ರ** : ಹುಂ. ನನಗೇನು, ಅಪ್ಪ ಇರೋ ವಾಗ ಅನ್ನು. ನಾನೇ ಆಗಿದ್ದರೆ ಮಾತ್ರ ... (ಹೊರಗೆ ಕಾಲಿನ ಶಬ್ದ. ರಾಮಚಂದ್ರನು ತಟ್ಟನೆ ಮಾತನ್ನು ನಿಲ್ಲಿಸಿ) ಏನು ಅಪ್ಪ ಎದ್ದನೋ ? (ಹೊರಕ್ಕೆ ಬಗ್ಗಿ ನೋಡಿ) ಓ, ಅಂಚೆಯವನು ಕಾಗದ ಹಾಕಿ ಹೋದ. (ಹೊರಕ್ಕೆ ಹೋಗಿ ಒಂದು ಕಾಗದವನ್ನು ಹಿಡಿದುಕೊಂಡು ಬಂದು) ಅಮ್ಮ, ಇದು ಬೊಂಬಾಯಿನಿಂದ ಬಂದಿದೆ ! ನಾನು ಒಂದು ಕೆಲಸಕ್ಕೆ ಅರ್ಜಿ ಹಾಕಿದ್ದೆ. ಅದಕ್ಕೆ ಉತ್ತರವೋ ಅಥವಾ ನನ್ನ ಸ್ನೇಹಿತನ....(ಆತುರದಿಂದ ಕವರನ್ನು ಹರಿದು ನೋಡಿ, ಸಂತೋಷ ಉಕ್ಕಿ ತಡೆಯಲಾರದೆ) ಅಮ್ಮ ! ಅಮ್ಮ ! ನೋಡು ಎಷ್ಟು ಒಳ್ಳೆಯದಾಯಿತು! ನನಗೆ ಅಲ್ಲಿ ನೌಕರಿಗೆ ಆರ್ಡರು ಬಂದಿದೆ ! ಬೊಂಬಾಯಿನಲ್ಲಿ ನೌಕರಿ ! ನೂರು ರೂಪಾಯಿ ಸಂಬಳ !

[ ಲಕ್ಷ್ಮಮ್ಮನು ಬೆರಗಾಗಿ ನೋಡುತ್ತಿರುತ್ತಾಳೆ. ಪ್ರವೇಶ ಗುಂಡಪ್ಪ. ]

**ರಾಮಚಂದ್ರ** : ಅಪ್ಪ, ಅಪ್ಪ !

**ಗುಂಡಪ್ಪ** : (ಗಂಭೀರವಾಗಿ) ಏನದು ಸಮಾಚಾರ ? ಇಷ್ಟೊಂದು ಕೋಲಾಹಲ ?

**ಲಕ್ಷ್ಮಮ್ಮ** : ಮಗುಗೆ, ಬೊಂಬಾಯಿನಲ್ಲಿ ನೌಕರಿ ಸಿಕ್ಕಿದೆಯಂತೆ. ಸಂಬಳ ನೂರಂತೆ.

**ರಾಮಚಂದ್ರ** : ಗ್ರೇಡು ಬೇರೆ ಇದೆ, ವರ್ಷಕ್ಕೆ ಐದರಂತೆ........

**ಗುಂಡಪ್ಪ** : (ಹುಬ್ಬುಗಂಟಿಕ್ಕಿ) ಏನು ಬೊಂಬೆಯಿನಲ್ಲಿ ನೌಕರಿಯೆ ? ಇದಕ್ಕೆ ಯಾರು ಹಾಕಿದ್ದೋರು ?

**ರಾಮಚಂದ್ರ** : (ಅನನ್ಯ ಉತ್ಸಾಹದಿಂದ) ನಾನೇ. ಬಹಳ ದಿನಗಳ ಕೆಳಗೆ. ಪತ್ರಿಕೆಯಲ್ಲಿ ಪ್ರಕಟನೆ........

**ಗುಂಡಪ್ಪ** : (ಕಠಿಣವಾಗಿ) ಸ್ವಲ್ಪ ತಾಳು ಮಗು. ನಿನ್ನ ಆವೇಶ ಸಾಕು. ಅರ್ಜಿ ಹಾಕೋಕೆ ಮುಂಚೆ ನನ್ನ ಕೇಳೋಕಿಲ್ಲವೆ ? ಸುಮ್ಮನೆ ಆತುರ ಪಟ್ಟೆಯಲ್ಲ ? (ರಾಮುಚಂದ್ರನ ಮುಖ ಪೆಚ್ಚಾಗುತ್ತದೆ. ಲಕ್ಷ್ಮಮ್ಮನೂ ಗಂಬೀರವಾಗುತ್ತಾಳೆ) ಆ ಬೊಂಬಾಯಿನ ಬೇಳೆಕಾಳು ಸನಗೆ ಗೊತ್ತಿಲ್ಲ ಅಂತ ತಿಳಿದುಕೊಂಡಿದ್ದೀಯೇನು ? ನಾನೆಲ್ಲ ವಿಚಾರಿಸಿಬಿಟ್ಟಿದ್ದೀನಿ.

**ರಾಮುಚಂದ್ರ** : (ಕೊಂಚ ಧೈರ್ಯ ತಂದುಕೊಂಡು) ನನ್ನ ಸ್ನೇಹಿತ ಒಬ್ಬ ಅಲ್ಲಿ....

**ಗುಂಡಪ್ಪ** : ಇರಬಹುದು. ಅವನು ಎಂಥವನೋ ಏನೋ. ಆ ಪಾಡೆಲ್ಲ ನಾನು ಕೇಳಿ ಕೇಳಿ ಸಾಕು ಅನ್ನುವವರೆಗೂ ತಿಳಿದಿದ್ದೀನಿ.

**ರಾಮುಚಂದ್ರ** : ಅಲ್ಲಿ ಏನು.... ?

**ಗುಂಡಪ್ಪ** : ಕಷ್ಟ ಅಂತೀಯು ? ನೀನು ಹುಡುಗ. ನಿನಗೆ ಏನೂ ತಿಳಿಯದು. ಅವರಿವರ ಮಾತು ಕೇಳಿ ಕುಣೀಬೇಡ. ಅಲ್ಲಿ ಮೂವತ್ತು ನಲವತ್ತು ವರ್ಷ ಇದ್ದವರೆಲ್ಲ ನನಗೆ ಹೇಳಿದ್ದಾರೆ.

**ರಾಮುಚಂದ್ರ** : ಅಲ್ಲಿ ಯಾವ ಭಾಗದಲ್ಲಿ ಕೊರತೆ ಅಂತ.... ?

**ಗುಂಡಪ್ಪ** : ಮಗು! ಏನು ನನ್ನ ಪಾಟಿ-ಸವಾಲು ಮಾಡುತ್ತೀಯೇನು ? ನಾನು ಹೇಳಿದ್ದನ್ನ ನಂಬೋದು ನಿನಗೆ ಸಾಲದೆ ?

**ರಾಮುಚಂದ್ರ** (ದೌರ್ಬಲ್ಯದಿಂದ) ಅಪ್ಪ, ಕೋಪಿಸಿಕೊಳ್ಳಬೇಡ. ಅದು ನನ್ನ ಅರ್ಥ....

**ಗುಂಡಪ್ಪ** : ಇನ್ನೇನು ಅರ್ಥ ? ನನ್ನ ಕೇಳಪೆನೇ....

**ರಾಮುಚಂದ್ರ** : ಆಗಿದ್ದು ಆಗಿಹೋಯಿತು. ಇನ್ನು [illegible] ಹೇಳಿದಂತೇ....

**ಗುಂಡಪ್ಪ** : ಹಾಗೆ ಬಾ. ಮಗು ನಿನಗೆ ತಿಳಿಯದಪ್ಪ. ಅದು ದೂರದ ದೇಶ. ನಿನಗೇನೂ ಅನುಭವ ಇಲ್ಲ.

**ರಾಮಚಂದ್ರ :** ಈಚೀಚೆಗೆ ಬಹಳ ಜನ ಅಲ್ಲಿಗೆಲ್ಲ....

**ಗುಂಡಪ್ಪ :** ಬಹಳನೂ ಇಲ್ಲ, ಗಿಹಳನೂ ಇಲ್ಲ. ಎಲ್ಲೋ ಒಬ್ಬೊಬ್ಬರು ಓಡಿ ಹೋಗಿದ್ದಾರೆ ಅಷ್ಟೆ.

**ರಾಮಚಂದ್ರ :** ನನ್ನ ಸ್ನೇಹಿತ....

**ಗುಂಡಪ್ಪ :** ಮತ್ತೆ ಅದೇ ಹೇಳುತ್ತೀಯಲ್ಲ. ಅವನು ಯಾವುನೋ ಒಬ್ಬ. ಇಷ್ಟಕ್ಕೂ ಅವನು ಎಷ್ಟರ ಮಟ್ಟಿಗೆ ಇದ್ದಾನೋ ಏನೋ. ಏನೋ ನರಿ ಬಾಲ ಕಳಕೊಂಡು ಹೇಳಿದ ಹಾಗೆ ನಿನಗೆ ಬರೆದಿರಬಹುದು.

**ಲಕ್ಷ್ಮಮ್ಮ :** ಹುಂ. ಅಲ್ಲಿ ಅಷ್ಟು ದೂರದ ದೇಶದಲ್ಲಿ, ನಮ್ಮವರು ತಮ್ಮವರು ಅಂತ ಯಾರಿದಾರಪ್ಪ ?

**ಗುಂಡಪ್ಪ :** ಯಾರೂ ಇಲ್ಲ.

**ರಾಮಚಂದ್ರ :** ಕನ್ನಡಿಗರು ತುಂಬಾ....

**ಗುಂಡಪ್ಪ :** ತುಂಬಾನೂ ಇಲ್ಲ, ಗಿಂಬಾನೂ ಇಲ್ಲ. ನನ್ನ ಕೇಳು ಹೇಳುತ್ತೀನಿ. ಅಲ್ಲೊಬ್ಬರು ಇಲ್ಲೊಬ್ಬರು ಇದ್ದಾರೆ. ಅದರಿಂದ ಏನು ಪ್ರಯೋಜನ? ಒಂದು ವೇಳೆ ಎಷ್ಟೋ ಜನ ಇದ್ದರೆ ತಾನೆ ನಿನ್ನ ಯಾರು ನೋಡಿಕೊಳ್ಳುತ್ತಾರೆ? ನಿನ್ನ ನೀನು ನೋಡಿಕೊಳ್ಳೋ ಅಷ್ಟು ಶಕ್ತನೇ–ನೀನು ?

**ಲಕ್ಷ್ಮಮ್ಮ :** ಸರಿ, ಅವನಷ್ಟಕ್ಕೆ ಅವನನ್ನು ಬಿಟ್ಟರೆ ಆಯ್ತು. ಏನು ಕೊಟ್ಟರೂ ಬೇಡ ಆ ಕೆಲಸ, ಸಂಪಾದನೆ.

**ಗುಂಡಪ್ಪ :** ನೋಡಿದೆಯ ? ನಿಮ್ಮ ಅಮ್ಮನಿಗೆ ಗೊತ್ತು ನಿನ್ನ ವಿಷಯ. ನಿನ್ನ ವಿಚಾರ ನೀನು ಏನೇನೋ ತಿಳಿದುಕೊಂಡುಬಿಟ್ಟಿದ್ದೀಯೆ. ನಮ್ಮನ್ನು ಕೇಳು. ನಿನ್ನನ್ನು ಇಷ್ಟು ವರ್ಷ ನೋಡಿದ್ದೀವಿ ಎಲ್ಲ ತಿಳಿದುಕೊಂಡಿದ್ದೀವಿ.

**ಲಕ್ಷ್ಮಮ್ಮ :** ಅಲ್ಲಿ ಎಲ್ಲಿ ಮನೆಯೋ, ಮಠವೋ, ಊಟವೋ, ತಿಂಡಿಯೊ, ನೀರೋ, ನಿಡಿಯೋ, ರೋಗ ರುಜಿನ ಆದರೆ ನೋಡೋರು ಮಾಡೋರು ಯಾರು ? ಹೋಗೋದು ಬರೋದು ಏನು ಸ್ವಲ್ಪ ದೂರವೇ, ಆಗಲಿ

ಅನ್ನೋದಕ್ಕೆ? ಹರಿಹರದ ವರೆಗಾದರೂ ಹೇಗಾದರೂ 'ಹುಂ' ಅನ್ನಬಹುದು. ಅದಕ್ಕಾಚೆ ಒಂದು ಮೈಲಿಯೂ ನಮಗೆ ದೂರವೇ. ಆ ಕಷ್ಟ ಎಲ್ಲ ಈಗ ತಿಳಿಯೋದಿಲ್ಲ. ನಮ್ಮ ವೆಂಕಮ್ಮ ಹೋಗಿ ಬೇಕೇ ಅವಳ ಪಾಡು. ಮೈಸೂರು ಮೈಸೂರು ಅಂತ ಹಂಬಲಿಸುತ್ತಾಳಂತೆ—ಹೋದ ಕೆಲವು ದಿನಕ್ಕೇ. ಅಲ್ಲೆಲ್ಲ ನೂರಾರು ಕಷ್ಟ ಇವೆ. ಸಾವಿರಾರು ತೊಡಕು ಇವೆ. ಎಲ್ಲೋ ಗಡಿಪಾರು ಮಾಡಿದ ಹಾಗೆ. ಅವೆಲ್ಲ ಸಾಧ್ಯವಿಲ್ಲ. ಇಲ್ಲೇ ಎಷ್ಟಾದರೂ ಬರಲಿ. ನಮ್ಮ ಕಣ್ಣಿನ ಮುಂದೇ ಇರಬೇಕಪ್ಪ. ನೀನು ಅಲ್ಲಿಗೆ ಇಲ್ಲಿಗೆ....

**ರಾಮಚಂದ್ರ** : ಅಮ್ಮ, ಅದೆಲ್ಲ ದಿನಕ್ರಮೇಣ ಸರಿಹೋಗುತ್ತೆ.

**ಲಕ್ಷ್ಮಮ್ಮ** : ಅದೆಲ್ಲ ಸುಳ್ಳು, ಸುಮ್ಮನೆ ಅಲ್ಲಿ ತಾಪತ್ರಯ ಪಟ್ಟುಕೊಂಡು ಫಜೀತಿ ಬಿದ್ದುಕೊಂಡು....

**ರಾಮಚಂದ್ರ** : ಅಲ್ಲಿಗೇ ನಾವು ಎಲ್ಲಾರೂ ಹೋದರೆ ?

**ಗುಂಡಪ್ಪ** : ಸರಿ, ಸರಿ ಆಯ್ತು. ನಾವು ಇಷ್ಟು ದಿನ ಇಲ್ಲಿ ಬಾಳಿದ್ದಕ್ಕೆ ಸಾರ್ಥಕ ಅಲ್ಲಿ ಹೋಗಿ ಹೊಸ ಆಚಾರ, ವ್ಯವಹಾರ....

**ಲಕ್ಷ್ಮಮ್ಮ** : ಅದೊಂದೂ ಸರಿಹೋಗೋದಿಲ್ಲ. ಆ ಯೋಚನೇನೇ ಬಿಟ್ಟುಬಿಡಬೇಕು. ಇಷ್ಟು ದಿನ ಹೀಗೆ ಇದ್ದು ಅಲ್ಲಿ ಮುಪ್ಪಿನ ಕಾಲದಲ್ಲಿ ಮಡಿ ಹುಡಿ ಇಲ್ಲದೆ ಬಾಳೋದಿಕ್ಕೆ ಎಂದಿಗೂ ಆಗೋದಿಲ್ಲ. ಅಲ್ಲೆಲ್ಲ ಹಾಗೇ ಅಂತೆ.

**ಗುಂಡಪ್ಪ** : ಅದೂ ಅಲ್ಲದೆ ನಮ್ಮ ದೇಶ, ನಮ್ಮ ರಾಜ್ಯ, ಬೀದಿ, ಮನೆ ನೆರೆ-ಹೊರೆ, ಇದೆಲ್ಲ ಅಲ್ಲಿ ಹೇಗೆ ಬರಬೇಕು? ಈ ಸುಖ ಅಲ್ಲಿ ಹೇಗೆ ಬಂದೀತು? ಎಲ್ಲೋ ದೇಶಭ್ರಷ್ಟರಂತೆ ಇದ್ದುಕೊಂಡು....

**ರಾಮಚಂದ್ರ** : ನನ್ನ ಸ್ನೇಹಿತ

**ಗುಂಡಪ್ಪ** : ಅವನ ಮಾತು ಬಿಡು ಮಗು. ನನಗೆ ಅದು ಒಪ್ಪಿಗೆ ಇಲ್ಲ. ಸರ್ವಥಾ.....

**ರಾಮಚಂದ್ರ** : ನೂರು....

**ಗುಂಡಪ್ಪ :** ಅದು ಒಂದು ತಾನೆ ನಿನ್ನ ಭದ್ರವಾಗಿ ಹಿಡಿದುಕೊಂಡಿರೋದು? ನಿನಗೆ ಸಾಕಾದಷ್ಟು ಅನುಭವ ಇಲ್ಲ. ಬೊಂಬಾಯಿ ಜೀವನ ಬಹಳ ತುಟ್ಟಿ. ತಿಳಿತೆ? ಅದೂ ಅಲ್ಲದೆ ಪರದೇಶದಲ್ಲಿ ಬರೋ ಸಾವಿರಕ್ಕಿಂತ ಮನೆ ಮುಂದೆ ಬರೋ ಮೂರು ಕಾಸು ವಾಸಿ. ಗೊತ್ತಾಯ್ತೆ? ಇದನ್ನು ಇನ್ನೂ ತಿಳಿಯೋದಿಕ್ಕೆ ನಿನಗೆ ಬಹಳ ಕಾಲ ಬೇಕು.

**ರಾಮಚಂದ್ರ :** ಈ ದೇಶ ಇಷ್ಟು ಕೆಟ್ಟಿದೆ....

**ಗುಂಡಪ್ಪ :** ಹೇಗಾದರೂ ಇಲ್ಲೇ ಸರಿ. ಇಲ್ಲದೇ ಇದ್ದರೂ ನಮ್ಮ ದೇಶವೇ ನಮಗೆ ಸರಿ. ಅಲ್ಲಿ ಎಷ್ಟೋಂದು ಕೇಡೋ ಏನೋ? ಕಾಣದೇ ಇರೋ ಸುಖಕ್ಕಿಂತ ಕಂಡ ಕಷ್ಟವೇ ವಾಸಿ

**ರಾಮಚಂದ್ರ :** ಅಷ್ಟೊಂದು ಜನ ...

**ಗುಂಡಪ್ಪ :** ತಿರಿಗಿ ಅದೇ ಹೇಳುತ್ತೀಯಲ್ಲ? ಅವರುಂಟು ಅವರ ಹಣೆಬರಹ ಉಂಟು. ನಮಗೇನೋ ಇದೇ ಸರಿ. ನೀನು ಹೋಗೋದಿಕ್ಕೆ ಆಗೋದಿಲ್ಲ ಮಗು.

**ಲಕ್ಷ್ಮಮ್ಮ :** ಸರಿ. ನಿನ್ನ ಅಲ್ಲಿ ಕಳುಹಿಸಿ ನಾವು ಜೀವ ಬಿಗಿ ಹಿಡಿದುಕೊಂಡು ಹೇಗೆ ಇರೋದು ಇಲ್ಲಿ ಮಗು?

**ಗುಂಡಪ್ಪ :** ಆದೂ ಅಲ್ಲದೆ ನಿನ್ನ ಜವಾಬುದಾರಿ ನಿನ್ನ ಮೇಲೆ ಹೊರಿಸೋ ಧೈರ್ಯ ನಮಗಿಲ್ಲ ಇನ್ನೂ.

**ಲಕ್ಷ್ಮಮ್ಮ :** ಛೆ, ಛೆ, ಹಾಗೆ ಮಾಡೋಕೆ ಎಲ್ಲಿ ಆಗುತ್ತೆ?

**ರಾಮಚಂದ್ರ :** ನನಗೂ ಇಪ್ಪತ್ತೈದು ವರುಷ.

**ಗುಂಡಪ್ಪ :** ಆದರೇನು?

**ಲಕ್ಷ್ಮಮ್ಮ :** ನೀನು ನಮಗೆ ಇನ್ನೂ ಮಗುವೆ. (ಕಾಫಿಯನ್ನು ಇಬ್ಬರಿಗೂ ಕೊಡುತ್ತಾಳೆ)

**ಗುಂಡಪ್ಪ :** ನಿನಗೆ ಇನ್ನೂ ಹುಡುಗತನವೇ. ಏನು ತಾನೆ ನೋಡಿಕೊಳ್ಳಬಲ್ಲೆ–ಮಾಡಿಕೊಳ್ಳಬಲ್ಲೆ? ಅದೆಲ್ಲ ಆಗದು. ನೀನು ಏನೇ ಹೇಳು

ನಮಗೆ ಮಾತ್ರ ಏನು ಮಾಡಿದರೂ ಸರಿಬೀಳೋದಿಲ್ಲ. ನಮ್ಮ ಮಾತನ್ನು ಕೇಳಿಕೊಂಡು ಸುಮ್ಮನೆ ಇರು ಅವರಿಗೆ ಆಗೋದಿಲ್ಲ ಅಂತ ಬರೆದುಹಾಕು.

(ರಾಮಚಂದ್ರನು ಚಿಂತೆಯಿಂದ ಮೌನವಾಗಿರುತ್ತಾನೆ)

**ಲಕ್ಷ್ಮಮ್ಮ :** (ಕಣ್ಣೀರನ್ನು ತಂದುಕೊಂಡು) .ಮಗು ನಮ್ಮನ್ನು ನೋಡು. ನಮ್ಮ ವಯಸ್ಸನ್ನು ನೋಡು. ನಿನ್ನ ಕಳುಹಿಸಿ ಇರೋಕೆ ಆಗುತ್ತೆ ? ಅವರು ಹೇಳಿದ ಹಾಗೆ ಮಾಡಪ್ಪ.

(ರಾಮಚಂದ್ರನು ಇನ್ನೂ ಸುಮ್ಮನಿರುತ್ತಾನೆ)

**ಗುಂಡಪ್ಪ :** ಏನು ನಮ್ಮ ಇಷ್ಟಕ್ಕೆ ವಿರುದ್ಧವಾಗಿ ನೀನು ಹೋಗುವುದಿಲ್ಲ ತಾನೆ ?

**ಲಕ್ಷ್ಮಮ್ಮ :** ನಾವು ನಿನ್ನ ಹಿತೈಷಿಗಳು, ಹೆತ್ತು ಹೊತ್ತು ಸಾಕಿ ಸಲಹಿ ದೋರು. ನಾವು ಹಾಕಿದ ಗೆರೆ ಮೀರೋನಲ್ಲ ನೀನು. ನಮ್ಮನ್ನು ಇಷ್ಟು ದುಃಖಕ್ಕೆ ಗುರಿಮಾಡಿಯೂ ನೀನು ಅಲ್ಲಿಗೆ ಹೋಗಲೇಬೇಕೆ ?

**ಗುಂಡಪ್ಪ :** ನಾವು ಇಷ್ಟು ಹೇಳುವಾಗ ಅವನು ಹೊಗೋಣ ಅಂದರೆ ಏನು ನನ್ನ ಮಗನೇ ನನ್ನ ಮಾತನ್ನು....

**ರಾಮಚಂದ್ರ :** ಹಾಗಲ್ಲಪ್ಪ. ನೀವು ಹೇಳಿದಂತೆಯೇ ಕೇಳಬೇಕೆಂದೇ ನನಗೆ. ಆದರೆ ಆ ಸಾಲದ ಆರುನೂರು ರೂಪಾಯಿ ಬೇರೆ ಇದೆ. ಇದಾದರೆ ಅದನ್ನು ಈ ಕ್ಷಣವೇ ತೊಳೆದುಕೊಂಡು....

**ಗುಂಡಪ್ಪ :** ಅದರ ಗೋಜು ನಿನಗೇಕೆ ? ನನಗೆ ಬಿಡು. ನನ್ನ ಪಾಡು. ಹೇಗೋ ತೀರಿಸುತ್ತೀನಿ. ನಾನು ಹೇಳಿದಂತೆ ಮಾತ್ರ ಮಾಡು.

**ಲಕ್ಷ್ಮಮ್ಮ :** ಮಗು, ಮೊಂಡತನ ಮಾಡಬೇಡಪ್ಪ.

**ರಾಮಚಂದ್ರ :** (ನಿಟ್ಟುಸಿರಿನಿಂದ) ಆಗಲಿ. ನಿಮ್ಮ ಮಾತಿನ ಹಾಗೇ.

**ಲಕ್ಷ್ಮಮ್ಮ :** ನೀನು ಹಾಗೆ ಮಾಡುತ್ತೀ ಅಂತ ನನಗೆ ಗೊತ್ತು.

**ಗುಂಡಪ್ಪ :** ಈಗ ತೀರ್ಮಾನ ಸರಿಯಾಯಿತು. ನಾಳೆ ಬರೆದು ಹಾಕು. ಮತ್ತೆ ಸುಮ್ಮನೆ ಗಂಭೀರವಾಗಿ ಅಠಾರ ಕಚೇರಿಗೆ ಹೋಗಿ ಹೆಡ್‌ಗುಮಾಸ್ತೆ

ಅವರು ಒಬ್ಬರೇ ಇರುವಾಗ ನೋಡಿ ಮೇಜಿನ ಕೆಳಗಿನಿಂದ ನೋಟು ಇಟ್ಟ ಕವರನ್ನು ಕೊಟ್ಟುಬಿಟ್ಟು, ಕೆಲಸಕ್ಕೆ ಸೇರಿಕೊಂಡುಬಿಡು. ಮುಂದಿನ ಕೆಲಸ ನಾನು ಹೇಳಿಕೊಡುತ್ತೇನೆ. ನನಗೆ ನಲವತ್ತು ವರ್ಷದ ಅನುಭವ ಇದೆ ಆ ' ಲೈನಿ ' ನಲ್ಲಿ.

( ರಾಮಚಂದ್ರನು ಮರಿದಂತಾಗಿ ಮೌನವಾಗಿ ನಿಂತಿರುತ್ತಾನೆ. ಗುಂಡಪ್ಪನು ಕಾಫಿ ಕುಡಿಯುತ್ತಾನೆ.)

**ಲಕ್ಷ್ಮಮ್ಮ** : ಮಗು, ಯಾಕೆ ಸುಮ್ಮನೆ ಇದ್ದೀಯಪ್ಪ. ಕಾಫಿ ತಗೊ ಆರಿ ಹೋಗುತ್ತದೆ.

— ತೆರೆ —

# ಅಂಕ ೨

## ದೃಶ್ಯ ೧

[ ಸ್ಥಳ : ಶಿವಮೊಗ್ಗ ಮಾಧ್ಯಮಿಕ ಶಾಲೆಯ ಮೇಷ್ಟರು ದೇವಯ್ಯನ ಮನೆಯ ವರಾಂಡ. ಕಾಲ ಮಧ್ಯಾಹ್ನ ಮೂರುಗಂಟೆಯ ಸಮಯ. ದೇವಯ್ಯನ ಮಗಳು ತಾರಾಗೆ ನೆರೆಮನೆಯ ಹುಡುಗಿ ಸರೋಜ ಜಡೆಹಾಕುತ್ತಿದ್ದಾಳೆ. ತಾರಾ ಹಾಗೆಯೇ ಹೂ ಕಟ್ಟುತ್ತಿದ್ದಾಳೆ. ಇಬ್ಬರಿಗೂ ವಯಸ್ಸು ಸುಮಾರು ಹದಿನೇಳು. ಇಬ್ಬರೂ ತುಂಬ ಲವಲವಿಕೆಯ ಹೆಣ್ಣುಗಳು. ತಾರಾ ಮುಖದಲ್ಲಿ ಸಂತೋಷವು ತುಂಬಿ ಹರಿಯುತ್ತಿದೆ. ಸರೋಜನ ಮುಖದಲ್ಲಿ ತುಂಟ ಕಳೆಯಿದೆ. ಅವರವರ ಕೆಲಸದ ಮಧ್ಯೆ ಮಾತು ಸಾಗುತ್ತದೆ. ]

**ಸರೋಜ** : ನೀ ಏನಮ್ಮ, ಆಗಲೇ ನಿಮ್ಮ ಯಜಮಾನರ ಮನೆಗೆ ಹೊರಟು ನಿಂತಿದ್ದೀಯೆ.

**ತಾರಾ** : ಮನೆ ನನ್ನದಲ್ಲವೇನೆ?

**ಸರೋಜ** : ಅಬ್ಬಬ್ಬ!. ಇನ್ನೂ ಮನೆ ತುಂಬಿಸಿಕೊಂಡೇ ಇಲ್ಲ. ಈಗಾಗಲೇ ನಿನ್ನ ಮನೆಯೇ ? ಏನು ಅಭಿಮಾನ ! ಏನು ಹೆಮ್ಮೆ !

**ತಾರಾ** : ಹೌದೇ ಹೌದು. ತಪ್ಪೇನು ? ಯಾಕಿರಬಾರದು ?

**ಸರೋಜ** : ಸರಿ ಕಣೆ, ಸರಿ. ನಿನ್ನ ಮನೆ, ನಿನ್ನ ಗಂಡ, ನಿನ್ನ ಅತ್ತೆ-ಮಾವ, ನಿನ್ನ ಆಳು-ಕಾಳು ಎಲ್ಲಾ ನಿನ್ನೋರೇ. ನೀನೇ ಯಜಮಾನಿ, ಸರಿಯೆ ?

**ತಾರಾ** : ಹುಂ. ನನ್ನ ಒಡವೆ ವಸ್ತು, ನನ್ನ ಮೈಸೂರು-ಇವನ್ನೆಲ್ಲ ಯಾಕೆ ಬಿಟ್ಟೆ ?

**ಸರೋಜ** : ಓಹೊ, ಏನು ಮೈಸೂರಿಗೆ ಸೇರಿದೀಯೆ ಅಂತ ಇಷ್ಟು ಜಂಭವೂ ?

**ತಾರಾ** : ಜಂಭ ಅಲ್ಲ. ಅವೆಲ್ಲ ನಮ್ಮದು ಅನ್ನೋ ಆಸೆ-ಅಷ್ಟೆ. ಯಾವ ಹೆಣ್ಣಿಗಿರೋದಿಲ್ಲ ಆ ಆಸೆ ? ನೀನೆ ಹೇಳು.

**ಸರೋಜ** : ಅಲ್ಲಿಗೇ ಮುಗೀತೆ ಹೊಸ ಸೊಸೆ ಆಸೆ ? ಮಕ್ಕಳೊ ?

**ತಾರಾ**: ( ಹಿಂತಿರುಗಿ ನೋಡಿ ನಕ್ಕು ) ನಿನಗಿಲ್ಲವೇನು ಅದರಾಸೆ ? ಏನೊ ನನಗೊಬ್ಬಳಿಗೇ ಇದ್ದ ಹಾಗೆ ಹೇಳುತ್ತೀಯೆ ?

**ಸರೋಜ**: ನನ್ನ ಮಾತು ಬಿಡು. ಮೂರು ದಿವಸಕ್ಕೆ ನನಗೇನು ಮೂಹೂರ್ತ ? ನಮ್ಮ ಯಜಮಾನರೇನು ಈಗ ಮೈಸೂರಿನಿಂದ ಹೊರಟು ಬರೋರು—ಕರೆದುಕೊಂಡು ಹೋಗೋಕೆ ?

**ತಾರಾ**: ಅದಕ್ಕೇನು ಬಿಡು. ಇವತ್ತಲ್ಲ ನಾಳೆ ಬಂದೇ ಬರುತ್ತಾರೆ. ನೀನೂ ಹೋಗೇ ಹೋಗುತ್ತೀಯೆ.

**ಸರೋಜ** : ಇರಬಹುದು. ಆದರೆ ಸದ್ಯಕ್ಕೆ ನಿನ್ನ ಮಾತು ಹೇಳು. ನೀನು ತಾನೆ ಮೆಟ್ಟಿಂಗಾಲಲ್ಲಿ ಹೊರಟು ನಿಂತಿರೋಳು ? ನಾಟಕದಲ್ಲಿ ಪ್ರೇಕ್ಷಕರು ಮಾತಾಡುತ್ತಾರೆಯೊ ? ನಿನಾದರೆ ಹೊಸ ಯಜಮಾನಿ, ಹೊಸ ಹೆಂಡತಿ, ಹೊಸ ತಾಯಿ........

**ತಾರಾ** : ಸಾಕು ಸುಮ್ಮನಿರೇ.

**ಸರೋಜ** : ಹಾಗೆಂದರೇನು. ಮುಂದಿನ ವರ್ಷ ತವರುಮನೆಗೆ ಬರುವ ಹೊತ್ತಿಗೆ ಕೊಂಕಳಿನಲ್ಲಿ ಒಬ್ಬ ಗೋಪಾಲಕೃಷ್ಣ ಬೇರೆ........

**ತಾರಾ** : ( ಸಂತೋಷವನ್ನು ಸೂಚಿಸುತ್ತ ) ಓಹೋ, ಆಗಲೇ ಹೆಸರೂ ಇಟ್ಟುಬಿಟ್ಟಿದೀಯೋನು ? ಅದೇನೋ ' ಪುಳ್ಳೈ ಪೇರು ' ಅಂತಾರಲ್ಲ ಹಾಗೆ.

**ಸರೋಜ** : ಇದೇನು ಆಗಲೇ ನೀನು ಒಪ್ಪಿಕೊಂಡಿಲ್ಲವೆ ? ಇದೇ ಮೊದಲನೇ ಸಲವೆ –ಈ ಮಾತು ಬಂದಿರೋದು ?

**ತಾರಾ** : ಸಾಕು ಸುಮ್ಮನಿರೆ. ಯಾರಾದರೂ ಏನಂದುಕೊಂಡಾರು !

**ಸರೋಜ** : ಏನಂದುಕೋತಾರೆ ? ಗಂಡನ ಮನೆಗೆ ಕಾಲಿಡುತ್ತಾ ಇರೋ ಹೆಂಡತಿಗೆ ಇದೆಲ್ಲ ನ್ಯಾಯ ಅಂತ.

**ತಾರಾ** : ಹುಂ. ಅಂತಾರೆ ಇವಳೊಬ್ಬಳು ಲಂಗೈಯಲ್ಲಿ ಕೈಲಾಸ ಕಾಣೋ ಹುಚ್ಚಿ ಅಂತ.

**ಸರೋಜ** : ಅದು ಯಾಕೊ ? ಹುಡಗಿಯುರಾಗಿದ್ದಾಗಲೇ ಹರಟು ಕೊಂಡು ಹರಟುಕೊಂಡಾಗಿದೆ. ಈಗ ಕನಸು ನನಸಾಗುವ ಹಾಗೆ ಕಾಣುವ ಕಾಲ ಬಂದಿರುವಾಗ ಹೇಳಿಕೊಂಡರೆ ಅದು ಹುಚ್ಚೆ ?

**ತಾರಾ** : ಏ, ಅದು ಇನ್ನೂ ಬಲು ದೂರದ ಮಾತು ಬಿಡು.

**ಸರೋಜ** : ಯಾಕಾದೀತು. ಮುಂದಿನ ವರ್ಷದ ಹೊತ್ತಿಗೆ ನೋಡು. ನಾನು ಏನು ಹೇಳಿದ್ದೆ ಅಂತ ಜ್ಞಾಪಿಸಿಕೊ.

**ತಾರಾ** : ಹಾಗೇ ಆಗಲಿ ಬಿಡು. ನೀನೊಬ್ಬಳು – ಬಾಯಿಬಡುಕಿ !

**ಸರೋಜ** : ಅಹಹ! ಒಳಗೆ ಉಲ್ಲಾಸ: ಹೊರಗೆ ಮಾತ್ರ ಈ ನಾಟಕ. ಯಾರಿಗೆ ಕಲಿಸುತ್ತೀಯೆ, ಇದೆಲ್ಲ ?

**ತಾರಾ** : ಒಪ್ಪಿಕೊಂಡೆ ಬಿಡು. ನೀ ಹೇಳಿದ್ದೆಲ್ಲ ಸರಿ ಅಂತ. ಎಲ್ಲಾ ಹೆಂಗಸರೂ ಹುಚ್ಚರೇ. ನನ್ನದೇನು ಹೆಚ್ಚು. ತಾಯಿತನ ಅನ್ನೋದು ಹುಟ್ಟುವಾಗಲೇ ನೆಟ್ಟಿರುತ್ತೆ-ಹೆಣ್ಣುಗಳ ಎದೇಲಿ. ಕಾಲ ಬಂದಾಗ ಅರಳುತ್ತದೆ ಅಷ್ಟೆ.

**ಸರೋಜ** : ಹಾಗೆ ಬಾ. ಹಾಗೆ ಬಾ ಮಹರಾಯತಿ, ನಿನ್ನ ಹೊಸ ಸಂಭ್ರಮದಲ್ಲಿ ನಮ್ಮನ್ನೇ ಮರೆತುಬಿಟ್ಟೀಯೆ.

**ತಾರಾ** : ಸಾಕು. ಹಾಗಂದರೇನೆ ? ನಿನ್ನದೊಂದು ಅತಿಮಾತು.

**ಸರೋಜ** : ಹಾಗಲ್ಲಮ್ಮ. ಹೊಸ ಮನೆಗೆ ಹೋದ ಮೇಲೆ ನಿನಗೆ ಹತ್ತಾರು ಕೆಲಸ. ಯಜಮಾನರೊಡನೆ ಸರಸ. ದೊಡ್ಡ ಊರಿನ ನೋಟ, ಸಂಸಾರದ ಹೊಸ ಆಟ. ಮನಸ್ಸಿನ ತುಂಬ ಕನಸಿನ ಭರಾಟೆ. ಕೈತುಂಬ ಕಸೂತಿ ಗಲಾಟೆ.

**ತಾರಾ** : ಹುಂ, ಹುಂ, ಹಾಕು ಇನ್ನೂ ಪಟ್ಟಿ.

**ಸರೋಜ** : ಅದಕ್ಕಿಂಟೇ ಮಿತಿ ? ನಿಮ್ಮ ಯಜಮಾನರು ಒಂದು ವರ್ಷದಿಂದ ನೌಕರಿ ಮಾಡಿ—ಒಂದು ವರ್ಷ ಅಲ್ಲವೇನೆ ?—ದುಡಿದು ಕೊಟ್ಟಿದ್ದಾರೆ ಸಣ್ಣಗಂಟು. ಅದನ್ನೆಲ್ಲ ಕರ್ಚು ಮಾಡೋದೇ ನಿನ್ನ ಕೆಲಸ ಅಲ್ಲಿ.

**ತಾರಾ** : ಓಹೊ ಹೊ, ಏನು ಹಾಸ್ಯವೋ, ಇದು ?

**ಸರೋಜ :** ಏನಲ್ಲ. ನಿನಗಲ್ಲದೆ ಅವರು ಮತ್ತೆ ಯಾರಿಗಾಗಿ ಕೂಡಿ ಹಾಕಬೇಕು? ನಾನು ಏನು ಹೇಳಿದ್ದೆ ಅನ್ನು. ಆಮೇಲೆ ನನಗೆ ಕಾಗದ ಬರಿ.

**ತಾರಾ :** ಆಗಲಿ, ಆಗಲಿ ಒಂದು ಪುಸ್ತಕನೇ ಬರೆದು ಕಳುಹಿಸುತ್ತೀನಿ.

**ಸರೋಜ :** ಒಂದು ಯಾಕೆ ಹತ್ತು ಆಗುತ್ತೆ ನೀವು ಸಂಸಾರದ ಸಂತೋಷದಲ್ಲಿ ಈಜಾಡೋ ವಿವರವೆಲ್ಲ ಬರೆದರೆ.

**ತಾರಾ :** (ಗಂಭೀರವಾಗಿ) ಸರೋಜ, ನೀ ಹೇಳೋದೆಲ್ಲ ನಿಜವಾದರೆ!

**ಸರೋಜ :** ಹಾಗಂದರೇನೆ? ಅದಕ್ಕೇನೆ ಅಡ್ಡಿ?

**ತಾರಾ :** ಹಾಗೆ ಆಗಲಿ. ಜಡೆ ಮುಗಿತೇ?

**ಸರೋಜ :** ಹುಂ. ಹೂ ಕೊಡು. (ತಾರಾ ಕಟ್ಟಿದ ಹೂವನ್ನು ಕೊಡುತ್ತಾಳೆ. ಸರೋಜನು ಮುಡಿಸುತ್ತ) ಇಷ್ಟೊಂದು!

**ತಾರಾ :** ಯಾಕೆ? ನನಗೇನೊ ಹೂವು ಅಂದರೆ ಬಲು ಆಸೆ, ಅದರಲ್ಲೂ ಇಂಥ ಮಲ್ಲಿಗೆ ಸಂಪಿಗೆ ಅಂದರೆ ಎಷ್ಟಾದರೂ ಮುಡಿದುಕೊಳ್ಳುತ್ತೀನಿ.

**ಸರೋಜ :** ಸರಿ ಬಿಡು, ನಿನಗೆ ಸೀರೆ ತಂದು, ಹೂಕೊಂಡು ಮುಡಿಸಿ ಎಲೆ ಅಡಿಕೆ ಮಡಿಸಿ ನಿಮ್ಮ ಯಜಮಾನರು ಪೂರಯಿಸಿದ ಹಾಗೇ ಆಯ್ತು.

**ತಾರಾ :** ಮತ್ತೆ ನನ್ನಂಥವಳನ್ನು ಕಟ್ಟಿಕೊಂಡ ಮೇಲೆ ಹಾಗೆಯೇ.

**ಸರೋಜ :** ಪಾಪ!

**ತಾರಾ :** ಇರಲಿ ಇರಲಿ ನಿನ್ನ ಕರುಣೆ ನಿಮ್ಮ ಯಜಮಾನರಿಗೆಷ್ಟು, ನಾ ಬಲ್ಲೆ ನಿನ್ನ ಚೆನ್ನಾಗಿ. ಎಡಗೈ ಬಲಗೈ ನಾವು.

(ಇಬ್ಬರೂ ನಗುತ್ತಾರೆ. ಅಂಚೆಯವನ ಪ್ರವೇಶ. ಕವರು ಒಂದನ್ನು ಕೊಡುತ್ತಾನೆ. ತಾರಾ ಆತುರದಿಂದ ತೆಗೆದುಕೊಳ್ಳುತ್ತಾಳೆ)

**ತಾರಾ :** (ಬಾಗಿಲಿನ ಕಡೆಗೆ ನೋಡಿ) ಅಣ್ಣಾ ಕಾಗದ!

**ಸರೋಜ :** ಮೈಸೂರಿಂದೇ!

**ತಾರಾ :** (ತಿರುಗಿಸಿ ನೋಡುತ್ತಾಳೆ, ಮುಖವು ಅರಳುತ್ತದೆ. ಮುಗುಳ್ನಗೆ ಹೊರಬೀಳುತ್ತದೆ) ಹುಂ. ಇಲ್ಲೇ ಇರು (ಒಳಗೆ ಹೋಗುತ್ತಾಳೆ)

— ತೆರೆ —

## ದೃಶ್ಯ ೨

[ **ಸ್ಥಳ:** ದೇವಯ್ಯನ ಮನೆಯಲ್ಲಿ ಒಂದು ಮಲಗುವ ಕೋಣೆ. ಮಂಚದ ಮೇಲಿನ ಹಾಸಿಗೆಯ ಮೇಲೆ ರಾಮಚಂದ್ರನು ಮಲಗಿರುತ್ತಾನೆ. ದಟ್ಟಿಪಂಚೆಯುಟ್ಟು ಬನಿಯನ್ ಹಾಕಿದ್ದಾನೆ. ಹತ್ತಿರದಲ್ಲಿ ಒಂದು ಮೇಜು ಕುರ್ಚಿ. ಗೋಡೆಯ ಅಂಚಿನಲ್ಲಿ ಪೆಟ್ಟಿಗೆಗಳು, ಹಾಸಿಗೆಯ ಮತ್ತು ಚಾಪೆಯ ಸುರುಳಿಗಳು. ತಲೆಯ ಕಡೆ ಗೂಡಿನಲ್ಲಿ ಕೆಲವು ಪುಸ್ತಕಗಳು. ರಂಗದ ಇದಿರಿನಲ್ಲಿ ಕೋಣೆಯ ಮುಚ್ಚಿದ ಬಾಗಿಲು ಕಾಣುತ್ತದೆ.

**ಕಾಲ:** ಮಧ್ಯಾಹ್ನ ಸುಮಾರು ಮೂರೂವರೆ ಗಂಟೆ.

ತೆರೆ ಮೇಲೆದ್ದ ಅರೆನಿಮಿಷದಲ್ಲಿ ಕೋಣೆಯ ಬಾಗಿಲು ಕೊಂಚವೇ ಕೊಂಚ ತೆರೆಯಲ್ಪಡುತ್ತದೆ. ಅದೇ ಸಮಯದಲ್ಲಿ ರಾಮಚಂದ್ರನು ದೀರ್ಘವಾಗಿ ಉಸಿರನ್ನು ಎಳೆದುಕೊಂಡು ಮಗ್ಗುಲಾಗಿದ್ದವನು ಮೇಲುಮೊಗವಾಗುತ್ತಾನೆ. ಬಾಗಿಲು ಮತ್ತೂ ತೆರೆಯಲ್ಪಡುತ್ತದೆ. ಕೊಂಚ ಶಬ್ದ. ತಾರಾ ಆದಷ್ಟು ನಿಶ್ಶಬ್ದವಾಗಿ ಪ್ರವೇಶಿಸುತ್ತಾಳೆ. ಆದರೆ ಕಾಲುಂಗುರದ ಸದ್ದು, ಕೈ ಬಳೆಗಳ ಝಣ, ಝಣ ಕೇಳಿಸುತ್ತನೆ. ರಾಮಚಂದ್ರನು ಸ್ವಲ್ಪ ಕಣ್ಣನ್ನು ಬಿಟ್ಟು ನೋಡಿ, ನಸುನಕ್ಕು ಮತ್ತೆ ನಿದ್ದೆ ಬಂದವನಂತೆ ನಟಿಸುತ್ತಾನೆ. ತಾರಾ ಉಟ್ಟ ಗುಲಾಬಿ ಬಣ್ಣದ ರೇಷ್ಮೆ ಸೀರೆಯ ಸೆರಗು ಆಕರ್ಷಣೀಯವಾಗಿ ಕೊಂಚ ವಾರೆಯಾಗಿದೆ; ಹಸಿರು ಬಣ್ಣದ ಜಂಪರ್ ಕುಪ್ಪಸ ಬಲತೋಳಿನ ಮೇಲುಭಾಗ ಮತ್ತು ಸೀರೆ ವಾರೆಯಾದ ಕಡೆಯ ಎದೆ ಇವನ್ನು ಮುಚ್ಚಿದ್ದು, ಕುತ್ತಿಗೆಯ ಕೆಳಗೆ ಬಿಳಿಯ ಎದೆಯ ಕೊಂಚ ಭಾಗವು ಕಾಣುವಂತೆ ಬಿಟ್ಟಿದೆ. ತಲೆಯನ್ನು ಎಚ್ಚರಿಕೆಯಿಂದ ಬಾಚಿಕೊಂಡು ದಪ್ಪ ಮಲ್ಲಿಗೆಯ ದಂಡೆಯನ್ನು ಮುಡಿದಿದ್ದಾಳೆ. ಸಣ್ಣ ಬೊಟ್ಟು ಕುಂಕುಮ ಹಣೆಯಲ್ಲಿ. ಮುಖವು ಲಜ್ಜೆ ಅಂಜಿಕೆಗಳಿಂದ ಕೊಂಚ ಕೆಂಪಾಗಿದೆ. ಎತ್ತಿದ ಎಡ ಅಂಗೈಯಲ್ಲಿ ಒಂದು ಸಣ್ಣ ಬೆಳ್ಳಿಯ ತಟ್ಟೆ. ಅದರಲ್ಲಿ ಉಪ್ಪಿಟ್ಟು, ಬಿಡಿಸಿದ ಬಾಳೆಯ ಹಣ್ಣು ಎರಡು. ಬಲಗೈಯಲ್ಲಿ ಒಂದು ಬೆಳ್ಳಿಯ ಚೊಂಬು, ಲೋಟ. ಪ್ರವೇಶಿಸಿದವಳೇ ಅರ್ಧ ತೆಗೆದಿದ್ದ ಬಾಗಿಲನ್ನು ಮೆಲ್ಲಗೆ ಕಾಲಿನಿಂದಲೇ ಮುಂದಕ್ಕೆ ಮಾಡುತ್ತಾಳೆ. ಅನಂತರ ಶಬ್ದವಾಗದಂತೆ ಮೆಟ್ಟಂಗಾಲಿನಲ್ಲಿ ನಡೆದು ಮೇಜನ್ನು ಸಮೀಪಿಸಿ ತಟ್ಟೆಯನ್ನೂ ಚೊಂಬನ್ನೂ ಮೇಜದ ಮೇಲೆ ಇಡುತ್ತಾಳೆ. ಅನಂತರ ಗಂಡನ ಮುಖದ ಕಡೆಗೆ ದೃಷ್ಟಿಯನ್ನು ಬೀರಿ, ಕಿಟಿಕಿಯ ಬಳಿಗೆ ಹೋಗಿ ಮಂಚದ ಕಡೆಗೆ ಬೆನ್ನನ್ನು ತಿರುಗಿಸಿ ಹೊರಗೆ ನೋಡುತ್ತ ನಿಲ್ಲುತ್ತಾಳೆ. ಅರೆನಿಮಿಷದಲ್ಲಿ ರಾಮಚಂದ್ರನು ಸದಿಲ್ಲದೆ ಎದ್ದು ಅವಳ ಹಿಂದೆ ಹೋಗಿ ಅವಳಿಗೆ ಒತ್ತಿದಂತೆ ನಿಂತುಕೊಂಡು ಎರಡು ಕೈಗಳಿಂದಲೂ ಅವಳ ಭುಜವನ್ನು ಮುಟ್ಟುತ್ತಾನೆ. ಅವಳು ಬೆಚ್ಚುತ್ತಾಳೆ.]

**ರಾಮಚಂದ್ರ**: ಇದೇಕೆ ನನ್ನ ಚಿನ್ನ, ಇಷ್ಟೊಂದು ಹೆದರಿಕೆ ?

**ತಾರಾ :** ಇ....ಲ್ಲ, ಏನೋ ಯೋಚಿಸುತ್ತಾ ಮೈ ಮರೆತಿದ್ದೆ.

**ರಾಮಚಂದ್ರ** : ಅಹಹ! ಶುದ್ಧ ಕಳ್ಳಿ! ಬಹಳ ದೊಡ್ಡ ದೂರದ ಯೋಚನೆ ಅಲ್ಲವೆ ?

( ತಾರಾ ನಸುನಗುತ್ತ ತಲೆಯನ್ನು ಅವನ ಎದೆಯ ಮೇಲಿರಿಸಿ, ಮೊಗವನ್ನು ಅವನ ಮೊಗದ ಕಡೆಗೆ ಎತ್ತಿ ತಿರಿಗಿಸುತ್ತಾಳೆ. ಅವನು ಅವಳ ಮುಂದಲೆಯನ್ನು ನೇವರಿಸುತ್ತಾನೆ. )

ಪಾಪ, ಬಡಪಾಯಿ ನಾನು ಇರೋದೂ ಮರೆತುಹೋಗಿತ್ತು. ಅಲ್ಲವೆ ? ಈ ಆಟ ಯಾರಿಗೆ ಕಲಿಸುತ್ತೀಯೆ ? ನೀನು ಯಾಕೆ ಹಾಗೆ ಕಿಟಕಿಯ ಹತ್ತಿರ ನಿಂತುಕೊಂಡೆ ಅನ್ನೋದೂ ನನಗೆ ಗೊತ್ತಿಲ್ಲವೆ ?

**ತಾರಾ** : ನೀವು ಮಲಗಿದ್ದಿರಿ ಅಂತ.

**ರಾಮಚಂದ್ರ** : ಹೂಂ. ನಾನೇ ಮಾತನಾಡಿಸಿಕೊಂಡು ಬರಲಿ ಅಂತ. ನನಗೆ ಗೊತ್ತಿಲ್ಲವೆ ನನ್ನ ಮುದ್ದುಗಿಣಿ ಮನಸ್ಸು ?

**ತಾರಾ** : ಓಹೋ. ಬಹಳ ಗೊತ್ತು. ಎಲ್ಲ ನಿಮಗೇ ಗೊತ್ತು. ನೀವು ನಿದ್ದೆ ಬಂದ ಹಾಗೆ ಯಾಕೆ ನಟಿಸಬೇಕೋ ಹಾಗಾದರೆ ?

**ರಾಮಚಂದ್ರ** : ಊ, ಹೂಂ; ಪರವಾಯಿಲ್ಲ. ನೀನು ಏನೋ ಅಂತ ಇದ್ದೆ. ಬಹಳ ಚುರುಕು.

**ತಾರಾ** : ನಮ್ಮ ದೇವರ ಸತ್ಯ ನಾನು ಊಹಿಸಲಾರೆನೆ ?

**ರಾಮಚಂದ್ರ** : ಹಾಗಾದರೆ ಬೆಳಿಗ್ಗೆ ಊಟವಾದ ಮೇಲೆ ತಾಂಬೂಲಾನ ಮೇಜಿನ ಮೇಲೆ ಬಿಡಿದುಬಿಟ್ಟು ಯಾಕೆ ಮಾಯವಾದಳು ನನ್ನ ಅಪ್ಸರೆ ? ಆಗ ಅವಳನ್ನು ಹಿಡಿದುಕೊಳ್ಳುವ ಆಸೆ ನನಗಿರಲಿಲ್ಲ ಅಂತಲೆ ?

**ತಾರಾ** : ಆಗ ಹಾಗೆ ಹಿಡಿದುಕೊಂಡಾರು ಅಂತಾನೆ.

**ರಾಮಚಂದ್ರ** : ಅದು ಯಾಕೆ ಬೇಡ ? ಏನು ಕಾರಣ ?

**ತಾರಾ :** ನಾನು ಇನ್ನೂ ಜಡೆ ಹೆಣೆದುಕೊಂಡಿರಲಿಲ್ಲ, ಹೂ ಮುಡಿದು ಕೊಂಡಿರಲಿಲ್ಲ, ಒಳ್ಳೆಯ ಸೀರೆನೂ........

**ರಾಮಚಂದ್ರ :** ಓಹೋ, ಗುಲಾಬಿ ಹೂ ಅತ್ತರು ಹಾಕಿಕೊಳ್ಳ ಬೇಕಿದ್ದರೇನೋ.

**ತಾರಾ :** ಸಾಕು ನಿಮ್ಮ ಭಾಷಾಲಂಕಾರ ( ನಗುತ್ತಾಳೆ.)

**ರಾಮಚಂದ್ರ :** ಅಲ್ಲದೆ ಆ ಮಾಯ, ಮಾಟ, ನಟನೆ ಎಲ್ಲ ನಾಳೆ ಗಿರಲಿ—ರಾತ್ರಿಗೆ. ಅಲ್ಲವೆ? ಆಗ ಬಂದರಾಯಿತು—ಯಾರು ಬಂದ ರಾಗೆ ಅಂದರೆ—ಹೇಳು ( ಇಬ್ಬರೂ ನಸುನಗುತ್ತಾರೆ.)

**ತಾರಾ :** ಸಧ್ಯ, ಸುಮ್ಮನೆ ಇರಿ. ಮುಚ್ಚಿ ಬಾಯಿ! (ಅವನ ತುಟಿಯ ಮೇಲೆ ತನ್ನ ಬೆರಳನ್ನು ಇಡುತ್ತಾಳೆ. ಅವನು ಅದಕ್ಕೆ ಮುತ್ತಿಡುತ್ತಾನೆ.) ನಿಮಗೆ ನಾಚಿಕೆ ಆಗೋದಿಲ್ಲವೆ ಏನೇನೋ ಹೇಳೋಕೆ ?

**ರಾಮಚಂದ್ರ :** ಅದು ಯಾಕೆ ನಾಚಿಕೆ? ನನ್ನ ರಂಭೆ ಅಂದರೆ ಅದು ತಪ್ಪೆ?

**ತಾರಾ :** ಬಿಡಿ ಆ ಹಾಳು ರಂಭೇನ. ನಾನು ಗರತಿ ಅನ್ನೋದನ್ನು ಮರೀಬೇಡಿ.

**ರಾಮಚಂದ್ರ :** ಆದರೇನು ಕೇಳಿಲ್ಲವೆ "ಕಾರ್ಯೇಷು ದಾಸೀ........"

**ತಾರಾ :** ಸಾಕು, ಸಾಕು ನನಗೆಲ್ಲ ಗೊತ್ತು ನಿಮ್ಮ ಶ್ಲೋಕ. ಎಲ್ಲಿ ಎತ್ತಿ ಹೇಳುತ್ತೀರಿ ಅನ್ನೋದೂ ಗೊತ್ತು. ನಿಮ್ಮ ಮಂತ್ರ, ಕೈಚಳಕ ಎಲ್ಲ ನನಗೆ ಹಳೇದಾಗಿವೆ.

**ರಾಮಚಂದ್ರ :** ಎಲ, ಎಲ! ಏನು ಹುಡುಗಿ ಇದು! ನಿನ್ನ ಗೆಲ್ಲ ಬೇಕಾದರೆ ಮೂರನೆಯ ಮಹಾಯುದ್ಧವೇ ಆಗಬೇಕಲ್ಲ. ಹಳೇದು ಪಳೇದು ಯಾವ ಯುಕ್ತಿಯೂ ಪ್ರಯೋಜನವಿಲ್ಲವಲ್ಲ. ಏನು ಮಾಡೋದಪ್ಪ ?

**ತಾರಾ :** ಏನು ಮಾಡಬೇಡಿ, ತಿಂಡಿ ತೆಗೆದುಕೊಳ್ಳಿ ಈಗ. ನಿದಾನ ವಾಗಿ ಯೋಚಿಸೋರಂತೆ.

**ರಾಮಚಂದ್ರ** : ಹಾಗೇನು ಅಪ್ಪಣೆ ರಾಣಿ ಸಾಹೇಬರದ್ದು ? ನೀನು ಹೇಳೋದು ನಿಜ. ಹೊಟ್ಟೆಗೆ ಅಷ್ಟು ಬಿದ್ದರೆ ಏನಾದರೂ ಪ್ರೇರಣೆ ಬಂದೀತು. ಅಲ್ಲದೆ ಈ ಕಿಟಕಿ ಹತ್ತಿರ ನಿಂತುಕೊಂಡೇನು ನಮ್ಮ ಕೋರ್ಟ್ಶಿಪ್ಪು. ಯಾರಾದರೂ ನೋಡಾರು. ( ರಾಮಚಂದ್ರನು ತಾರೆಯ ಸೊಂಟಕ್ಕೆ ಕೈಹಾಕಿ ಕರೆದುಕೊಂಡು ಹೋಗಿ ಮಂಚದ ಮೇಲೆ ಕೂರಿಸಿಕೊಳ್ಳುತ್ತಾನೆ. )

**ತಾರಾ** : ಬಹಳ ಮಾನವಂತರು— ನಾ ಬಲ್ಲೆ. ಹುಚ್ಚು ಕೆರಳಿದಾಗ ಏನೊಂದೂ ತೋರೋ ಹಾಗೇ ಇಲ್ಲ.

**ರಾಮಚಂದ್ರ** : ಹಾಗೇನು? ಹುಚ್ಚು ಕೆರಳೋದು ಯಾವಾಗ ಅನ್ನೋದು ನಿನಗೆ ಗೊತ್ತಿಲ್ಲವೆ? ಹುಣ್ಣಿಮೆಗೆ ಅಮಾವಾಸ್ಯೆಗೆ. ನೀನು ಎದರಿಗಿದ್ದಾಗ ಹುಣ್ಣಿಮೆ. ಇಲ್ಲದೇ ಇದ್ದಾಗ ಅಮಾವಾಸ್ಯೆ. ನನಗೆ ಯಾವಾಗಲೂ ಹುಚ್ಚೇ ಹೀಗಾಗಿ.

**ತಾರಾ** : ಅಹಹ, ನಾನು ಇದನ್ನೆಲ್ಲ ಬಲ್ಲೆ. ಬರಿ ಬೂಟಾಟಿಕೆ. ನಾನೇನು ಮೋಸ ಹೋಗೋದಿಲ್ಲ— ಮಣಿ ಮಣಿ ಮಾತಿಗೆ.

**ರಾಮಚಂದ್ರ**: ನನ್ನ ಮಣಿಗೆ ಮಣಿ ಮಣಿ ಮಾತೇ ಆಗಬೇಕು. ಈ ಮಣಿ ಸರನೇ ಹಾಕಿ ಬಿಡುತ್ತೀನಿ— ನಿನ್ನ ಕೊರಳಿಗೆ.

**ತಾರಾ**: ಅದೇನೋ ಬಲು ಸುಲಭ.

**ರಾಮಚಂದ್ರ** : ಅಷ್ಟೇ ಅಲ್ಲ ನನ್ನ ಗೊಂಬೆ. ನಿನಗಾಗಿ, ನೋಡು ವರ್ಷದಿಂದ ದುಡಿದು ಅಷ್ಟು ಕೂಡಿಟ್ಟಿದ್ದೇನೆ. ಸುಮಾರು ನೂರು ರೂಪಾಯಿ. ನಿನಗೇ ಅಂತ ಮೀಸಲು. ಏನು ಬೇಕಾದರೂ.......

**ತಾರಾ**: ('ಗಂಭೀರವಾಗಿ ) ಸ್ವಾಮಿ; ನನಗೇನೂ ಬೇಡ. ನಿಮ್ಮ ಪ್ರೇಮ-ದೃಷ್ಟಿ ಒಂದಿದ್ದರೆ ನನಗೆ ಎಲ್ಲವೂ ಅದೇ. ಅದಕ್ಕಿಂತ ಹೆಚ್ಚಿನದು ನನಗೆ ಬೇರೆ ಯಾವುದೂ ಇಲ್ಲ ಜಗತ್ತಿನಲ್ಲಿ; ನಾನು ಬರಿಯ ಕುಚೋದ್ಯ ಮಾಡಿದೆ.

**ರಾಮಚಂದ್ರ**: ನನಗೂ ಗೊತ್ತು ನನ್ನ ದೇವಿಯ ಹೃದಯ. ನನ್ನಲ್ಲೆಯ ನೆಲೆ. ನನಗೆ ನೀನು ನಿನಗೆ ನಾನು ಅಷ್ಟೇ ಸಾಕು— ಈ ಎರಡು ಪ್ರೇಮಿಗಳಿಗೆ. ( ಬೆರಳಿನಿಂದ ತೋರಿಸಿ ಅಭಿನಯಿಸುತ್ತಾನೆ. )

**ತಾರಾ:** ಅಷ್ಟೇ ಸಾಕೊ? ಒಬ್ಬರನ್ನು ಒಬ್ಬರೇನು ತಿಂದು ಬಾಳೋದಕ್ಕೆ ಆಗುತ್ತೆಯೆ? ಊಟ ತಿಂಡಿ ಬೇಕಲ್ಲ. ತೆಗೆದುಕೊಳ್ಳಿ, ಉಪ್ಪಿಟ್ಟು ಆರಿ ಅಕ್ಷತೆಯಾಗಿ ಹೋಗಿರಬೇಕು.

**ರಾಮಚಂದ್ರ** : ಮಾವನ ಹೆಣ್ಣು ಮುಂದಿರುವಾಗ ಕಾರದ ಉಪ್ಪಿಟ್ಟಿಗೆ ಆತುರಪಡುವುದು, ದುಂಬಿ ಕೊಳದ ಕಮಲ ಕರೆಯುವಾಗ ದಡದ ತುಂಬೆಹೂವಿಗೆ ಮೋಸಹೋದ ಹಾಗೆ.

**ತಾರಾ** : ಸರಿ, ಮೊದಲಾಯ್ತು ಮತ್ತೆ ಕಾವ್ಯ ಸಂಭಾಷಣೆ. ನೀವೆಲ್ಲೋ ಆಕಾಶದಲ್ಲೇ ಸಂಚಾರ ಮಾಡೋರು. ಭೂಮಿಗೆ ಇಳಿದೇ ಅಭ್ಯಾಸವಿಲ್ಲ.

**ರಾಮಚಂದ್ರ** : ಹೋಗಲಿ ಹಾಗಾದರೆ. ನೀನು– ನನ್ನ ಯಜಮಾನಿ–ದಾರವನ್ನು ಇಷ್ಟು ಸೆಳೆಯುತ್ತಿದ್ದರೆ ನನ್ನ ಪಟ ಕೆಳಗೆ ಬರದೆ ಹೇಗೆ ಇರೋದು? ಬಾ, ನೀನೂ ನಾನೂ ಇಬ್ಬರೂ ಈ ಉಪ್ಪಿಟ್ಟಿನ ಲೋಕಕ್ಕೆ ಇಳಿಯೋಣ– ತಗೋ.

**ತಾರಾ** : (ತಿಂಡಿಯನ್ನು ತೆಗೆದುಕೊಡುತ್ತ) ನನಗೆ ಒಳಗಿದೆ. ಇದು ನಿಮಗೆ.

**ರಾಮಚಂದ್ರ** : ಅದೇನು ಮಾಮೂಲು ಹೇಳಿಕೆ. ಬಾ, ನೋಡು ಇದಕ್ಕೆ ಎರಡು ಮಿಳ್ಳೆ ತುಪ್ಪ ಜಾಸ್ತಿ ಹಾಕಿದೆ. ನೀನೇ ಸಾಕ್ಷಿ ಅದಕ್ಕೆ. ಅಲ್ಲವೆ ಹೇಳು?

**ತಾರಾ:** ಹುಂ; ಅಳಿಯಂದಿರಲ್ಲವೆ ಎಷ್ಟಾದರೂ?

**ರಾಮಚಂದ್ರ** : ಅಳಿಯಂದಿರೊ, ಯಜಮಾನರೋ. ನೀನೇ ಕದ್ದು ಹಾಕಿಕೊಂಡು............

**ತಾರಾ** : ಕದಿಯೋದು ಯಾಕೆ? ಮನೆಯಲ್ಲಿ ನನ್ನ ಕಾರಬಾರೂ ನಡೆಯುತ್ತೆ.

**ರಾಮಚಂದ್ರ**: ಸರಿ ಮತ್ತೆ. ನೋಡು ನಿನ್ನ ಕೈವಾಡವನ್ನೆ. ಉಪ್ಪು ಜಾಸ್ತಿಯೋ, ಕಾರಾನೋ.

**ತಾರಾ:** ಓಹೊ, ಇದೆಲ್ಲ ನನಗೆ ಗೊತ್ತಿದೆ– ಉಪಾಯ.

**ರಾಮಚಂದ್ರ:** ಹೋಗಲಿ ಬಿಡು. ಆ ತಂತ್ರ ಈ ತಂತ್ರ ಎಲ್ಲ ಯಾಕೆ. ಎಲ್ಲ ನೇರವಾಗಿಯೇ ಆಗಲಿ. ಎಲ್ಲದರಲ್ಲೂ ನಾವು ಸಮಭಾಗಿಗಳು ತಾನೆ? (ತಿಂಡಿಯನ್ನು ಎರಡು ಪಾಲು ಮಾಡಿ ಕೊಂಚವನ್ನು ಅವಳಿಗೆ ತಿನ್ನಿಸಲು ಯತ್ನಿಸುತ್ತಾನೆ.)

**ತಾರಾ:** ಬಿಡಿ, ನಿಮ್ಮ ಸಹಾಯವೇನು ಬೇಡ. ನಾನೇ..........

**ರಾಮಚಂದ್ರ:** ಹಾಗುಂಟೆ? ಮದುವೆಯಲ್ಲಿ ಬಹಿರಂಗವಾಗಿ ಮಾಡುವ ನಾಟಕ ಬರೀ ನಾಚಿಕೆ, ಕೃತಕ. ಈಗಾದರೆ ಅದರ ನಿಜವಾದ ಸ್ವಾರಸ್ಯ. ಕೊಂಚ ನೋಡು, ನನ್ನ ಕೈಯಿಂದು ಬಹಳ ರುಚಿ.

**ತಾರಾ:** ಸರಿ, ಸರಿ. (ರಾಮಚಂದ್ರನು ಮೃದುವಾಗಿ ತಿನ್ನಿಸುತ್ತಾನೆ.) ಇದು ನೋಡಿ ಹೇಗಿದೆ, ಹಾಗಾದರೆ (ಅವಳೂ ಕೊಂಚ ತೆಗೆದುಕೊಂಡು ಅವನ ಬಾಯಿನ ಹತ್ತಿರ ತರುತ್ತಾಳೆ.)

**ರಾಮಚಂದ್ರ:** (ತಿನ್ನುತ್ತಾ ಚಪ್ಪರಿಸಿ) ಇನ್ನು ಹೇಗೆ? ಗಿಣಿ ಕುಕ್ಕಿದ ಸೀಬೆ ಹಣ್ಣಿನಂತೇ. ಹುಂ. ಬಹಳ ರುಚಿ ನಿನ್ನ ಭಾಗ ನನಗೆ ಕೊಡು.

**ತಾರಾ:** ನಿಮ್ಮದನ್ನು ನನಗೆ ಕೊಟ್ಟರೆ

**ರಾಮಚಂದ್ರ:** ಹೂಂ. ಈಗ ಸ್ವಲ್ಪ ಹೊತ್ತಿನ ಕೆಳಗೆ ನನಗೆ ಎಲ್ಲವನ್ನೂ–ನಿನ್ನನ್ನೂ ಸೇರಿಸಿಕೊಂಡು– ಅರ್ಪಿಸಿದ್ದೆ ದೇವರಿಗೆ ನೈವೇದ್ಯ ಮಾಡಿದಂತೆ. ಈಗ ಆಗಲೇ ವ್ಯಾಪಾರದ ಪ್ರಕೃತಿ ಬಂತು?

**ತಾರಾ:** ನೈವೇದ್ಯ ಆಗಿ ಪ್ರಸಾದ ಸಿಕ್ಕರೆ ಯಾರಿಗೆ ಬೇಡ? ಇನ್ನು ಕರಾರು ಅಂತ ಆದಮೇಲೆ ವ್ಯಾಪಾರದಂತೇ. ನಿಮ್ಮ ಪುಸಿಲಾವಣೆ, ನಿರ್ಬಂಧಕ್ಕೆ ನಾನು ಆಳೇ? ಅದಕ್ಕೇ ತಗೊಂಡೆ.

**ರಾಮಚಂದ್ರ:** ಓಹೋ, ಇದೊಂದು ಹೊಸ ಆಟವೋ? ಹಾಗಾದರೆ ಪುಸಿಲಾವಣೆ, ಮೃದುವಾದ ನಿರ್ಬಂಧ ಇಲ್ಲದೆ ನಿನ್ನಲ್ಲಿ ಏನೂ ಸಾಗೋದಿಲ್ಲ ಅನ್ನು? ನಿನ್ನಿಂದ ಏನನ್ನೂ ಪಡೆಯಲಾಗೋದಿಲ್ಲ ಅನ್ನು?

**ತಾರಾ :** ಸುಲಭದ ಸಾಮಾನಿಗೆ ಬೆಲೆ ಕೊಟ್ಟೇರ–ನೀವು ಗಂಡಸರು ?

**ರಾಮಚಂದ್ರ :** ಹುಂ. ಹಾಗಾದರೆ ನಾನು ಕಲಿಯೋದು ಇನ್ನೂ ಬಹಳ ಇದೆ– ಅಲ್ಲವೆ ?

**ತಾರಾ :** ಅಡ್ಡಿಯಿಲ್ಲದೆ.

**ರಾಮಚಂದ್ರ :** ನಮ್ಮ ತಂದೆ ತಾಯಿಯೂ ಹಾಗೇ ಅನ್ನುತ್ತಾರೆ. ನೀನೂ ಹಾಗೇ ಅನ್ನುತ್ತೀಯೆ.... ನಿಜವಿರಬೇಕು.

**ತಾರಾ :** ಛೆ, ಹಾಗಲ್ಲ. ಕೆಲವು ವಿಷಯಗಳಲ್ಲಿ ಕಲಿಯೋದು ಇದ್ದೇ ಇರುತ್ತೆ– ಮುಗಿಯೋದೇ ಇಲ್ಲ.

**ರಾಮಚಂದ್ರ :** ಉದಾಹರಣೆಗಾಗಿ ?

**ತಾರಾ :** ನೀವೇ ಹೇಳಿ ಈಗ.

**ರಾಮಚಂದ್ರ :** ಕೋರ್ಟ್‌ಷಿಪ್ !

**ತಾರಾ :** ನೂರಕ್ಕೆ ನೂರು ನಂಬರು !

**ರಾಮಚಂದ್ರ :** ಹೋಗಲಿ, ಈಗ ಈ ಕೀರು......... (ಕೀರನ್ನು ಬಗ್ಗಿಸಿ ಕೊಳ್ಳುತ್ತಾನೆ).

**ತಾರಾ :** ಅದೂ ತಣ್ಣಗಾಗಿರಬೇಕು.

**ರಾಮಚಂದ್ರ :** ಆದರೇನು, ನಾವು ಬಿಸಿಯಾಗಿದ್ದೇವಲ್ಲ.

**ತಾರಾ :** ನನ್ನಲ್ಲೇನು ಕಾವಿಲ್ಲ, ತಣ್ಣಗೇ ಇದ್ದೀನಿ.

**ರಾಮಚಂದ್ರ :** ಹಾಗಾದರೆ ನನ್ನದಷ್ಟನ್ನು ತೆಗೆದುಕೊ. (ಇನ್ನೂ ಹತ್ತಿರಕ್ಕೆ ಎಳೆದುಕೊಳ್ಳುತ್ತಾನೆ). ನೋಡು ನಿನ್ನ ಕೀರಿನ ರುಚಿ.

**ತಾರಾ :** ನಾನು ನೋಡಿಯೇ ಇದ್ದೀನಿ. ಈಗ ರುಚಿ ನೋಡಬೇಕಾದೋರು ನೀವು.

**ರಾಮಚಂದ್ರ :** ಹಾಗೋ, ಹಾಗಾದರೆ ರುಚಿ ನೋಡುತ್ತೀನಿ, ಒಂದೊಂದಾಗಿ.

ತಾರಾ: ಇನ್ನೇನು ಇಲ್ಲ. ಅಷ್ಟೆ.

ರಾಮಚಂದ್ರ: ಅಷ್ಟೇನೆ– ನಿಜವಾಗಿ? (ಚೇಷ್ಟೆಯ ನಗುವನ್ನು ತೋರಿಸುತ್ತಾನೆ).

ತಾರಾ: (ಅನುಮಾನಿಸಿ) ನಾನು ಓಡಿ ಹೋಗುತ್ತೀನಿ.

ರಾಮಚಂದ್ರ: ನಿನ್ನ ಬಿಡೋರು ಯಾರು? ಇರಲಿ, ಸದ್ಯಕ್ಕೆ ಏನೂ ಭಯವಿಲ್ಲ (ಕೀರನ್ನು ಕೊಂಚ ಕುಡಿದು) ಆಹಾ, ಎಷ್ಟು ರುಚಿಯಾಗಿದೆ! ಈಗ ನೀನು ನೋಡು. (ಬಟ್ಟಲನ್ನು ಅವಳ ಬಾಯಿಗೆ ನೋಕಿಸಲು ಹೋಗುತ್ತಾನೆ.)

ತಾರಾ: (ಅವಳು ತಲೆಯನ್ನು ಕೊಂಚ ತಿರುಗಿಸಿಕೊಂಡು) ಉಹುಂ. ಎಂಜಲು.

ರಾಮಚಂದ್ರ: ಹುಂ! ಬಹಳ ಆರೋಗ್ಯಶಾಸ್ತ್ರ ಓದಿದ ಹಾಗಿದೆ. ಹಾಗೇ ಪ್ರೇಮಶಾಸ್ತ್ರನೂ ತಿಳಿದುಕೊಂಡಿದ್ದೀಯೋ? ಹೋಗಲಿ ಬಿಡು. ಬಟ್ಟಲಿನ ಇನ್ನೊಂದು ಕಡೆಯಿಂದ ಕುಡಿದರಾಯಿತು. ಆದರೆ ತುಟಿಗೆ ತುಟಿ ಸೇರಿದಾಗ ದೋಷವಿಲ್ಲವೋ?

ತಾರಾ: ನಾನೊಬ್ಬಳು ಪೆಚ್ಚಿ (ನಕ್ಕು ಕೀರನ್ನು ಕುಡಿಯುತ್ತಾಳೆ).

ರಾಮಚಂದ್ರ: (ಬಟ್ಟಲನ್ನು ಮೇಜಿನ ಮೇಲೆ ಇಡಿಸಿ) ಕೀರಿಗೆ ಸಕ್ಕರೆ ಸಾಲದು.

ತಾರಾ: ಎಲ್ಲ ನಾಕು.

ರಾಮಚಂದ್ರ: ಸಾಲದು ಅಂತೀನಿ!

ತಾರಾ: ಸುಳ್ಳು! ಎಲ್ಲ ತಮಾಷೆ.

ರಾಮಚಂದ್ರ: ನಿನಗೆ ಸರಿಯಾಗಿತ್ತೆ?

ತಾರಾ: ಇನ್ನೂ ಹೆಚ್ಚು.

ರಾಮಚಂದ್ರ: ಏ, ಹಾಗಾದರೆ ಅದು ಹಾಯ್ತು ನಿನ್ನ ತುಟಿಯಲ್ಲಿ ಏನೋ ವಿಶೇಷವಿರಬೇಕು. ಪರೀಕ್ಷೆ ಮಾಡಲೋ?

**ತಾರಾ:** ಉಹುಂ.

**ರಾಮಚಂದ್ರ:** ಹುಂ.

**ತಾರಾ:** ಅದೆಲ್ಲ ಬೇಡ– ಇವತ್ತು (ಎದ್ದು ನಿಲ್ಲುತ್ತಾಳೆ).

**ರಾಮಚಂದ್ರ:** ಏ! ಇರಲಿ. ಬಾ ನನ್ನ ಬಂಗಾರಾ! ( ಕೈ ಹಿಡಿದು ಕೊಳ್ಳುತ್ತಾನೆ )

**ತಾರಾ:** ನಿಮಗೆ ಹುಚ್ಚು.

**ರಾಮಚಂದ್ರ:** ನಿಜ

**ತಾರಾ:** ಬಿಡಿ, ಹೋಗಬೇಕು. ( ಕೈ ಕೊಡಹಿಕೊಂಡು ಹೋಗಲು ಯತ್ನಿಸುತ್ತಾಳೆ.)

**ರಾಮಚಂದ್ರ:** ಉಹುಂ ನಾನು ಬಿಡೋದಿಲ್ಲ. ( ಅವಳ ಕೈ ಬಿಟ್ಟು ಬೇಗನೆ ಬಾಗಿಲಿನ ಬಳಿಗೆ ಹೋಗಿ ಅಗಣಿಯನ್ನು ಸದ್ದಿಲ್ಲದಂತೆ ಹಾಕಿಕೊಂಡು ನಸುನಗುತ್ತ ) ಈಗ ?

— ತೆರೆ —

## ದೃಶ್ಯ ೩

( ಸ್ಥಳ: ದೇವಯ್ಯನ ಮನೆಯ ಹಜಾರ. ಅಲ್ಪ ಸ್ವಲ್ಪ ಬದಲಾವಣೆಗಳಿಂದ ಗುಂಡಪ್ಪನ ಮನೆಯ ಹಜಾರದ ರೀತಿಯೇ ಇದೂ. ರಾತ್ರಿಯ ಕಾಲವಾಗಿದ್ದು ದೀಪವೊಂದು ಉರಿಯುತ್ತಿರುತ್ತದೆ. ನೆಲದ ಮೇಲೆ ಎರಡು ದೊಡ್ಡ ಚಾಪೆಗಳು ಹಾಕಲ್ಪಟ್ಟಿವೆ. ಒಂದರ ಮೇಲೆ ಗುಂಡಪ್ಪ ಮತ್ತು ರಾಮಚಂದ್ರ ಕುಳಿತು ತಾಂಬೂಲವನ್ನು ಹಾಕಿಕೊಳ್ಳುತ್ತಿರುತ್ತಾರೆ. ಇದಿರು ಭಾಗದಲ್ಲಿ ದೇವಯ್ಯನು ನಶ್ಯವನ್ನು ಸೇದುತ್ತಿರುತ್ತಾನೆ. ಕಾಲ: ರಾತ್ರಿ ಸುಮಾರು ಒಂಬತ್ತು ಗಂಟೆಯ ಸಮಯ.]

**ಗುಂಡಪ್ಪ:** ನೀವೇನೋ ನಿಷೇಕ ನಾಳೆಗೆ ನಿಷ್ಕರ್ಷೆ ಮಾಡಿ ಬರೆದು ಬಿಟ್ಟಿರಿ. ನಾವೂ ತಟ್ಟಂತ ನೇರವಾಗಿ ಬಂದೇ ಬಿಟ್ಟೆವು—ಹಿಂದು ಮುಂದೆ

ನೋಡದೆ. ಈಗ ಎಲ್ಲ ಹಾಗೇ ಯೋಚಿಸುತ್ತಾ ನನಗೆ ಅನ್ನಿಸುತ್ತೆ, ನಾವು ಒಪ್ಪಿಕೊಂಡು ಬಂದದ್ದು ಸರಿಯೋ ಈಗಲೇ ಅಂತ.

**ದೇವಯ್ಯ :** ಯಾಕೆ? ಅದರಲ್ಲೇನಿದೆ—ದೋಷ? ಅಡ್ಡಿ ಆತಂಕ ಒಡ್ಡದೆ ದೊಡ್ಡ ಮನಸ್ಸು ಮಾಡಿ ಬಂದುಬಿಟ್ಟರಲ್ಲ. ಅದು ದೊಡ್ಡ ಸಂತೋಷ—ನಮಗೆ.

**ಗುಂಡಪ್ಪ :** ಅದು ಸರಿ ಹಾಗೇ ಆಗಬೇಕಾದದ್ದು. ಆದರೆ....

**ದೇವಯ್ಯ :** (ಆತಂಕದಿಂದ) ಆದರೆ....ಏನು?

**ಗುಂಡಪ್ಪ :** ನೋಡಿ, ನಾವು ಒಂದು ದೊಡ್ಡ ಪೀಕಲಾಟಕ್ಕೆ ಸಿಕ್ಕಿ ಹಾಕಿಕೊಂಡಿದ್ದೀವಿ. ಆದರಿಂದ ಹೇಗೆ ತಪ್ಪಿಸಿಕೊಳ್ಳೋದೋ ತಿಳಿಯದ ಹಾಗಾಗಿದೆ.

**ದೇವಯ್ಯ :** ಅಂಥಾದ್ದೇನು ?.

**ಗುಂಡಪ್ಪ :** ನೋಡಿ, ನಿಮ್ಮ ಅಳಿಯನ ಕೆಲಸದ ಸಲುವಾಗಿ ಐನೂರು ರೂಪಾಯಿ ಕರ್ಚಾಗಬೇಕಾಗಿ ಬಂತು—ಅಗತ್ಯ.

**ದೇವಯ್ಯ :** ಸರಿ ಸರಿ, ಗೊತ್ತಾಯಿತು. ಇಲ್ಲದೆ ಇದ್ದರೆ ಹಾಗೆ ನೇರವಾಗಿ ಕೆಲಸ ಸಿಕ್ಕೋಣ ಅಂದರೇನು. ಅರ್ಜಿ, ಬೋರ್ಡು, ಭೇಟಿ, ಅದು, ಇದು ಅಂತ ನೂರೆಂಟು ಫಜೀತಿ ಇದ್ದೇ ಇದೆಯಲ್ಲ.

**ಗುಂಡಪ್ಪ :** ಹಣವೊಂದು ಸುರಿದರೆ ಸರಿ, ಅದೆಲ್ಲ ಹೇಗೋ ಸರಿ ಹೋಗಿಸಿಕೊಂಡು ಬಿಡುತ್ತಾರೆ—ಏನೇನೋ ಬರೆದುಕೊಂಡು, ಮಾಡಿಕೊಂಡು. ಅದರಲ್ಲೆಲ್ಲ ಬುದ್ಧಿವಂತರು. ಆದರೆ ಹಣದ್ದೊಂದೇ ತಾಪತ್ರಯ. ಅದನ್ನು ಎಲ್ಲಿಂದ ಹೊಂದಿಸೋದು?

**ದೇವಯ್ಯ :** ಬಹಳ ಕಷ್ಟ—ಈಗ ಬಿಡಿಕಾಸೂ ಹುಟ್ಟೋದಿಲ್ಲ.

**ಗುಂಡಪ್ಪ :** ಕಡೆಗೆ ವಿಧಿಯಿಲ್ಲದೆ ಕೊಂಚ ಕೆಟ್ಟ ಕಡೆಯಿಂದಲೇ ಸಾಲ ತಂದಿದ್ದಾಯ್ತು.

**ದೇವಯ್ಯ :** ಹುಂ.

**ಗುಂಡಪ್ಪ :** ಈಗ ವರ್ಷ ಕಳೆದು ಗಡುವು ತೀರಿಹೋಯ್ತು. ಅವನು ದಾವಾ ಮಾಡುತ್ತೀನಿ ಅಂತ ಕೂತಿದ್ದಾನೆ. ಪತ್ರಕ್ಕೆ ನಿಮ್ಮ ಅಳಿಯನೂ ರುಜು ಹಾಕಿದ್ದಾನೆ. ನಿಜ ಹೇಳಬೇಕು ಅಂದರೆ ಅವನ ಆಧಾರದ ಮೇಲೇ ಈ ಸಾಲ ಸಿಕ್ಕಿದ್ದು.

**ದೇವಯ್ಯ:** ಒಳ್ಳೆಯ ಸಂಕಟವೇ ಬಂತಲ್ಲ!

**ಗುಂಡಪ್ಪ :** ಸಂಕಟ ಅಂತ ಕೇಳುತ್ತೀರ. ಅವನು ದಾವ ಹಾಕಿ ವಾರಂಟು ಕಳುಹಿಸಿದ ಅಂದರೆ ಅಷ್ಟು ಕಷ್ಟಪಟ್ಟು ಸಂಪಾದಿಸಿದ ಕೆಲಸಕ್ಕೆ ಮಣ್ಣು ಬೀಳೋ ಸಂಭವ.

**ರಾಮಚಂದ್ರ :** ಅದು ಯಾಕೆ? ನಮ್ಮ ಸಾಲ ತೀರಿಸೋದು ಬಿಡೋದು ನಮ್ಮ ಪಾಡು.

**ಗುಂಡಪ್ಪ :** ಹಾಗಲ್ಲಪ್ಪ ಮಗು,.... ನಿನಗಿನ್ನೂ ತಿಳಿಯದು.

**ರಾಮಚಂದ್ರ :** (ಆಶ್ಚರ್ಯ ವಿಷಾದಗಳಿಂದ) ಮತ್ತೆ? ನನಗೆ ಇದು ಗೊತ್ತೇ ಇರಲಿಲ್ಲ.

**ಗುಂಡಪ್ಪ :** ಇದೆಲ್ಲ ನಿನ್ನ ಹತ್ತಿರ ಪ್ರಸ್ತಾಪ ಮಾಡಿ ಪ್ರಯೋಜನವಿಲ್ಲ ಅಂತ ನಿನಗೆ ಯಾವುದನ್ನೂ ಹೇಳಿರಲಿಲ್ಲ. ನೀನು ಹುಡುಗ. ಏನು ಮಾಡೀಯೇ? ಬರಿ ಒದ್ದಾಡಿಕೊಳ್ಳಬಲ್ಲೆ– ಅಷ್ಟೆ.

**ರಾಮಚಂದ್ರ :** ಏನು, ಕೆಲಸದಿಂದ ವಜ ಮಾಡಿ ಬಿಡುತ್ತಾರೆಯೆ?

**ಗುಂಡಪ್ಪ :** ಇಲ್ಲ. ನಿನ್ನ ಸಾಲ ತೀರಿಸಿಕೊಂಡು ಬಾ ಅಂತ ಸರಕಾರದವರು ಕೆಲಸ ತಪ್ಪಿಸಬಹುದು. ಇನ್ನೇನು ಅದೂ ವಜ ಮಾಡೋದೂ ಎರಡೂ ಒಂದೇ.

**ರಾಮಚಂದ್ರ :** ಹುಂ!

**ದೇವಯ್ಯ :** ಅದೊಂದು ವಾಡಿಕೆ ತಾನೆ?

**ಗುಂಡಪ್ಪ :** ಬರೋದು ನಾಲ್ಕು ಕಾಸೂ ತಪ್ಪಿಸಿ ಸಾಲ ತೀರಿಸು ಅಂದರೆ ಹೇಗಾಗುತ್ತೆ?

**ದೇವಯ್ಯ :** ಏನೋ ಸರಕಾರದವರೇ ಅಷ್ಟು ಮುಂಗಡವಾಗಿ ಕೊಟ್ಟು ನಿದಾನವಾಗಿ ಅಷ್ಟಷ್ಟನ್ನು ತೀರಿಸಿಕೊಳ್ಳಬಹುದು— ಯೋಗ್ಯರಾದವರಿಗೆ ಎಚ್ಚರಿಕೆಯನ್ನಾದರೂ ಕೊಟ್ಟು.

**ಗುಂಡಪ್ಪ :** ಅದಕ್ಕೆಲ್ಲ ಕಟ್ಟಳೆ- ಕಾನೂನು ಇರಬೇಕಲ್ಲ. ಅವಿಲ್ಲದೆ ಮಾತೇ ಇಲ್ಲ— ಇಂಥ ಸಂದರ್ಭದಲ್ಲಿ.

**ದೇವಯ್ಯ :** ಅಲ್ಲದೆ ಅವರ ಕಷ್ಟನೂ ಬಹಳ ಇದರಿಂದ.

**ಗುಂಡಪ್ಪ :** ಅದು ಹೇಗಾದರೂ ಅವರಿಗೇಕೆ, ಈ ತಂಟೆ ? ಇಷ್ಟಕ್ಕೂ ಯಾವುದಾದರೂ ಕೆಲಸ ಖಾಲಿ ಆಗೋದೆ ಬೇಕು. ಇನ್ನಷ್ಟು ಗುಟ್ಟಾಗಿ ಸಂಪಾದನೆ ಮಾಡಬಹುದು ಅದರ ಮೇಲೆ. ನಾನು, ತಾನು ಅಂತ ನೂರಾರು ಜನ ಸುಮ್ಮನೆ ಮೇಲೆ ಬೀಳುತ್ತಾ ಇರುತ್ತಾರೆ- ಅವರನ್ನು ತೃಪ್ತಿಪಡಿಸೋ ದಿಕ್ಕೆ.

**ದೇವಯ್ಯ :** ನಿಜ, ಹಾಗೂ ನಾವು ನೋಡಬೇಕು.

**ಗುಂಡಪ್ಪ :** ಅಂತೂ ನೋಡಿ ದೊಡ್ಡ ಫಜೀತಿಗೆ ಇಟ್ಟುಕೊಂಡಿದೆ. ತಕ್ಷಣ ಹಣ ಸಿಕ್ಕದೆ ಇದ್ದರೆ ಇದು ಹೇಗೆ ಕೊನೆಗಾಣುತ್ತೋ, ಇನ್ನೂ ಎಲ್ಲೆಲ್ಲಿಗೆ ನಿಂತುಕೊಳ್ಳುತ್ತೋ ಹೇಳಲಾರೆ.

**ರಾಮಚಂದ್ರ :** ಅಪ್ಪ, ನಾವು ಮಾಡಿದ್ದು ಬಹಳ ತಪ್ಪಾಯಿತು.

**ಗುಂಡಪ್ಪ :** ಇರಬಹುದು. ಆದರೆ ಬೇರೆ ಗತಿಯೇ ಇರಲಿಲ್ಲವಲ್ಲ.

**ರಾಮಚಂದ್ರ :** ಈಗ ಏನು ಮಾಡೋದು ?

**ಗುಂಡಪ್ಪ :** ಮಾಡೋದೇನು. ನಾನು ಮಾಡೋದನ್ನೆಲ್ಲ ಒಂದು ಚೂರೂ ಬಿಡದೆ ಮಾಡಿ ಬಿಟ್ಟಿದ್ದೀನಿ. ಏನೂ ಪ್ರಯೋಜನವಾಗಲಿಲ್ಲ. ಇನ್ನು ನಿಮ್ಮ ಮಾವನವರು ಅಷ್ಟು ನಮ್ಮ ಸಹಾಯಕ್ಕೆ ಬರಬೇಕು ಅಷ್ಟೆ.

**ದೇವಯ್ಯ :** ಅಯ್ಯೊ, ಸಾಧ್ಯವಿದ್ದರೆ ನೀವು ಬಾಯಿಬಿಟ್ಟು ಹೇಳಬೇಕೆ ? ನಾನೇ ಮುಂದೆ ಬರುತ್ತಿದ್ದೆ. ನನ್ನ ಸ್ಥಿತಿ ಬಹಳ ಕೆಟ್ಟುಹೋಗಿದೆ.

ಈ ನಿಷೇಕಕ್ಕೆ ಅಷ್ಟು ಇಷ್ಟು ಹೊಂದಿಸೋದು ವಿಶ್ವಪ್ರಯತ್ನವಾಗಿ ಹೋಯ್ತು.

**ಗುಂಡಪ್ಪ :** ನಾನು ನೌಕರಿಯಲ್ಲಿದ್ದರೆ ಹೇಗಾದರೂ ಮಾಡುತ್ತಿದ್ದೆ. ಈಗ ಕೈಕಾಲು ಮೂಗು ಬಾಯಿ ಎಲ್ಲ ಕಟ್ಟಿದ ಹಾಗಿದೆ. ನೀವಾದರೆ ಇನ್ನೂ ....

**ದೇವಯ್ಯ :** ಅಯ್ಯಯ್ಯೋ, ಬಡ ಸ್ಕೂಲು ಮೇಷ್ಟ್ರು ನಾನೇನು ಮಾಡಬಲ್ಲೆ? ನಿಮಗೆ ಗೊತ್ತಿಲ್ಲವೆ, ಮೇಷ್ಟರು ಯಾವಾಗಲೂ ಒಪ್ಪೊತ್ತಿನಲ್ಲೇ ಬೆಳೆಯೋರು ಅಂತ. ಅವರಿಗೆ ಎರಡು ಹೊತ್ತು ಹಾಕೋ ವಿವೇಕ ಈ ಸರಕಾರಗಳಿಗೆ ಇದೆಯೆ? ಇನ್ನು ನೂರಾರು ರೂಪಾಯಿ ಅಂದರೆ ನಮಗೆ ಬರಿಯ ಕನಸಿನ ಮಾತು. ಇನ್ನೇನೂ ಬೇರೆ ಉಪಾಯವಿಲ್ಲವೆ, ಇದಕ್ಕೆ?

**ಗುಂಡಪ್ಪ:** ಇನ್ನೇನು?

**ದೇವಯ್ಯ :** ಈ ಬಾರಿ ಬಡ್ಡಿ ಕೊಟ್ಟು ಇನ್ನೊಂದು ವರುಷ....

**ಗುಂಡಪ್ಪ:** ಮಾರ್ವಾಡಿ ಅಂತಾನೆ, ಅವನಿಗೆ ಇನ್ನೂ ಹೆಚ್ಚಿಗೆ ಬಡ್ಡಿ ಬರುತ್ತಂತೆ. ನನಗೇ ಹದಿನೈದರಂತೆ ಕೊಟ್ಟಿದ್ದಾನೆ.

**ದೇವಯ್ಯ :** ಅಬ್ಬಬ್ಬ !

**ಗುಂಡಪ್ಪ:** ಏನು ಅಂತೀರ. ಇವರು– ಈ ವ್ಯಾಪಾರಸ್ಥರು ಸಮಾಜದಲ್ಲಿ, ಹಾಸಿಗೆಯಲ್ಲಿರೋ ತಿಗಣೆ ಹಾಗೆ ಆಗಿದ್ದಾರೆ. ಕಡಿದು ಕಡಿದು ರಕ್ತ ಹೀರುತ್ತಾ ಇರೋದೆ ಇವರ ಕೆಲಸ.

**ದೇವಯ್ಯ :** ಇನ್ನಷ್ಟು ಗಡುವನ್ನಾದರೂ ಕೇಳಿದರೆ?

**ಗುಂಡಪ್ಪ :** ನಾನೇನೋ ಆರು ತಿಂಗಳು ಕಾಲವನ್ನಾದರೂ ಕೊಡು ಅಂತ ದಮ್ಮಯ್ಯಗುಡ್ಡೆ ಹಾಕುತ್ತಾ ಇದ್ದೀನಿ. ಅದು ಆದರೆ ತಾನೆ ಏನು ಪ್ರಯೋಜನ?

**ದೇವಯ್ಯ :** ಅಷ್ಟರಲ್ಲಿ ಎಲ್ಲರೂ ಸೇರಿಕೊಂಡು ಸಾಧ್ಯವಾದದ್ದೆಲ್ಲ ಮಾಡಿ ನೋಡಬಹುದು. ನನ್ನಿಂದ ಏನು ಬಹಳ ಆಗಲಾರದು.

**ಗುಂಡಪ್ಪ :** ಏನಾದರೂ ನಿಮ್ಮಿಂದಲೇ ಬಹಳ ಆಗಬೇಕು. ಕಡೆಯ ಪಕ್ಷ ಸಮಭಾಗವಾಗಿ ನಿಮ್ಮಿಂದ ಮುನ್ನೂರಾದರೂ....

**ದೇವಯ್ಯ :** ಮುನ್ನೂರು !....ಹುಂ. ಅದೂ ಆಗಬಹುದು ಸಾಧ್ಯವೊಂದಾದರೆ.

**ಗುಂಡಪ್ಪ :** ಸಾಧ್ಯವಾಗಲೇ ಬೇಕು ದೇವಯ್ಯನೋರೆ. ನನಗೆ ಮಗ ಸೊಸೆ ಹೇಗೋ ನಿಮಗೂ ಅಳಿಯ ಮಗಳು. ಇವರಿಗಾಗಿ ಏನಾದರೂ ಮಾಡಲೇಬೇಕು.

**ದೇವಯ್ಯ :** ನಿಜ. ಯಾರು ಇಲ್ಲ ಅಂತಾರೆ. ಆದರೆ ಇಷ್ಟದಂತೇ ಶಕ್ತಿಯೂ ಇರಬೇಕಲ್ಲ.

**ಗುಂಡಪ್ಪ :** ಇಲ್ಲ. ಇಷ್ಟಕ್ಕೆ ನೀವು ಒಪ್ಪಿಕೊಳ್ಳದಿದ್ದರೆ ನಡೆಯುವ ಹಾಗೇ ಇಲ್ಲ.

**ದೇವಯ್ಯ :** ನನಗೇನೂ ತೋಚೋ ಹಾಗೇ ಇಲ್ಲ. ಆಗಲಿ ನೋಡುತ್ತೀನಿ.

**ಗುಂಡಪ್ಪ :** ಹಾಗೆಲ್ಲ ಆಗೋದೇ ಇಲ್ಲ ಅಂತ ಹೇಳಿಬಿಟ್ಟಿನಲ್ಲ. ನೀವು ಅರ್ಧ ಭಾರವನ್ನಾದರೂ ಹೊತ್ತುಕೊಳ್ಳಲೇ ಬೇಕು.

**ದೇವಯ್ಯ :** ಇನ್ನೇನು ಮಾಡಲಿ ? ಆಗಬಹುದು. ನನ್ನ ಕೈಲಾದದ್ದನ್ನೆಲ್ಲ ಮಾಡುತ್ತೇನೆ.

**ಗುಂಡಪ್ಪ :** ಹಾಗಲ್ಲ ದೇವಯ್ಯನೋರೆ. ಭರವಸೆಯೇ ಬೇಕು. ಬೇರೆ ಗತಿಯೇ ಇಲ್ಲ.

**ದೇವಯ್ಯ :** ಈಶ್ವರ ಇದ್ದಾನೆ. ಬಲು ದೊಡ್ಡ ಭಾರ—ನನಗೆ. ನಾನಂತೂ ವಂಚಿಸದೆ ಪ್ರಯತ್ನಿಸುತ್ತೀನಿ.

**ಗುಂಡಪ್ಪ :** ( ಅನುಮಾನಿಸುತ್ತ ಅರ್ಧಸಿಟ್ಟಿನಿಂದ ) ಇದನ್ನೆಲ್ಲ ನೋಡಿದರೆ ಈ ಫಜೀತಿಯೆಲ್ಲ ಇತ್ಯರ್ಥ ಆಗುವ ತನಕ ಈ ನಿಷೇಕ ಮುಂದಕ್ಕೆ ಹಾಕೋಣ ಅಂತ.......

**ದೇವಯ್ಯ** : ( ಗಾಬರಿಯಿಂದ ) ಹಾಗೆ ಮಾಡಬೇಡಿ. ಕಾಲ ಸರಿಯಾಗಿದೆ. ಈಗಾಗಲೆ ಬಹಳ ಕರ್ಚು ಆಗಿದೆ. ಹಾಸಿಗೆ, ಬಟ್ಟೆ, ತಿಂಡಿ, ಬಾಗಿನ, ಆಹಾರದ ಸಾಮಾನು ಎಲ್ಲ ಸಿದ್ಧವಾಗಿದೆ.

**ಗುಂಡಪ್ಪ** : ( ಬಿಗಿಯಾಗಿ ) ಅವನ್ನೆಲ್ಲ ನೋಡಿದ್ದಾಯಿತು. ಅವುಗಳ ಕಡೆಯಿಂದ ಹೇಳೋ ಮಾತು ಬಹಳ ಇವೆ. ಎಷ್ಟೋ ಒಪ್ಪಿಗೆ ಆಗಿಲ್ಲ. ಆದರೆ ಅವೆಲ್ಲ ಇರಲಿ. ಏನಾದರೂ ಒಪ್ಪಂದಕ್ಕೆ ಬರಬಹುದು. ಆದರೆ ಈ ಸ್ಥಿತಿಯಲ್ಲಿ ಹುಡುಗಿಯನ್ನು ಕರೆದುಕೊಂಡು ಹೋಗೋದು ಯಾವ ಸುಖ ಉಣ್ಣಿಸೋದಿಕ್ಕೆ? ಅವಳಿಗೂ ಕಷ್ಟ, ನಮಗೆ ಇನ್ನೂ ಕಷ್ಟ.

**ದೇವಯ್ಯ** : ನೀವು ಹಾಗೆ ಅಂತ ಅನ್ನೋದಾದರೆ ಅವಳು ಇನ್ನೂ ಅಷ್ಟುಕಾಲ ಇಲ್ಲೇ ಇರಲಿ ಬೇಕಾದರೆ. ಆದರೆ ಶಾಸ್ತ್ರ ಮಾತ್ರ........

**ಗುಂಡಪ್ಪ** : ಅದು ಹೇಗಾಗುತ್ತೆ? ಶಾಸ್ತ್ರವಾದ ಮೇಲೆ ಹುಡುಗಿ ಕರೆದುಕೊಂಡು ಹೋಗದಿದ್ದರೆ ಜನ ಏನಂದಾರು? ನಮ್ಮ ಮಾನಕ್ಕೆ ತಡೆದೀತೆ ಅದು? ಉಹುಂ.

**ದೇವಯ್ಯ** : ಇಲ್ಲ, ಹಾಗೆನ್ನಬೇಡಿ.

**ಗುಂಡಪ್ಪ** : ಇನ್ನೇನು ಬೇರೆ ಗತಿಯೇ ಕಾಣುವುದಿಲ್ಲ– ನನಗೆ. ಹೇಗೆ ಹೇಗೆ ಯೋಚಿಸಿದರೂ ಮುಂದಕ್ಕೆ ಹಾಕೋದೇ ಸರ್ವೋತ್ತಮವಾಗಿ, ಅಗತ್ಯವಾಗಿ, ವಿವೇಕವಾಗಿ ಕಾಣುತ್ತದೆ, ನನಗೆ– ದುಡ್ಡು ಕೊಡದೇ ಇರುವವರೆಗೂ. ಕಡೆಗೆ ನಿಮ್ಮ ಭಾಗದ್ದಾದರೂ ಈಗಲೇ ಸಿಕ್ಕೋ ಹಾಗಿದ್ದರೆ, ನಾನೂ ಹೋದೊಡನೆ ಇದ್ದದನ್ನೆಲ್ಲ ಮಾರಿಯೋ ಕೇರಿಯೋ ಏನಾದರೂ ಮಾಡಿ ಇನ್ನರ್ಧ ಹೊಂದಿಸಿ ತೊಳೆದುಕೊಳ್ಳಬಹುದು ಅನ್ನಿಸುತ್ತೆ. ಇದು ಸಾಧ್ಯವಾಗೋದಾದರೂ ಏನೋ ಈಗಲೇ ಧೈರ್ಯದಿಂದ ಈ ನಿಷೇಕದ ಕೆಲಸ ಜರುಗಿಸಿಬಿಡಬಹುದು.

**ದೇವಯ್ಯ** : ನನ್ನ ಈಗಿನ ಸ್ಥಿತಿಯಲ್ಲಿ ತಕ್ಷಣ ಅಷ್ಟು ಹಣ ಹೊಂದಿಸೋದು ಕೇವಲ ಅಸಾಧ್ಯದ ವಿಚಾರ. ಬಹಳ ಮಾತಾಡಿ ಏನು ಪ್ರಯೋಜನ?

**ಗುಂಡಪ್ಪ :** (ಖಂಡಿತವಾಗಿ) ಹಾಗಾದರೆ ಈ ಕೆಲಸವನ್ನೂ ಒಳ್ಳೆಯ ಕಾಲಕ್ಕೆ ಮುಂದು ಹಾಕಿದ ಹಾಗೇ. ಗತ್ಯಂತರವಿಲ್ಲ.

**ದೇವಯ್ಯ :** ನನ್ನ ಸ್ಥಿತಿಗತಿ ತಿಳಿದವರು ನೀವು, ನಷ್ಟಕ್ಕೆ ಕಷ್ಟಕ್ಕೆ ಗುರಿ ಮಾಡದೆ ನನಗೆ ಸಹಾಯ ಮಾಡಬೇಕು ಅಂತ ನನ್ನ ಬೇಡಿಕೆ.

**ಗುಂಡಪ್ಪ :** ನೀವು ಹೇಳೋದು ನಿಜ. ಹಾಗೆ ಕೇಳೋದೂ ಸರಿಯೆ. ಆದರೆ ನಮ್ಮ ಜವಾಬುದಾರಿಯನ್ನೂ ನಾವು ನೋಡಿಕೊಳ್ಳಬೇಕಲ್ಲ. ಅದೆಂದಿಗೂ ಆಗೋದಿಲ್ಲ.

**ರಾಮಚಂದ್ರ :** ಅಪ್ಪ,....

**ಗುಂಡಪ್ಪ :** ನೀನು ಸುಮ್ಮನೆ ಇರು ಮಗು. ನಿನ್ನ ಮಧ್ಯಸ್ತಿಕೆಯೇನು ಬೇಡ. ನಾನು ಒಂದು ಮಾತಾಡಿದರೆ ಆಗಿಹೋಯ್ತು ಬದಲಾಯಿಸುವ ಹಾಗಿಲ್ಲ. ಅಷ್ಟೊಂದು ಆಗದೆ ಇದು ನಡೆಯೋ ಹಾಗಿಲ್ಲ.

**ದೇವಯ್ಯ :** ಹಾಗೆಂದು ಬಿಟ್ಟರೆ ನಾನೇನೂ ಮತ್ತೆ ಹೇಳೋ ಹಾಗಿಲ್ಲ. ದೈವೇಚ್ಛೆ ಇದ್ದ ಹಾಗೆ ನಡೆಯಲಿ ಎಲ್ಲ.

**ಗುಂಡಪ್ಪ :** ಇದೇ ಕಡೆಯ ಮಾತಾದರೆ ನಾವು ಇಲ್ಲಿ ಇನ್ನು ಹೆಚ್ಚಿಗೆ ಕಾಲ ಇದ್ದು ಏನು ಪ್ರಯೋಜನ? ನಾಳೆ ಬೆಳಿಗ್ಗೆ ಹೊರಡುತ್ತೇವೆ.

**ದೇವಯ್ಯ :** ನಿದಾನವಾಗಿ ಇನ್ನೊಂದು ಸಲ ಯೋಚಿಸಿ ನೋಡಿ. ನನ್ನ ಕಷ್ಟವನ್ನೂ ಮನಸ್ಸಿಗೆ ತಂದುಕೊಳ್ಳಿ ಕೊಂಚ.

**ಗುಂಡಪ್ಪ :** ಎಲ್ಲ ಯೋಚಿಸಿ ಆಯ್ತು. ನಮಗೆ ಯೋಚಿಸೋದು ಏನೂ ಹೇಳಿಕೊಡಬೇಕಾಗಿಲ್ಲ.: ಅದೇ ಕಡೇ ನಿರ್ಧರ.

**ದೇವಯ್ಯ :** ನಾನು ಅಸಾಯಕ. ಇನ್ನು ತಮ್ಮ ಚಿತ್ತ.

(ಗುಂಡಪ್ಪನು ಸಿಟ್ಟಿನಿಂದ ಏಳುತ್ತಾನೆ. ರಾಮಚಂದ್ರನು ಅನುಸರಿಸುತ್ತಾನೆ.)

— ತೆರೆ —

## ದೃಶ್ಯ ೪

[ಸ್ಥಳ: ದೇವಯ್ಯನ ಮನೆಯ ಮಲಗುವ ಅದೇ ಕೋಣೆ. ರಾಮಚಂದ್ರನು ಪತ್ರಿಕೆಯನ್ನು ಓದುತ್ತಿರುತ್ತಾನೆ. ತಾರಾ ಎಚ್ಚರಿಕೆಯಿಂದ ಪ್ರವೇಶಿಸುತ್ತಾಳೆ. ಬಿಳಿಯ ಸೀರೆಯನ್ನುಟ್ಟು ಬಿಳಿಯ ರವಿಕೆಯನ್ನೇ ತೊಟ್ಟಿದ್ದಾಳೆ. ಕೈಯಲ್ಲಿ ಒಂದು ಬಟ್ಟಲು ಕಾಫಿ ಇದೆ. ಪ್ರವೇಶಿಸಿದವಳೆ ಬಾಗಿಲನ್ನು ಮುಂದಕ್ಕೆ ಮಾಡುತ್ತಾಳೆ. ಆಗಲೇ ರಾಮಚಂದ್ರನು ಪತ್ರಿಕೆಯನ್ನು ಎಸೆದು, ತಟ್ಟನೆ ಎದ್ದು ಅವಳಲ್ಲಿಗೆ ಹೋಗಿ ಕಾಫಿಯ ಬಟ್ಟಲನ್ನು ಬಲದ ಕೈಯಿಂದ ತೆಗೆದುಕೊಳ್ಳುತ್ತ ಅವಳನ್ನು ಎಡದ ಕೈಯಿಂದ ಬಳಸಿ ಕೊಂಡು ಮೆಲ್ಲಗೆ ಮಂಚದ ಕಡೆಗೆ ಒಯ್ಯುತ್ತಾನೆ.

ಕಾಲ: ಬೆಳಿಗ್ಗೆ ಎಂಟು ಗಂಟೆಯ ಸಮಯ.]

**ರಾಮಚಂದ್ರ:** ನನ್ನ ಗುಲಾಬಿ ಇಷ್ಟೊಂದು ಬಾಡಬಹುದೆ— ಇದಕ್ಕೆಲ್ಲ? (ಬಟ್ಟಲನ್ನು ಮೇಜಿನ ಮೇಲೆ ಇರಿಸಿ, ಅವಳ ತಗ್ಗಿದ ಮುಖವನ್ನು ಗಲ್ಲ ಹಿಡಿದು ಎತ್ತಿ) ಅಲ್ಲವೆ ಹುಚ್ಚಿ, ಇದೇನು, ರಾತ್ರಿ ನಿದ್ದೆಯೇ ಮಾಡಲಿಲ್ಲವೇನು?

**ತಾರಾ:** ನಿದ್ದೆದೇನು ದೊಡ್ಡ ಮಾತು— ಜೀವನದ ಆಸೆಯೆ ಬಿಸಿಲು-ಕುದುರೆ ಆದಾಗ? ನಾನು ಏನೇನು ಯೋಚಿಸಿಕೊಂಡಿದ್ದೆ, ಎಲ್ಲ, ಎಲ್ಲ......... (ಮುಂದೆ ಮಾತು ಹೊರಡದೆ ಕೊರಳು ತಡೆಯುತ್ತದೆ.)

**ರಾಮಚಂದ್ರ:** ನಿಜ, ನಿಜ ನನ್ನ ರತ್ನ. ಆದರೆ ಅದೆಲ್ಲ ಈಗ ಮುರಿದುಹೋಯಿತೆ— ಭೂಕಂಪಕ್ಕೆ ಸಿಕ್ಕ ಮನೆಯ ಹಾಗೆ? ಇಲ್ಲ, ನಮ್ಮ ಸುಖ ಕೊಂಚ ಮುಂದಕ್ಕೆ ಹೋಯ್ತು— ಅಷ್ಟೆ.

**ತಾರಾ:** ಮನೆ ಸಿಕ್ಕಿತು ಅಂತ ಆತುರವಾಗಿರೋವಾಗ ದಾರಿ ತಪ್ಪಿದ ಹಾಗೆ ಆಯ್ತು, ನನ್ನ ಗತಿ.

**ರಾಮಚಂದ್ರ:** ಹುಂ. ಆದರೆ ನೀನು ನಿರಾಸೆ ಹೊಂದೋದಿಕ್ಕೆ ಕಾರಣ ಇಲ್ಲ. ಮತ್ತಷ್ಟು ದೂರ ನಡೆಯಬೇಕಾಯ್ತು ಅಷ್ಟೆ. ಮನೆಯೇನೋ ಖಂಡಿತವಾಗಿದೆಯಲ್ಲ.

**ತಾರಾ:** ಅದನ್ನೇನು ಯಾವಾಗ ಮುಟ್ಟುತ್ತೀನೋ ಏನೋ. ಮುಟ್ಟೋದೇ ಇಲ್ಲವೊ?

**ರಾಮಚಂದ್ರ** : ಛೆ, ಛೆ, ಹಾಗೆಂದರೇನು. ಈ ತೊಡಕು ಸ್ವಲ್ಪ ಬಿಡಿಸಿದ ಕೂಡಲೆ ' ನೀನು ಬಂದು ಬಿಡುತ್ತೀಯೆ. ಕೊಂಚ ಸಮಾಧಾನ ತಂದುಕೊ.

**ತಾರಾ** : ನಿಮಗೆ ಹೆಂಗಸರ ಮನಸ್ಸು ಗೊತ್ತಿಲ್ಲ. ಇದೇ ಸಾಕು, ಶೂಲ ಇರಿದ ಹಾಗೆ ಇರಿಯುತ್ತೆ ಎದೇನ, ಆ ಸುದಿನ ಬರೋವರೆಗೂ.

**ರಾಮಚಂದ್ರ** : ಒಪ್ಪಿದೆ. ನನಗೂ ಇಲ್ಲವೆ ಆಸೆ— ನನ್ನ ಪುಟ್ಟ ಮಡದಿ ಕೂಡಿ ಆನಂದದಲ್ಲಿ ಈಜಬೇಕು ಅಂತ ? ಆದರೆ ಏನು ಮಾಡೋದು. ಏನೇನೋ ಭಂಗ ಬಂದಿದೆಯಲ್ಲ— ಕೇವಲ ಅನಿರೀಕ್ಷಿತವಾಗಿ.

**ತಾರಾ:** ಮಾವನವರಿಗೆ ನೀವು ಹೇಳಿ ಬದಲಾಯಿಸೋದಿಕ್ಕೆ........

**ರಾಮಚಂದ್ರ** : ನಮ್ಮ ಅಪ್ಪ ಬಹಳ ಕಠಿಣವಾದಿ. ಬಡಪೆಟ್ಟಿಗೆ ಒಪ್ಪೋದಿಲ್ಲ. ತನ್ನ ಪಟ್ಟೇ ಪಟ್ಟು. ನನಗೆ ಯಾವುದನ್ನೂ ಬಿಡೋದಿಲ್ಲ. ಎಲ್ಲ ನನಗಾಗಿ ತಾನೇ ಮಾಡಿಬಿಡುತ್ತಾನೆ— ನನ್ನ ಒಳ್ಳೆದಕ್ಕೆ ಅಂತ. ಎಲ್ಲ ಅವನು ಹೇಳಿದ ಹಾಗೇ ಆಗಬೇಕು. ಏನು ಮಾಡೋದು ?

**ತಾರಾ :** ಅದಕ್ಕೆ ನೀವು ಒಪ್ಪಲೇ ಬೇಕೆ ?

**ರಾಮಚಂದ್ರ** : ನಮ್ಮ ಅಪ್ಪನಿಗೆ ವಿರೋಧವಾಗಿ ನಾನು ಹೇಗೆ ಹೋಗೋಕೆ ಸಾಧ್ಯ, ನೀನೇ ಹೇಳು ? ಏನಾದರೂ ಬೇರೆ ಹೇಳಿದರೆ ಅವನು ಕೇಳಬೇಕಲ್ಲ. ಎದುರು ಆಡಿದರೆ ಹಗರಣವೇ ಆದೀತು. ಹಾಗಾದರೂ ಪ್ರಯೋಜನವೂ ಇಲ್ಲ. ಇನ್ನೂ ಅಷ್ಟು ರೇಗಿಸಿ ಹಟ ಹೆಚ್ಚು ಮಾಡಿದ ಹಾಗೆ ಆಗುತ್ತೆ. ಅದು ಇನ್ನೂ ಹೆಚ್ಚು ಅನಾನುಕೂಲವೇ ಆದೀತು ಅಂತ ಭಯ ನನಗೆ.

**ತಾರಾ :** ಹಾಗಾದರೆ ಇನ್ನೆಷ್ಟು ತಡವೋ ಏನೋ.

**ರಾಮಚಂದ್ರ**: ಏ. ಯಾಕೆ ಬಹಳ ಆದೀತು ? ಬೀಗರು ಬೀಗರು ಬೇಗಲೇ ಸರಿಪಡಿಸಿಕೊಂಡು ಬಿಡುತ್ತಾರೆ. ಯಾವುದೂ ಬೇಗಲೇ ಇತ್ಯರ್ಥ ಆಗಬೇಕಲ್ಲ.

**ತಾರಾ**: ಏನೋ ನಾನು ಕಾಣೆ.

ರಾಮಚಂದ್ರ : ಕೇವಲ ಒಂದೆರಡು ತಿಂಗಳ ಮಾತು. ನಾನು ಹೇಳುತ್ತೀನಿ ಕೇಳು.

ತಾರಾ : ನನಗೆ ನಂಬಿಕೆ ಇಲ್ಲ.

ರಾಮಚಂದ್ರ : ನಾನೂ ಹೇಗಾದರೂ ಯತ್ನಿಸಿ ಆದಷ್ಟು ಮುಂಚೆ ಆಗೋ ಹಾಗೆ ಮಾಡುತ್ತೀನಿ.

ತಾರಾ: ನಿಜವಾಗಿ ?

ರಾಮಚಂದ್ರ : ಹುಂ. ನನ್ನ ಗಿಣಿ. ನಿನಗೆ ಗೊತ್ತಿಲ್ಲವೆ, ನಿನ್ನ ಬಿಟ್ಟು ನಾನು ಹೇಗೆ ಇರಬಹುದು ಅಂತ ? ಆಗಲೇ ಒಂದಾದ ಹೆಣ್ಣುಗಂಡುಗಳನ್ನು ಕೂಡಿಸೋದಿಕ್ಕೂ ಏನು ಶಾಸ್ತ್ರ ಮರಿಶಾಸ್ತ್ರಗಳೋ ಹಾಳು. ಬರಿ ಭಾರ, ತೊಡಕು. ಮಕ್ಕಳಿಗೆ ಭಾರವಾದ ಒಡವೆ ಹಾಕಿ ಭಂಗಪಡಿಸಿದ ಹಾಗೆ. ಇದರಿಂದ ನಮಗೆ ಎಷ್ಟು ದುಃಖವಾಗಿದೆ ಈಗ. ಛೆ !

ತಾರಾ : ಬರಿ ಹೀಗೆಲ್ಲ ಹೇಳುತ್ತೀರಿ ಈಗ. ಆದರೆ ನೀವೇನು ಗಂಡಸರು. ಕಚೇರಿ ಕೆಲಸ, ಅದರಲ್ಲಿ ಇದರಲ್ಲಿ ಇದ್ದು ಬಿಡುತ್ತೀರಿ. ನಿಮಗೇನೂ ಗೊತ್ತಾಗೋದಿಲ್ಲ— ನನ್ನಷ್ಟು. ನಾನಾದರೋ ದಿನದ ಎಲ್ಲ ಹೊತ್ತೂ ಇದನ್ನೇ ನೆನೆಸಿಕೊಂಡು ಹಂಬಲಿಸುತ್ತಾ ಇರುತ್ತೀನಿ. ನನಗೆ ಅದೇ ಕನಸು. ದಿನದಿನವೂ ಒಂದೊಂದು ಯುಗದಂತೆ. ಯಾವಾಗಲೂ ಸಂಕಟಪಡೋದೇ ನನ್ನ ಪಾಡು ಆಗುತ್ತೆ. ಇನ್ನುಮೇಲೆ ನಾನು ಇಲ್ಲಿದ್ದರೂ ನನ್ನ ಜೀವವೆಲ್ಲ ನಿಮ್ಮ ಹತ್ತಿರವೇ ಇರುತ್ತೆ.

ರಾಮಚಂದ್ರ : ನನ್ನ ಜೀವ! ನಾನು ನಿನ್ನ ಕರೆದುಕೊಂಡ ಹೋಗೋಕೆ ಮಾತ್ರ ಆಗಿದ್ದರೆ! ಆದರೆ ನಾನು ನಿಸ್ಸಹಾಯಕ ಆಗಿದ್ದೀನಿ ಸ್ವಲ್ಪ ತಾಳು. ಹೇಗೋ ಕೊಂಚ ದಿನ ಸೈರಿಸಿಕೊ. ಎಲ್ಲ ಸರಿಹೋಗುತ್ತೆ.

ತಾರಾ: ಈಗ ನಿಮ್ಮನ್ನು ಸೇರಿಬಿಡುತ್ತೀನಿ. ಎಡಬಿಡವೆ ಇದ್ದುಬಿಡುತ್ತೀನಿ. ನಿಮಗೆ ಎಲ್ಲ ಸೇವೇನೂ ನಾನೇ ಮಾಡುತ್ತೀನಿ— ಇನ್ನು ಯಾರಿಗೂ ಬಿಡದ ಹಾಗೆ, ಅಂತ ಅಂದುಕೊಂಡಿದ್ದೆ. ನಿಮ್ಮ ಮನೇನೆಲ್ಲ ನಾನೇ ಅಚ್ಚುಕಟ್ಟು ಮಾಡಿ ನಿಮ್ಮನ್ನು ಸಂತೋಷಪಡಿಸಿ ನಾನೂ ಹೆಮ್ಮೆಪಡಬೇಕು ಅಂತ

ಇತ್ತು, ನನಗೆ ಹಿಡಿಸಲಾಗದಷ್ಟು ಉತ್ಸಾಹ, ಆಸಕ್ತಿ. ನಿಮ್ಮ ನೆರಳಾಗಿ ನಾನು ಬಾಳಬೇಕು ಅನ್ನೋದು ನನ್ನ ಹೆಬ್ಬಯಕೆ.

**ರಾಮಚಂದ್ರ :** ಅದೆಲ್ಲ ಆಗುತ್ತೆ ಸದ್ಯದಲ್ಲೆ. ನಿನ್ನ 'ಸೇವೆ' ಅಂತೀ ಯಲ್ಲ ಅದಕ್ಕೆಲ್ಲ ನಾನೇ ಬೆಲೆ ಬಹುಮಾನ ಕೊಡುತ್ತೀನಿ– ನನ್ನ ಚಿನ್ನನಿಗೆ. ನನಗೆ ಬಿಡುವಾದ ಗಳಿಗೆಯೆಲ್ಲ ನಿನ್ನ ಬಳಿಯೇ ಕಳೆಯುತ್ತೀನಿ. ಅದೆಲ್ಲ ನಿರ್ಧಾರವಾಗಿ ಹೋಗಿದೆ. ಇದೊಂದು ಆತಂಕ ಮಾತ್ರ ತೀರಿಹೋದರೆ ಸಾಕು. ನಾವಿಬ್ಬರೂ ಎರಡು ನದಿಗಳಂತೆ ಸೇರಿ ಒಂದಾಗಿ ಹೋಗೋಣ. ಎರಡು ಗಾಲಿಗಳಂತೆ ಸಂಸಾರದ ಗಾಡಿಯನ್ನು ನಡೆಸೋಣ.

**ತಾರಾ :** ನಿಮ್ಮ ಮುಖ ನಿತ್ಯವೂ ನೋಡುತ್ತೀನಲ್ಲ ಅಂತ ಆನಂದ ದಿಂದ ಉಕ್ಕಿ ಸುರಿತಾ ಇದ್ದೆ. ನಿಮ್ಮ ಸ್ಪರ್ಶದಿಂದ ದಿನವೂ ರೋಮಾಂಚ ಹೊಂದುತ್ತೀನಿ ಅಂತ ನೆನೆಸಿಕೊಂಡು ಹುಚ್ಚಿಯಾಗಿದ್ದೆ.

**ರಾಮಚಂದ್ರ :** ನನ್ನ ಒಲವಿನ ಹೆಣ್ಣಿಗೆ ಅದೆಷ್ಟು ಆಸೆ! ನನಗೂ ಅಷ್ಟೇ— ಪ್ರೇಮ ಪರಸ್ಪರ ಅಲ್ಲವೆ? ನಾವು ಎಂಥ ಹೀನ ಅದೃಷ್ಟದವರು! ಈ ಪ್ರೇಮಿಗಳ ಮಧ್ಯ ಬಂದಿದೆಯಲ್ಲ ಈ ಅಡ್ಡ ಗೋಡೆ. ಇದು ಎಂದು ಒಡೆ ದೀತು ಅಂತ ತವಕ ನನಗೆ.

**ತಾರಾ:** ನನಗೆ ನಿಮ್ಮ ನೂರರಷ್ಟು— ಹಾಗೆಂದರೆ ನಿಮ್ಮದು ಸ್ವಲ್ಪ ಅಂತ ಅಲ್ಲ.

**ರಾಮಚಂದ್ರ :** ನಿಜ. ನಿನ್ನ ಹೃದಯದ ಆಳ ತೋರಿಸೋಕೆ ಯತ್ನಿ ಸುತ್ತಿದ್ದೀ.

**ತಾರಾ:** ಹಾಗೇ ಅಲ್ಲ. ಹೆಂಗಸರ ಬಯಕೆಗೂ ಗಂಡಸರ ಇಷ್ಟಕ್ಕೂ ದೂರ ಅಷ್ಟು ಇದ್ದೇ ಇರುತ್ತೆ. ಅದನ್ನು ನಿಮಗೆ ತಿಳಿಯೋ ಹಾಗೆ ಹೇಳೋಕೆ ನನಗೆ ಆಗೊಲ್ಲ. ನೀವು ಹುಚ್ಚಿ ಅಂದೀರಿ.

**ರಾಮಚಂದ್ರ :** ನಾನೂ ಅಷ್ಟು ಊಹಿಸಬಲ್ಲೆ. ಪ್ರೇಮಿಗಳ ಮಿಲನ ವಲ್ಲದೆ ಅದರ ಫಲವನ್ನೂ ನೀನು ಸೂಚಿಸುತ್ತಾ ಇದ್ದಿ ಅಲ್ಲವೆ?

(**ತಾರೆಯು ಲಜ್ಜೆಯಿಂದ ಸಮ್ಮತಿಯನ್ನು ಸೂಚಿಸುವಳು.**)

ಆದೂ ಆಗುತ್ತೆ. ಕೊಂಚಕಾಲ ತಾಳು. ನೀನು ತಾಯಿ ಅನ್ನಿಸಿಕೊಂಡು ಆನಂದಿಸೋ ಕಾಲ ಬೇಗ ಬಂದುಬಿಡುತ್ತೆ.

**ತಾರಾ :** ನಾವು ಎರಡು ಹಕ್ಕಿಗಳ ಹಾಗೆ ಗೂಡು ಕಟ್ಟಿ ಬಾಳಿ ಮನೆ ಬೆಳಿಸಬೇಕು ಅನ್ನೋದು ಎದೆ ತುಂಬ ತುಂಬಿದೆ. 'ಅಮ್ಮ' ಅನ್ನಿಸಿ ಕೊಳ್ಳೋಕೆ ನನಗೆ ಎಷ್ಟು ಆಸೆ, ಹೆಮ್ಮೆ, ಆತುರ ಅನ್ನೋದು ನಿಮಗೇನಾದರೂ ಗೊತ್ತೆ ಪೂರ್ತಿ ?

**ರಾಮಚಂದ್ರ :** ಸ್ವಲ್ಪ ಮಟ್ಟಿಗೆ ತಿಳಿಯಬಲ್ಲೆ ಅಂತ ಕಾಣುತ್ತೆ. ನಿನ್ನ ಎದೆಯ ಆಳ ನನಗಂತೂ ಗೊತ್ತಾಗುತ್ತೋ ಇಲ್ಲವೊ ಅನ್ನಿಸುತ್ತೆ ನನಗೆ.

**ತಾರಾ :** ನನಗೇ ಅಷ್ಟೊ ಗೊತ್ತಾಗುತ್ತೋ ಇಲ್ಲವೋ ನನಗೇ ಅನುಮಾನ. ಅದು ಅಷ್ಟಷ್ಟೊಂದು ಉಕ್ಕಿಬರುತ್ತಿರುತ್ತದೆ, ಬುಗ್ಗೆಯ ಹಾಗೆ ನೆನೆಸಿಕೊಂಡಾಗೆಲ್ಲ. ಇದೆಲ್ಲಕ್ಕೂ ಆಗಲೇ ಎಷ್ಟೋ ದಿನದಿಂದ ಕಾತರಿಸುತ್ತಾ ಇದ್ದೆ, ಈಗ ಕಾಲ ಬಂತು ಅಂತ ಆನಂದಿಸಿ ಸಂತೈಸಿಕೊಳ್ಳುತ್ತ ಇದ್ದೆ. ಕೈಗೆ ಬಂದ ತುತ್ತು ಅಂತ ಇದ್ದೆ, ಬಾಯಿಂದ ಜಾರಿ ಹೋಯ್ತು. ಈಗ ಮತ್ತೆ ಈ ಸುಖ ದೂರವಾಯ್ತು— ಆ ಕಾಂಚನಮೃಗದ ಹಾಗೆ. ಸುಂಟರಗಾಳಿಗೆ ಸಿಕ್ಕಿ ದಾರ ಕಿತ್ತುಹೋಗಿ ಎತ್ತರದಲ್ಲಿದ್ದ ಗಾಳಿಪಟ ಎಲ್ಲೋ ಹೋದ ಹಾಗಾಯ್ತು, ನನ್ನೆ ದೊಡ್ಡ ಹಂಬಲು. ಮತ್ತೆ ಅದು ಎಲ್ಲಿ ಸಿಕ್ಕುತ್ತೋ ಏನೋ. ನನ್ನ ಅದೃಷ್ಟ ಹೇಗಿದೆಯೋ ಏನೋ.

**ರಾಮಚಂದ್ರ:** ತಾರಾ, ನನ್ನ ಹುಡುಗಿ. ನೀನು ಇಷ್ಟೊಂದು ಚಿಂತಿಸಬಾರದು. ಬೇಸರಗೊಳ್ಳಬಾರದು, ಆಸೆ ತೊರೆಯಬಾರದು. ಇವಕ್ಕೆ ಕಾರಣ ಇಲ್ಲ. ಸದ್ಯದಲ್ಲೇ ಎಲ್ಲ ಸರಿ ಹೋಗುತ್ತೆ ಅಂತ ಹೇಳಿದೆನಲ್ಲ. ನೀನು ಅದನ್ನು ನಂಬು. ನಾನೂ ನನ್ನ ಕೈಲಾದ್ದನ್ನೆಲ್ಲ ಮಾಡುತ್ತೀನಿ.

**ತಾರಾ:** ಖಂಡಿತವಾಗಿ ?

**ರಾಮಚಂದ್ರ :** ಹುಚ್ಚು ಹುಡುಗಿ, ನಿನಗೆ ಹೇಗೆ ಹೇಳಲಿ ?

**ತಾರಾ:** ಬೇಗ ಬಂದು ಕರೆದುಕೊಂಡು ಹೋಗುತ್ತೀರ ?

**ರಾಮಚಂದ್ರ**: ಹಾಗಲ್ಲದೆ ಏನು.

**ತಾರಾ**: ಉದಾಸೀನವಾಗೋದಿಲ್ಲವೆ ?

**ರಾಮಚಂದ್ರ**: ಬಿಡು, ಬಿಡು. ಹಾಗೆಲ್ಲಾದರೂ ಉಂಟೆ ? ಏನು ಹೇಳುತ್ತೀಯೆ. ನಿನ್ನ ಹೇಗೆ ತೃಪ್ತಿಗೊಳಿಸೋದು ?

**ತಾರಾ**: ಹೌದು ನಾನು ಹುಚ್ಚಿ. ನನಗೆ ತೃಪ್ತಿಯಿಲ್ಲ. ಯಾವ ಭರವಸೆಯೂ ಸಾಲದು. ಆದರೆ ನಾನೇನು ಮಾಡಲಿ ? ನನ್ನ ಸ್ವಭಾವವೇ ಹಾಗೆ. ಅದನ್ನು ಅನುಸರಿಸಿ ನನ್ನನ್ನು ಸಮಾಧಾನ ಪಡಿಸೋದು ನಿಮ್ಮನ್ನೇ ಸೇರಿದೆ.

**ರಾಮಚಂದ್ರ**: ಆಗಲಿ, ಆಗಲಿ. ನನ್ನ ಯತ್ನವನ್ನೆಲ್ಲ ಮಾಡುತ್ತೀನಿ, ಆದಷ್ಟು ಜಾಗ್ರತೆ ಕರೆದುಕೊಂಡು ಹೋಗೋಕೆ. ಸರಿಯೋ ?

**ತಾರಾ**: ನನ್ನಾಣೆಗು ?

**ರಾಮಚಂದ್ರ**: ನಮ್ಮ ಇಬ್ಬರ ಆಣೆಗು. ಸಾಕೆ ?

**ತಾರಾ**: ಆ ?........ಹುಂ.

**ರಾಮಚಂದ್ರ**: ಅಲ್ಲ, ನನ್ನ ಮಣಿ, ನಿನಗೆ ಹೇಗೋ ನನಗೂ ಇಲ್ಲವೆ ಆತುರ ? ಇವೆಲ್ಲ ಏಕೆ ಮಾತು, ಕತೆ, ಭಾಷೆ, ಆಣೆ ?

**ತಾರಾ**: ಏನೋ ಅದೆಲ್ಲ ನನ್ನ ಹುಚ್ಚು.

**ರಾಮಚಂದ್ರ**: ಇನ್ನು ಕೊಂಚ ಪ್ರಸನ್ನಳಾಗಬೇಕು ನನ್ನ ದೇವಿ. ಹೊರಡೊ ಹೊತ್ತಿನಲ್ಲಿ ಖಿನ್ನಳಾಗಿರಬಾರದು. ಎಲ್ಲಿ ಸ್ವಲ್ಪ ನಸುನಗೆ ತೋರಿಸು ನೋಡೋಣ, ನನಗಾಗಿ.

**ತಾರಾ**: (ಹಸನ್ಮುಖವನ್ನು ತಂದುಕೊಂಡು) ಈ ನಾಟಕ ಎಲ್ಲ ಯಾಕೆ ?........ ಮತ್ತೆ........ ಮತ್ತೆ........

**ರಾಮಚಂದ್ರ**: ಏನು ಇನ್ನೂ ಉಳಿದಿರೋದು ಹೇಳು.

**ತಾರಾ**: ತಪ್ಪದೆ ಕಾಗದ ಬರೀತಾ ಇರುತ್ತೀರ ?

**ರಾಮಚಂದ್ರ**: ಇಲ್ಲಿಯ ವರೆಗೆ ಬರೀತಾ ಇರಲಿಲ್ಲವೆ ? ಹಾಗೇ....

**ತಾರಾ:** ಹಾಗಲ್ಲ. ನೀವು ಇದಕ್ಕಾಗಿ ಏನೇನು ಮಾಡುತ್ತಾ ಇದ್ದೀರಿ, ನಾವು ಎಷ್ಟೆಷ್ಟು ಹತ್ತಿರ ಬರುತ್ತಾ ಇದ್ದೀವಿ ಅಂತ.

**ರಾಮಚಂದ್ರ:** ಆಗಲಿ.

**ತಾರಾ:** ಮರೆಯಕೂಡದು!

**ರಾಮಚಂದ್ರ:** ಇಲ್ಲ, ರಾಣಿಯವರೆ.

**ತಾರಾ:** ಈ ಕಾಫಿ ಮರೆತ ಹಾಗೆ (ನಸುನಗುವಳು)

**ರಾಮಚಂದ್ರ:** (ನಗುತ್ತ) ಕಾಫಿಗು ತಾರಾಗು ಎಲ್ಲಿಂದ ಎಲ್ಲಿಗೆ? (ಕಾಫಿ ಕುಡಿದು) ಅಪ್ಪಣೆಯೋ ಹೊರಡೋಕೆ?

**ತಾರಾ:** ಷರತ್ತಿನ ಪ್ರಕಾರ! ನಗುಮುಖ ಮಾಡಿಕೊಂಡಿದೀನಿ ಅಂತ ತಪ್ಪು ತಿಳಕೋಬೇಡಿ. ಅದು ನಿಮಗೋಸ್ಕರ ಹಾಗೆ, ಒಳಗಿಂದೆಲ್ಲ ಮುಚ್ಚಿ ಘರದೆ ಹಾಕಿರೋದು. ತಿಳೀತೆ? ಒಳ್ಳೇದು! (ಹೋಗುವಳು)

**ರಾಮಚಂದ್ರ:** ಅಬ್ಬ, ಎಂಥ ಹುಡುಗಿ! ಇವಳನ್ನು ಬಿಟ್ಟು ಹೋಗ ಬೇಕಲ್ಲ!

— ತೆರೆ —

# ಅಂಕ ೩

## ದೃಶ್ಯ ೧

[ ಸ್ಥಳ : ದೇವಯ್ಯನ ಮನೆಯ ವರಾಂಡ.

ಕಾಲ : ಸಂಜೆ ಸುಮಾರು ನಾಲ್ಕು ವರೆ ಗಂಟೆಯ ಸಮಯ.

ತಾರಾ ಮತ್ತು ಸರೋಜ ಕಸೂತಿಯನ್ನು ಹಾಕುತ್ತಾ ಮೆಲುಧ್ವನಿಯಲ್ಲಿ ಮಾತನಾಡುತ್ತಿದ್ದಾರೆ. ]

**ತಾರಾ :** (ಕಸೂತಿಯನ್ನು ನಿಲ್ಲಿಸಿ, ಸರೋಜನ ಕಡೆಗೆ ನೋಡಿ ಆವೇಶದಿಂದ) ಈಗ ಏನು ಮಾಡಲಿ ಸರೋಜ ? ಏನು ಗತಿಯೆ ನನಗೆ ?

**ಸರೋಜ :** ಏನು ಮಾಡೋಣೆ, ತಾರಾ ? ಹೀಗಾಯಿತಲ್ಲ !

**ತಾರಾ :** ಯಾರಿಗಾದರೂ ಗೊತ್ತಾದರೆ ಏನಂತಾರೆ ? ಹೇಗೆ ಮುಖ ತೋರಿಸೋದು ?

**ಸರೋಜ :** ಭಾರಿ ಕಷ್ಟವೇ ಬಂದು ಒದಗಿತಲ್ಲ ! ನನಗೇನೂ ತೋರೋದೆ ಇಲ್ಲವಲ್ಲ— ಇನ್ನೂ.

**ತಾರಾ :** ನನಗಂತೂ ದಿಕ್ಕೇ ತೋಚದ ಹಾಗೆ ಆಗಿದೆ— ತಿಂಗಳಿಂದಲೂ. ಅನುಮಾನ ಬಂದಾಗಿನಿಂದ.

**ಸರೋಜ :** ಅಯ್ಯೋ ಪಾಪ ! ಇನ್ನೇನಾಗುತ್ತೆ ನಮ್ಮಂಥ ಹುಡುಗಿಯರಿಗೆ. ನಮಗೇನು ಅನುಭವ ಇದೆ ?

**ತಾರಾ :** ಅವತ್ತಿನಿಂದ ಸರಿಯಾದ ನಿದ್ದೆಯೇ ಊಟವೇ ಒಂದೂ ಇಲ್ಲ. ಕಾಯಿಲೆ ಬೀಳದೆ ಹೇಗಿದೀನೋ ಏನೋ ಅನ್ನಿಸುತ್ತೆ. ನನ್ನಲ್ಲೇ ತುಂಬಿಕೊಂಡು ಸುಮ್ಮನೆ ಒಳಗೇ ಕುದೀತಾ ಇದ್ದೆ ಇಲ್ಲಿಯ ವರೆಗೆ. ಈಗ ತಡೆಯೋದಿಕ್ಕೆ ಆಗದೆ ನಿನಗೆ ಹೇಳಿಬಿಟ್ಟಿದೀನಿ. ಏನು ಮಾಡಲೇ ? ಏನಾದರೂ ದಾರಿ ಉಂಟೆ— ಇದಕ್ಕೆ ?

**ಸರೋಜ** : ಹ, ಏನು ದಾರಿ ? ಅದನ್ನೇ ನಾನೂ ಯೋಚಿಸುತ್ತಾ ಇದ್ದೀನಿ.

**ತಾರಾ :** ಸರೋಜ, ಆ ದಿನ ಜ್ಞಾಪಕ ಇದೆಯೇ— ಆವತ್ತು, ಅವರು ಬರೋ ಹಿಂದಿನ ದಿನ ನಾವು ಇದೇ ವರಾಂಡದಲ್ಲಿ ಮಾತಾಡಿಕೊಂಡದ್ದು ?

**ಸರೋಜ :** ಹುಂ ಇಲ್ಲದೆ ಏನು. ಎಷ್ಟು ಸಂತೋಷವಾಗಿದ್ದೆ ನೀನು.

**ತಾರಾ :** ನೋಡು, ಈಗ ಹೇಗಾಗಿದೆ ಕನಸಿನಲ್ಲೂ ಎಣಿಸಿರಲಿಲ್ಲ, ಈ ಕಷ್ಟ ನಾನು. ನನ್ನ ದುಃಖ ಯಾರಿಗೆ ಬೇಕು ಈಗ ?

**ಸರೋಜ** : ನಿಜ, ಏನು ಮಾಡೋದು ತಾರಾ, ಈ ಜೀವನವೇ ಹಾಗೆ ಅಂತ ಕಾಣುತ್ತೆ. ದಿನ, ರಾತ್ರಿ ಹಾಗೆ ಒಂದಷ್ಟು ಬೆಳಕು, ಒಂದಷ್ಟು ಕತ್ತಲೆ.

**ತಾರಾ** : ಆದರೂ ಹೀಗೆಲ್ಲ ಎಷ್ಟು ಜನಕ್ಕಾಗುತ್ತೆ— ಇಂಥ ಅವಿವೇಕ ?

**ಸರೋಜ** : ಪಾಪ, ನೀನೇನು ಮಾಡುತ್ತೀ. ನಿನ್ನದು ಅಷ್ಟು ತಪ್ಪಿಲ್ಲ.

**ತಾರಾ :** ಯಾರದ್ದೂ ಇಲ್ಲ ಕಣೆ. ಇಂಥ ಆತಂಕ ಬಂದು ಹೀಗೆಲ್ಲ ಆಗುತ್ತೆ ಅಂತ ಗೊತ್ತಿರಲಿಲ್ಲ, ಪಾಪ. ಈಗೇನೋ ಆಗಿಯೋಯ್ತು.

**ಸರೋಜ** : ಅದೇನು ಅತಿ ಆಗುತ್ತಾ ಇರಲಿಲ್ಲ— ಎಲ್ಲ ನೇರವಾಗಿ ಜರುಗಿ ಹೋಗಿದ್ದರೆ........

**ತಾರಾ** : ಹಣ್ಣು ತಿನ್ನುವಾಗ ಸಿಪ್ಪೆ ಗಂಟಲಿಗೆ ಸಿಕ್ಕಿದ ಹಾಗಾಯ್ತು ನನ್ನ ಪಾಡು.

**ಸರೋಜ** : ನರಿ, ನೀರು ಕುಡಿಯೋಕೆ ಹೋಗೋರೆಲ್ಲ ಕಾಲು ಜಾರುತ್ತೆ ಅಂತಲೇ ತಿಳಿದಿರುತ್ತಾರೇನು ? ಏನೋ ಅಕಸ್ಮಾತ್ತು.

**ತಾರಾ** : ಈಗ ಅದಕ್ಕೆ ಉಪಾಯ ಏನು ?

**ಸರೋಜ :** ಹುಂ. ಅದು ಮುಖ್ಯ.

**ತಾರಾ** : ಏನು ಮಾಡೋಕೆ ಆಗುತ್ತೆ ?

**ಸರೋಜ :** ನೇರವಾಗಿ ಕಾಣೋದು ಅಂದರೆ ಅವರೇ ಬಂದು ಕರೆದು ಕೊಂಡು ಹೋಗೋದು.

**ತಾರಾ :** ಅದು ಹೇಗೆ ಆಗುತ್ತೆ ?

**ಸರೋಜ :** ಅವರಿಗೆ ಈ ವಿಷಯ ತಿಳಿಸಿದಿಯೋನು ?

**ತಾರಾ :** ಹೇಗೆ ತಿಳಿಸೋದೆ ? ನನಗೆ ಧೈರ್ಯ ಇಲ್ಲ. ಯಾರಿಗಾದರೂ ಕಾಗದ ಸಿಕ್ಕಿ ಅಲ್ಲೆಲ್ಲ ಗೊತ್ತಾಗಿ ಪ್ರಕಾರಾದರೆ ?

**ಸರೋಜ :** (**ಯೋಚಿಸುತ್ತ**) ಹುಂ.

**ತಾರಾ :** ಅದೂ ಅಲ್ಲದೆ ಬರಿ ಸಮಾಚಾರ ತಿಳಿಸೋದೆ ಸಾಲದು. ನಾನು ಹೇಳಬೇಕಾದ್ದನ್ನೆಲ್ಲ ಹೇಗೆ ಬರೆಯೋಕೆ ಸಾಧ್ಯ ? ಹಾಗಿಲ್ಲದೇ ಇದ್ದರೆ ಸಾಕಾದಷ್ಟು ಜಾಗ್ರತೆ ಕೆಲಸ ನಡೆಸುತ್ತಾರೆ ಅಂತ ಹೇಳೋಕೆ ಆಗೊಲ್ಲ. ನಮ್ಮ ಮಾವನೋರ ಮಾತು ತುಂಬ ಕೇಳ್ತಾರೆ— ಅವರು. ಅವರ ತಂದೆಗೆ ತಿಳಿಸೋಕೆ ಒಪ್ಪುತ್ತಾರೋ ಇಲ್ಲವೊ. ಹೇಳೋದೂ ಒಳ್ಳೇದಲ್ಲ. ನನಗೂ ಸರಿಬೀಳೋದಿಲ್ಲ. ಶಾಸ್ತ್ರ ಆಗಿ ಅವರ ಮನೆಗೆ ಹೋಗೋ ವರೆಗೆ ಯಾರಿಗೂ ತಿಳಿಯಬಾರದು. ಅವರ ತಂದೆಗೆ ಹೇಳದೇ ಇದ್ದರೆ ಅವರು ಒಪ್ಪದೆ ಏನಾದರೂ ತಡ ಮಾಡುತ್ತಾರೋ ಏನೋ. ಇಲ್ಲ ಹೇಳಿದರೆ ಬರಿಗದ್ದಲವಾಗಿ ಮಾನ ಹೋಗುತ್ತೋ ಹೇಗೋ. ಯಾರ ಯಾರ ಮನಸ್ಸು ಹೇಗೆ ಹೇಗೆ ಇರುತ್ತೋ, ಯಾವ ಮಾತಾಡಿದರೆ ಏನು ಪರಿಣಾಮ ಆಗುತ್ತೋ ಯಾರಿಗೆ ಗೊತ್ತು ? ಬರೆಯೋದನ್ನ ಯೋಚಿಸಿದರೆ ಇವೆಲ್ಲ ನೂರೆಂಟು ಅನುಮಾನಗಳು ತಲೆಹಾಕುತ್ತವೆ. ಇದರಲ್ಲಿ ಎಷ್ಟು ಸರಿಯೊ ಎಷ್ಟು ತಪ್ಪೊ, ನನಗೇನೂ ತಿಳಿಯೋ ಹಾಗಿಲ್ಲ. ನನಗೆ ಹಗ್ಗವೂ ಹಾವಾಗೇ ಕಾಣಿಸೋಕೆ ಮೊದಲಾಗಿದೆ. ಕಣ್ಣು ಮಂಜಾಗಿದೆ. ಎಲ್ಲೆಲ್ಲೂ ಭಯ. ನನ್ನ ವಿವೇಚನೆಯಲ್ಲೇ ನನಗೆ ಭರವಸೆ ಇಲ್ಲ.

**ಸರೋಜ :** ಕಾಗದ ಬರೆದರೆ ಹಾಗೆಲ್ಲ ಏನು ಆಗದೆ ಇರಬಹುದು. ಆದರೂ ಎದುರಿಗೆ ಚರ್ಚೆ ಮಾಡಿ ನಿರ್ಧರಕ್ಕೆ ಬರುವಷ್ಟು ಉತ್ತಮ ಮಾರ್ಗ ವಲ್ಲ— ಅದು.

**ತಾರಾ :** ಹುಂ. ಅದೇ ನಾನು ಹೇಳೋದು. ಎದುರಿಗೆ ಬಂದರೆ ಹೇಗಾದರೂ ಎದೆ ಬಿಚ್ಚಿ ಹೇಳಿ ಒಂದು ದಾರಿ ಹತ್ತ್ತೋದಿಕ್ಕೆ ಏರ್ಪಡಿಸೋಕೆ ಆಗಬಹುದು.

**ಸರೋಜ :** ಸರಿ, ಬರೋಕೆ ಬರೆದರೋ ?

**ತಾರಾ :** ಅವರು ಏನು ಅಂತ ತಿಳಿದುಕೋ ಬೇಕು ? ಅನುಮಾನದಲ್ಲಿ ತಂದೆ ತಾಯಿಗೆ ಹೇಳಿ ಅವಿವೇಕ ಆಗಿದೆ ಅಂತ ಸುಳು ತಿಳಿದರೋ ? ಇದೆಲ್ಲ ಗುಟ್ಟಾಗೇ ಆಗಬೇಕು. ಇದಕ್ಕೇ ನಾನು ಏನನ್ನೂ ಇನ್ನೂ ಬರೆದೇ ಇಲ್ಲ— ಹಾಗೆ ಮಾಡಬೇಕು ಅಂತ ನೂರು ಸಲ ಮನಸ್ಸಿಗೆ ಬಂದಿದ್ದರೂ.

**ಸರೋಜ :** 'ಕಾಯಿಲೆ ಆಗಿದೆ ಬನ್ನಿ' ಅಂತ ಬರೆದರೆ ?

**ತಾರಾ :** ಅದು ಹೇಗಾಗುತ್ತೆ ? ಅದನ್ನ ಅವರು ಮನೆಗೆಲ್ಲ ಹೇಳಿ, ಅವರೆಲ್ಲ ಗಾಬರಿಯಾಗಿ, ಕಾಗದ ಪತ್ರ ನಡೆದು ಅದು ಅಪ್ಪನಿಗೂ ಗೊತ್ತಾಗಿ, ಆವನು ಡಾಕ್ಟರು, ಔಷಧಿ ಅಂದು, ಎಲ್ಲ ತಿಳಿದೇ ಹೋಗುತ್ತೆ ಎಲ್ಲರಿಗೂ. ಅಲ್ಲದೆ ಅವರು ಆತುರದಿಂದ ಹಾರಿ ಬಂದು ಹೀಗೆ ಅಂತ ತಿಳಿದರೆ ಮೋಸ ಮಾಡಿದಳು ಅಂತ ವಿಶ್ವಾಸ ಕಡಿಮೆ ಆಗೋದಿಲ್ಲವೆ ?

**ಸರೋಜ :** ಹೇಗೆ ಬರಮಾಡೋದು ? ಯಾವ ಉಪಾಯದಿಂದ ?.... ಹ ! ನಮ್ಮ ಯಜಮಾನರು ದೀಪಾವಳಿಗೆ ಬರೋಹಾಗೆ ಬರೆದಿದೆ. ನಿಮ್ಮೋರನ್ನೂ ಹಾಗೆ ಯಾಕೆ ಕರೆಸಬಾರದು ?

**ತಾರಾ :** ಹುಂ. ಹಾಗೆ ಮಾಡಬಹುದು. ಅವರು ಏನಾದರೂ ಅಡ್ಡಿ ಅಂತ ಬರೆದರೆ ?

**ಸರೋಜ :** ನೀನು ಬರಿ 'ಖಂಡಿತಾ ಬರಲೇ ಬೇಕು' ಅಂತ. ನೋಡೋಣ.

**ತಾರಾ :** ಆಗಲಿ. ಆದರೆ ದೀಪಾವಳಿ ಯಾವಾಗ ಇನ್ನೂ ಹೆಚ್ಚು ಕಡಿಮೆ ತಿಂಗಳ ಮೂರು ಅಲ್ಲವೆ ?

**ಸರೋಜ :** ಸುಮಾರು ಇಪ್ಪತ್ತು ದಿನ. ಏನು ಮಾಡೋದು, ಕಾಯಲೇ ಬೇಕು. ವಿಧಿಯಿಲ್ಲ. ಗುಮಾನಿ ಇಲ್ಲದೆ ಕೆಲಸ ಸರಿಯಾಗಿ ನಡೆಯಬೇಕಾದರೆ ಅದೇ ಸರಿ ಅಂತ ತೋರುತ್ತೆ.

**ತಾರಾ:** (ಅನುಮಾನಿಸುತ್ತ) ಹಾಗೇ ಆಗಲಿ.

**ಸರೋಜ:** ಅಷ್ಟು ಹೊತ್ತಿಗೆ ನಿನಗೆ ಎಷ್ಟು ದಿನ ಆಗುತ್ತೆ–ಸುಮಾರು?

(ತಾರಾ ಮೂರು ಬೆರಳನ್ನು ತೋರಿಸುತ್ತಾಳೆ.)

ಆಗಲಿ ಇನ್ನೇನು ಮಾಡೋದು? ಬೇರೆ ದಾರಿಯಿಲ್ಲ.

**ತಾರಾ:** ಸರೋಜ, ನೋಡು, ನಾನು ಏನೇನು ನೆನೆಸಿಕೊಂಡು ಎಷ್ಟೆಷ್ಟು ಉಲ್ಲಾಸ ಪಡುತ್ತಿದ್ದೆ. ಈಗ ನನ್ನ ಬಡಸ್ಥಿತಿ ಎಲ್ಲಿಗೆ ಬಂತು? ಉತ್ಸಾಹದಿಂದ ಯಾವುದು ಮೆರೆಸಬೇಕಾಗಿತ್ತೋ ಅದನ್ನೇ ಸಂಕಟದಿಂದ ಮರೆಸಬೇಕಲ್ಲ. ಅದೇ ನನ್ನ ಆತಂಕದಿಂದ ಉರಿಸುತ್ತಲ್ಲ! ಎಷ್ಟೋ ಹೆಂಗಸರು ತಪಸ್ಸು ಮಾಡಿ ಪಡೆಯೋ ವರ ನನ್ನ ಪಾಲಿಗೆ ಶಾಪ ಆಯಿತಲ್ಲ. ಯಾವ ಕಾಲ ಹೆಂಗಸರು ಬಯಸಿ ಬಯಸಿ ಕಾದುಕೊಂಡು ಇರುತ್ತಾರೋ ಅದು ನನಗೆ ಭಯಾನೇ ತಂದಿತಲ್ಲ. ಏನು ದುರದೃಷ್ಟ ನನ್ನದು!

**ಸರೋಜ:** ತಾರಾ, ಅಷ್ಟೊಂದು ವ್ಯಸನಪಡಬೇಡ. ಒಳ್ಳೆಯದಲ್ಲ. ಈಗಲೂ ಎಲ್ಲ ಸರಿ ಹೋದೀತು. ಹೆಣ್ಣು ಅಂತ ಹುಟ್ಟಿದ ಎಂಥೆಂಥ ಜೀವಕ್ಕೇ ಎಷ್ಟೆಷ್ಟು ಕಷ್ಟ ಬಂತು ನೆನಸಿಕೊ. ಆ ರಾಮನಂಥ ಗಂಡನ್ನ ಹೊಂದಿದ ಸೀತಾದೇವಿಗೂ ಏನೇನು ಭಂಗ ಬಂತು ನೋಡು ಕಡೆಗೂ. ಅಪರಾಧ ಹೊತ್ತು ಕಾಡಿಗೇ ಹೋಗಬೇಕಾಯ್ತಲ್ಲ— ಪೂರ್ಣ ಗರ್ಭಿಣಿಯಾಗಿದ್ದಾಗ?

**ತಾರಾ:** ಛೆ, ಪಾಪ! ಎಷ್ಟು ತೊಳಲಿದಳು ಅವಳು! ವಾಲ್ಮೀಕಿ ಮಾತ್ರ ಕಂಡು ಕರುಣೆ ತೋರಿಸದೇ ಇದ್ದರೆ ಅವ ಗತಿ ಏನಾಗುತ್ತಿತ್ತೋ ಏನೋ. ಆದರೆ ಅವಳ ಬಸಿರಿಗೆ ಯಾರೂ ಅಪವಾದ ಹೊರಿಸೋ ಹಾಗಿರಲಿಲ್ಲ. ಅದೊಂದು ನೆಮ್ಮದಿ ಅವಳಿಗೆ.

**ಸರೋಜ:** ದ್ರೌಪದಿಗೋ ಆಗಬಾರದ ಅವಮಾನವೆಲ್ಲ ಆಯ್ತು; ಅದೂ ರಾಜಾಸ್ಥಾನದಲ್ಲಿ ತನ್ನ ಗಂಡಂದಿರ ಇದಿರಿಗೇ.

**ತಾರಾ:** ಛೀ; ಅವಳು ಎಷ್ಟು ಭಂಗಪಟ್ಟಳು! ಅವರೇನು ಗಂಡಂದಿರೇ?

**ಸರೋಜ:** ಮಿಂಡಂದಿರು! (ತಾರಾ ಬಾಯಿನ ಮೇಲೆ ಬೆರಳನ್ನಿಟ್ಟುಕೊಳ್ಳುತ್ತಾಳೆ) ಹುಂ. ಇನ್ನೇನು ಮುತ್ತಾಳರು. ಅವಳು ಸುಖಕ್ಕೆ ಅನು

ಕೂಲಕ್ಕೆ ಮಾತ್ರ ಬೇಕು. ಕಷ್ಟದಲ್ಲಿ ಅವಳನ್ನು ಕಾಪಾಡೋದು ಮಾತ್ರ ಇಲ್ಲ. ದಾಥರ್ಪದ ಹಾಗೆ ಅವಳನ್ನೆ ಪಣ ಇಟ್ಟು ಸೋಲೋದಿಕ್ಕೂ ಹೇಸಲಿಲ್ಲ. ಇನ್ನೆಂಥ ಗಂಡಂದಿರು ಅವರು? ಎಲ್ಲರೂ ಷಂಡರು.

**ತಾರಾ :** ಸ್ವತಂತ್ರ ತೀರ್ಮಾನವೇ ಇಲ್ಲ. ಎಲ್ಲ ಒಬ್ಬ ಹೇಳಿದ ಹಾಗೆ. ಅವನದ್ದೊಂದು ಅಧರ್ಮದ ಧರ್ಮ-ಬರಿ ಕಾಯಿದೆ ನೀತಿ. ಮನಷ್ಯ ರೀತಿಯಲ್ಲ.

**ಸರೋಜ :** ಶಾಕುಂತಲೆಯೋ ?

**ತಾರಾ:** ಅಯ್ಯೋ, ಅವಳು ಏನೇನು ಸಹಿಸಿದಳೇ— ಅಬ್ಬಬ್ಬ! ಇನ್ನೊಂದು ಹೆಣ್ಣಿಗೇ ಬರಲಿಲ್ಲ— ಆ ಅಪಮಾನದ ಯಾತನೆ. ತಾನು ನಂಬಿ ಕೈಹಿಡಿದ ಗಂಡನೇ ಕೈಬಿಟ್ಟು, ಅನುಮಾನಿಸಿ, ಮೂದಲಿಸಿ, ಅಪಮಾನಿಸಿ ಹೊರಗೆ ಹಾಕಿಬಿಟ್ಟನಲ್ಲ. ಛೆ, ಅವಳು ಹೇಗೆ ಜೀವಸಹಿತ ಉಳಿದುಕೊಂಡಳಪ್ಪ! ಶಾಪ, ಗೀಪ, ಮರೆವು ಎಲ್ಲ ಹಾಗಿರಲಿ. ಅವೆಲ್ಲ ಆ ಗಂಡನಿಗೆ ಒಂದು ಬಣ್ಣ ಅಷ್ಟೆ. ಅದರಿಂದ ಅವಳ ಹಿಂಸೆ ಎಳ್ಳಷ್ಟಾದರೂ ಕಡಿಮೆ ಆಯ್ತೆ ? ಅದೇನು ಕತೆ ಅವಳದ್ದು !

**ಸರೋಜ :** ಹೀಗೇ........ ತಾರಾಮತಿ........

**ತಾರಾ :** ಸರೋಜ !

**ಸರೋಜ :** ಏನು ತಾರಾ !

**ತಾರಾ :** ಇವರನ್ನೆಲ್ಲ ನೆನೆಸಿಕೊಂಡು ನನಗೇಕೋ ಇನ್ನೂ ಭಯ ಹೆಚ್ಚಾಗುತ್ತಾ ಇದೆ, ಧೈರ್ಯ ಬರುವುದಕ್ಕೆ ಬದಲು.

**ಸರೋಜ:** ನೀನೊಬ್ಬಳು ಹುಚ್ಚಿ. ಹಾಗೆಲ್ಲ ಹೇಗಾದೀತು ನಿನ್ನ ವಿಷಯದಲ್ಲಿ. ಛೀ!

**ತಾರಾ :** ಯಾಕಾಗಬಾರದು ? ದುಷ್ಯಂತನ ಹಾಗೆ ಒಪ್ಪಿಕೊಳ್ಳದೇ ಇದ್ದರೋ ಅವರು ?

**ಸರೋಜ :** ಏನು ನೀನಾಡೋದು—ತೀರ ಅತಿರೇಕ. ಎಂದಿಗಾದರೂ ಹಾಗೆ ಮಾಡಾರೆ?

**ತಾರಾ :** ಇ........ಲ್ಲ. ಆದರೂ........

**ಸರೋಜ :** ಸಾಕು ನಿನ್ನ ಅನುಮಾನ. ಅವರಿಗೇನು ಶಾಪ ತಟ್ಟಿದೆಯೆ? ಅವರೇನು ಅಷ್ಟು ಧೂರ್ತರೇ? ಅವರಿಗೆ ಅನ್ಯಾಯ ಮಾಡಬೇಡ.

**ತಾರಾ :** ಬಿಡತು ಅಂದೆ.... ಒಪ್ಪಿಕೊಂಡರೂ ತಮಗೆ ಅಪವಾದ ಬರುತ್ತೆ ಅಂತ ಅಲಕ್ಷಿಸಿ ಬಿಟ್ಟರೆ— ಆ ರಾಮನ ಹಾಗೆ?

**ಸರೋಜ :** ನೋಡಿದೆಯಾ ಮತ್ತೆ. ಅವರೇನು ಅಷ್ಟು ಅನಾಗರಿಕರೆ?

**ತಾರಾ :** ಛೆ........ ಇಲ್ಲ........ ಎಂದಿಗೂ ಇಲ್ಲ. ಆದರೂ ಆ ಧರ್ಮರಾಯನ ಮಾತು ಕೇಳಿಕೊಂಡು ಸುಮ್ಮನೆ ಇದ್ದ ಭೀಮ, ಅರ್ಜುನ ಇವರ ಹಾಗೆ ಇವರೂ ತಂದೆ ಮಾತು ಮೀರಲಾರದೆ ತಟಸ್ಥರಾಗಿ ಕೈಬಿಟ್ಟರೆ?

**ಸರೋಜ :** ನಿನಗೇಕೋ ಬಹಳ ಭ್ರಮೆ ಹಿಡಿದಿದೆ. ಇದನ್ನೆಲ್ಲ ಮರೆತು ಬಿಡು. ನನ್ನ ಮಾತು ಕೇಳು. ಎಲ್ಲ ಸರಿಯಾಗುತ್ತೆ. ಸುಮ್ಮನೆ ಹುಚ್ಚು ಹಿಡಿಸಿಕೋ ಬೇಡ— ಹೀಗೆಲ್ಲ ಯೋಚಿಸಿಕೊಂಡು.

**ತಾರಾ :** ನನಗಾಗಲೇ ಹುಚ್ಚು ಹಿಡಿದಿದೆಯೋ ಏನೋ.

**ಸರೋಜ :** ಸಾಕು ಸಾಕು....ಮಾತು ನಿಲ್ಲಿಸು. ಅಲ್ಲಿ ನೋಡು ನಿಮ್ಮ ತಂದೆ ಬಂದರು.

— ತೆರೆ —

## ದೃಶ್ಯ ೨

[ಸ್ಥಳ: ದೇವಯ್ಯನ ಮನೆಯ ಮಲಗುವ ಕೋಣೆ   ಕಾಲ: ದೀಪಾವಳಿಯ ದಿನ ಬೆಳಿಗ್ಗೆ ಹತ್ತು ಗಂಟೆಯ ಸಮಯ. ಹಬ್ಬಕ್ಕೆ ಬಂದ ರಾಮಚಂದ್ರನು ಎಡದ ಕೈಯಲ್ಲಿ ಕನ್ನಡಿಯನ್ನು ಹಿಡಿದುಕೊಂಡು ತಲೆಯನ್ನು ಬಾಚಿಕೊಳ್ಳುತ್ತಾ ಇರುತ್ತಾನೆ. ಬೆನ್ನು ಬಾಗಿಲಿನ ಕಡೆಗೆ ತಿರುಗಿರುತ್ತದೆ. ದಟ್ಟಿ ಪಂಚೆ ಬನಿಯನ್ನುಗಳೇ ಅವನ ಬಟ್ಟೆ. ಭುಜದ ಮೇಲೆ ಒಂದು ಟವಲ್ ಇದೆ. ತಾರಾ ಮೆಲ್ಲಗೆ ಪ್ರವೇಶಿಸುತ್ತಾಳೆ   ಹಸಿರು ಪೀತಾಂಬರವನ್ನುಟ್ಟು, ಗುಲಾಬಿ ಕುಪ್ಪಸವನ್ನು ತೊಟ್ಟಿದ್ದಾಳೆ. ಜಡೆ ಹೆಣೆದುಕೊಂಡು ಹೂವು ಮುಡಿದುಕೊಂಡು ಸಿಂಗರಿಸಿಕೊಂಡಿದ್ದಾಳೆ. ಮುಖಮುದ್ರೆಯು ಬಹಳ ಗಂಭೀರವಾಗಿದೆ. ಮೇಲಕ್ಕೆ ಹತ್ತಿ ಬರುವ ದುಃಖದ ಉದ್ವೇಗವನ್ನು ಬಹು ಕಷ್ಟದಿಂದ ತಡೆದುಕೊಂಡ ಸ್ವಭಾವವು ಸೂಚಿತವಾಗುತ್ತದೆ. ಒಳಗೆ ಬಂದವಳೆ ಬಾಗಿಲನ್ನು ಹಾಕಿಕೊಂಡು ಅಗಣಿಯನ್ನು ಸರಿಸುತ್ತಾಳೆ.]

**ರಾಮಚಂದ್ರ :** (ತಿರುಗದೆಯೇ ಸದ್ದನ್ನು ಕೇಳಿ) ಓಹೊ, ಏನು ಅಮ್ಮಾವರು ! ಹಬ್ಬಕ್ಕೆ ಬರಲೇಬೇಕು ಅಂತ ಕಾಗದ ಬರೆದು ಇಲ್ಲಿಯವರೆಗೂ ಮರೆಸಿಕೊಂಡೇ ಇದ್ದುಬಿಟ್ಟರಲ್ಲ— ನಿಮ್ಮ ಪ್ರತಿನಿಧಿ ಕಳುಹಿಸಿಬಿಟ್ಟು ?

**ತಾರಾ :** ಕಾಣಿಸಿಕೊಳ್ಳೋಕೆ ನಾಚಿಕೆ ಆಯ್ತು.

**ರಾಮಚಂದ್ರ :** ಓ, ಪಾಪ, ಪಾಪ ! ಇದೇ ಮೊದಲ ದೀಪಾವಳಿ ಅಲ್ಲವೆ ?

**ತಾರಾ :** ಹುಂ. ಇಂಥಾದ್ದು.

**ರಾಮಚಂದ್ರ :** ಹಾಗಂದರೆ ? (ತಟ್ಟನೆ ತಿರುಗಿ) ಓ, ಏನು ಚೆಲುವು! ಏನು ಗಾಂಭೀರ್ಯ! ನನ್ನ ಮುದ್ದು ಮಡದಿಯದು!

**ತಾರಾ :** ಆ ಹೊರ ಹೊದಿಕೆಗೇನು........

**ರಾಮಚಂದ್ರ :** ತೆಗೆದಳು ಏನೋ ಜಂಬ ಹರಟೆ. ಬಾ ಇಲ್ಲಿ (ಹತ್ತಿರ ಹೋಗಿ ಕೈಹಿಡಿದುಕೊಂಡು ಗಮನವಿಟ್ಟು ದೃಷ್ಟಿಸಿ) ಇದೇನು ನನ್ನ ಪಾರಿವಾಳ ಇಷ್ಟು ಸಪ್ಪೆಯಾಗಿದೆ.... ಈ ಹಬ್ಬದಲ್ಲಿ ?

**ತಾರಾ :** ಉತ್ಸವದಲ್ಲಿ ದುಃಖಿಸೋದೆ ಈ ಹತಭಾಗ್ಯೆಯ ಗತಿಯಾಗಿದೆ—

**ರಾಮಚಂದ್ರ**: (ಚುಚ್ಚಲ್ಪಟ್ಟವನಂತೆ ಹಿಂದೆಗೆದು) ಹ! ಏನು ಹುಷಾರಿಲ್ಲವೆ ನಿನಗೆ?

**ತಾರಾ**: ದೇಹದಲ್ಲಿ ತಕ್ಕಮಟ್ಟಿಗೆ ಇದ್ದೀನಿ.

**ರಾಮಚಂದ್ರ**: ಮನಸ್ಸಿಗೆ ಯಾಕೆ ಅಷ್ಟೊಂದು ಚಿಂತೆ? ನನ್ನ ಪದ್ಮ ಯಾಕೆ ಇಷ್ಟು ಬತ್ತಿಹೋಗಿದೆ?

**ತಾರಾ**: ಆ ಕೊರತೆ ಒಳಒಳಗೇ ಕೆರಕೆರಳಿ.

**ರಾಮಚಂದ್ರ**: ಚಿನ್ನ, ಆಗಲೇ ಹೋಗುವಾಗ ಹೇಳಿದ್ದೆನಲ್ಲ ಕೊಂಚ ಸೈರಿಸಿಕೊಳ್ಳಬೇಕು ಅಂತ.

**ತಾರಾ**: ಆದಲ್ಲ. ಹೊಸ ಚಿಂತೆ ಬಂದಿದೆ, ಹಳೇದನ್ನು ಮುಚ್ಚಿದೆ.

**ರಾಮಚಂದ್ರ**: ಅದೇನು? (ಕೊಂಚ ಯೋಚಿಸುತ್ತ) ಅಂಥಾದ್ದು?

**ತಾರಾ**: ಸ್ವಾಮಿ, ಹೇಗೆ ಹೇಳಲಿ?

**ರಾಮಚಂದ್ರ**: ಏನಾಯ್ತು, ನನ್ನ ಗುಲಾಬಿಗೆ? (ಅಪ್ಪಿಕೊಳ್ಳುತ್ತ, ಹೇಳು ಧೈರ್ಯವಾಗಿ.

**ತಾರಾ**: ನಾನು........

**ರಾಮಚಂದ್ರ**: ಹುಂ, ನನ್ನಲ್ಲಿ ಯಾಕೆ ಸಂಕೋಚ?

**ತಾರಾ**: (ಮೆಲ್ಲಗೆ) ತಾಯಿ!

**ರಾಮಚಂದ್ರ**: (ತಟ್ಟನೆ ಕೈಬಿಟ್ಟು ಹಿಂದೆ ಸರಿದು ಆಶ್ಚರ್ಯದಿಂದ) ಹ! ನಿಜವಾಗಿ!

**ತಾರಾ**: ನಿಮಗೆ ಭಯವೆ?

**ರಾಮಚಂದ್ರ**: ಇಲ್ಲ........ (ಚಿಂತಿಸುತ್ತಾನೆ)

**ತಾರಾ**: ಬೇಸರವೆ?

**ರಾಮಚಂದ್ರ**: ಛೆ, ಎಂದಿಗೂ ಇಲ್ಲ. ತಟ್ಟಂತ ಕೇಳಿದ್ದು ಕೊಂಚ Shock ಆಯ್ತು. ಯೋಚಿಸಿರಲಿಲ್ಲ.

**ತಾರಾ :** ನನಗೂ ಹಾಗೇ ಆಯಿತು, ಸೂಚನೆ ಗೊತ್ತಾದಾಗ.

**ರಾಮಚಂದ್ರ :** ಇದು ಯಾವಾಗ ?........ಅಂದರೆ ಎಷ್ಟು ?........

**ತಾರಾ :** ಮೂರು ತಿಂಗಳು.

**ರಾಮಚಂದ್ರ :** ಹುಂ ! ಇಷ್ಟು ದಿನವೂ ನನಗೆ ಯಾಕೆ ತಿಳಿಸಲಿಲ್ಲ ? ಬರೆಯಲಿಲ್ಲ ?

**ತಾರಾ :** ಹೇಗೆ ಬರೆಯಲಿ ? ನನಗೆ ಭಯ ಆಯ್ತು.

**ರಾಮಚಂದ್ರ :** ಹುಂ !

**ತಾರಾ :** ನಿಮಗೆ ಸಿಟ್ಟೆ ?

**ರಾಮಚಂದ್ರ :** ಇಲ್ಲ........ಇಲ್ಲ ಪಾಪ, ಇಷ್ಟು ದಿನ ನೀನು ಒಬ್ಬಳೇ ಒಳಗೆ ಒಳಗೇ ಕುದೀತ ಹೇಗೆ ಸೈರಿಸಿದೆಯೋ ಅಂತ.

**ತಾರಾ :** ನನಗೆ ಯಾವುದೂ ತೋರಲೇ ಇಲ್ಲ, ಏನು ಮಾಡಬೇಕು ಅಂತ.

**ರಾಮಚಂದ್ರ :** ಹೇಗೆ ತಿಳಿಯುತ್ತೆ, ಹೇಗೆ ತಿಳಿಯುತ್ತೆ ಇಂಥ ಅನುಭವದಲ್ಲಿ, ಏನೂ ಅರಿಯದ ಹಾಲಿನಂಥ ಹುಡುಗಿಗೆ ?

**ತಾರಾ :** ಇಷ್ಟು ಕಾಲವೂ ಇದು ನನ್ನ ಎದೆ ಎಷ್ಟು ಕಲಕಿಬಿಟ್ಟಿದೆಯೋ ಏನೋ. ನನ್ನ ಬುದ್ಧಿಯೂ ಸ್ಥಿಮಿತದಲ್ಲೇ ಇಲ್ಲ ಅನ್ನೋ ಹಾಗೆ ಆಗಿದೆ.

**ರಾಮಚಂದ್ರ :** ಪಾಪ, ನನ್ನ ಮೃದುಮಲ್ಲಿಗೆ ಈ ಝಳಕ್ಕೆ ಸಿಕ್ಕಿ ಎಷ್ಟು ಕಂಗೆಟ್ಟಿತೋ ಏನೋ.

**ತಾರಾ :** ಈ ಸಮಾಚಾರವನ್ನೇ ಬೇರೆ ಸಂದರ್ಭದಲ್ಲಿ ಎಷ್ಟು ಹರ್ಷದಿಂದ ಹೇಳಿಕೊಳ್ಳಬೇಕು ಅಂತ ನೆನೆಸಿಕೊಂಡಿದ್ದೆ; ಈಗ ದುಃಖದಿಂದ ಬಚ್ಚಿಟ್ಟುಕೊಳ್ಳಬೇಕಾಯ್ತು.

**ರಾಮಚಂದ್ರ :** ಅದೇಕೆ, ಬಿಡು.

**ತಾರಾ**: ಇದರಿಂದ ಎಷ್ಟು ಹೆಮ್ಮೆ ಪಡುತ್ತೀನಿ ಅಂತ ತಿಳಿದ ಕೊಂಡಿದ್ದೆ, ಈಗ ಅದರಿಂದ ದೈನ್ಯತೆ, ಹೀನಾಯ........

**ರಾಮಚಂದ್ರ** : ಛೇ, ಹಾಗೆಂದರೇನು ?

**ತಾರಾ** : ಅಭಿಮಾನದಿಂದ ಉಕ್ಕಬೇಕು ಅಂತ ಅಂದುಕೊಂಡಿದ್ದೋಳು ಅವಮಾನದಿಂದ ಕುಗ್ಗಿದೀನಿ.

**ರಾಮಚಂದ್ರ**: ಯಾಕೆ ಅವಮಾನ ? ಹಾಗೆಲ್ಲ ಅನ್ನಬಾರದು.

**ತಾರಾ**: ಇದನ್ನು ನಿಮಗೆ ತಿಳಿಸಿ ಸಂತೋಷಪಡಿಸಿ ಬಹುಮಾನ ಪಡೆಯಬೇಕು ಅಂತ ಲೆಕ್ಕ ಹಾಕಿಕೊಂಡಿದ್ದೆ— ಮದುವೆ ಆದಾಗಿನಿಂದ. ಈಗಲೋ ತಪ್ಪಿತಸ್ಥಳಂತೆ........

**ರಾಮಚಂದ್ರ** : ಏ, ಹುಚ್ಚಿ. ಇದೆಲ್ಲ ಏನು ಮಾತು. ಬಾ, ಇಲ್ಲಿ. (ಅಪ್ಪಿಕೊಂಡು ಮುಂದಲೆಯನ್ನು ನೇವರಿಸುತ್ತ) ಏನು ಬಹುಮಾನ ಬೇಕು ಹೇಳು.

**ತಾರಾ** : ಆಗಿಂದು ಕೇಳಿ ಈಗೇನು ಪ್ರಯೋಜನ ? ಈಗ ಎಲ್ಲಕ್ಕಿಂತ ಹೆಚ್ಚಾದ ಬಹುಮಾನ ಅಂದರೆ ನನ್ನನ್ನು ಈ ಕೊರತೆಯಿಂದ ಎತ್ತಿ ಕಾಪಾಡೋದೇ ಹೊರತು ಬೇರೆ ಏನಿದೆ ?

**ರಾಮಚಂದ್ರ** : ಇದಕ್ಕೆ ಏನು ಸರಿಯಾದ ಸುಲಭವಾದ ಉಪಾಯ ಅಂತ ?

**ತಾರಾ** : ಅದನ್ನೇ ನಾನೂ ಯೋಚಿಸಿ ಯೋಚಿಸಿ ಕೊರಗಿ ಬೇಸತ್ತಿದೀನಿ. ನೀವೇ ಸರಿಯಾಗಿ ಏನಾದರೂ ಮಾಡಿ ತಿದ್ದಬೇಕು.

**ರಾಮಚಂದ್ರ** : (ತೀಕ್ಷ್ಣವಾಗಿ ಯೋಚಿಸುತ್ತ) ಹುಂ !

**ತಾರಾ** : ಈಗಲೇ ಆ ಶಾಸ್ತ್ರ ಮುಗಿಸಿ........?

**ರಾಮಚಂದ್ರ** : ಅದೇನೋ ಸರಿ. ಆಗಬೇಕಾದದ್ದೆ. ಆದರೆ ಅಪ್ಪ ಅದಕ್ಕೆ ಎಂದೂ ಒಪ್ಪೋದಿಲ್ಲ. ನಿಮ್ಮ ಅಪ್ಪ ಅತ್ತಲಾಕಡೆ ಮುನ್ನೂರು ರೂಪಾಯಿ ತೆತ್ತುಬಿಡಬಾರದೆ? ಆಗ ದಾರಿಯೆಲ್ಲ ಸರಿ ಹೋಗುತ್ತೆ.

**ತಾರಾ:** ಅಯ್ಯೋ, ಅಪ್ಪನ ಗತಿ ಏನು ಹೇಳೋಣ. ವರ್ಷದ ಕೆಳಗೆ ಪುಸ್ತಕ್ಕೆ ಅಂತ ತಂದ ಸಾಲಾನೆ ಇನ್ನೂ ತೀರಿಸೋಕೆ ಆಗಿಲ್ಲ ಅವನಿಗೆ. ಮೂರು ಕಾಸು ಹುಟ್ಟೋದಿಲ್ಲ ಅಂತಾನೆ. ಸಾಧ್ಯವಾದರೆ ಅವನಲ್ಲ ಹಿಂತೆಗೆಯೋನು. ಪಾಪ, ಅವನಿಗೆ ನನ್ನ ನೋಡಿದಾಗೆಲ್ಲ ನಿಟ್ಟುಸಿರು. ಅವನ್ನು ಒಂದು ತರದ ದುಃಖದಲ್ಲಿ ಬೆಂದುಹೋಗುತ್ತಾ ಇದ್ದಾನೆ. ನನಗೆ ಚೆನ್ನಾಗಿ ಗೊತ್ತು.

**ರಾಮಚಂದ್ರ:** ನಮ್ಮ ಅಪ್ಪನೋ ಚಂಡಿ ಹಿಡಿದು ಕೂತಿದ್ದಾನೆ. ಅದು ಇಲ್ಲದೆ ಮಾತು ಆಡೋ ಹಾಗೇ ಇಲ್ಲ. ಯಾರು ಏನು ಹೇಳಿದರೂ ಅವನ ತಲೆಗೆ ಹತ್ತೋದೇ ಇಲ್ಲ. ಮಹಾ ಹಟವಾದಿ.

**ತಾರಾ:** ಇಲ್ಲಿ ಅದನ್ನ ಮುಗಿಸಿ ಅವರಿಗೆ ತಿಳಿಸಿದರೋ ?

**ರಾಮಚಂದ್ರ:** ಏನು !

**ತಾರಾ:** ಆಮೇಲೆ ಅವರಿಗೆ ಸಮಾಧಾನ ಹೇಳೋಕೆ ಆಗೋದಿಲ್ಲವೆ ?

**ರಾಮಚಂದ್ರ:** ಅಯ್ಯೊ, ಅಯ್ಯೋ; ಅದು ದೊಡ್ಡ ರಂಪಕ್ಕೇ ಇಟ್ಟುಕೊಂಡೀತು. ಇಲ್ಲ. ಅದು ತಪ್ಪುದಾರಿ. ಅವನಿಗೆ ಹೇಳಿ ಒಪ್ಪಿಗೆ ತೆಗೆದುಕೊಳ್ಳದೆ ಏನನ್ನೂ ಮಾಡೋ ಹಾಗಿಲ್ಲ. ಅದು ಅವಿಧೇಯತೆ, ಅನೀತಿ.

**ತಾರಾ:** (ನೊಂದು ದೀನಳಾಗಿ) ಹೋಗಲಿ, ಯಾವುದೂ ಬೇಡ. ಹಾಗೇ ನಿಮ್ಮ ಜತೆಯಲ್ಲಿ ಬಂದುಬಿಡುತ್ತೀನಿ. ಗೃಹಿಣಿಯಾಗಿ ಇಲ್ಲದೆ ಇದ್ದರೆ ನಿಮ್ಮ ದಾಸಿಯಾಗಿ........

**ರಾಮಚಂದ್ರ:** ಛೀ, ಛೀ ಏನು ಮಾತು, ಏನು ಮಾತು! ನನ್ನ ಗೃಹಿಣಿ, ಗೃಹಲಕ್ಷ್ಮಿ ನೀನು. ಹಾಗೆಲ್ಲ ಕರೆದುಕೊಂಡು ಹೋಗೋದು ಹೇಗೆ ಸಾಧ್ಯ ?

**ತಾರಾ:** ನನಗೆ ಪರವಾಯಿಲ್ಲ. ನನಗೆ ಸಂತೋಷವೇ.

**ರಾಮಚಂದ್ರ:** ಅದು ಆಗದು. ನಿನ್ನ ಘನತೆಗೆ ಮರ್ಯಾದೆಗೆ ಕಡಿಮೆ. ಅಲ್ಲದೆ ಅದನ್ನು ಸಮಾಜ ಹೇಗೆ ಒಪ್ಪುತ್ತೆ ? ಅದರಲ್ಲೇ ನಾವು ಬಾಳಬೇಕಲ್ಲ.

ಸುಮ್ಮಗೆ ನಮಗೆ ಕಷ್ಟ, ಕಿರಿ ಕಿರಿ ಆಗುತ್ತೆ ಮುಂದೆ. ಅವನ್ನ ಯಾಕೆ ಕರೆದುಕೋಬೇಕು? ಹೋಗಲಿ ಅಂದರೆ ಅಪ್ಪ ಮನೆ ಸೇರಿಸಬೇಕಲ್ಲ.

**ತಾರಾ:** ಬೇರೆ ಕಡೆ........

**ರಾಮಚಂದ್ರ:** ಇಲ್ಲ, ಅದು ಸಾಧ್ಯವಿಲ್ಲ. ಅವನ ವಿರೋಧ ಕಟ್ಟಿಕೊಳ್ಳೋದು ಆಗದು.

**ತಾರಾ:** ಹಾಗಾದರೆ ದಾರಿ ಬೇರೆ ಏನಿದೆ? ಅವರ ಸಮ್ಮತಿ ಪಡೆದೇ....

**ರಾಮಚಂದ್ರ:** ಹುಂ. ಅದು ಒಂದೇ ದಾರಿ. ಕಟ್ಟಳೆಗೇ ಕಟ್ಟುಬಿದ್ದು, ಅಪ್ಪನನ್ನು ಹೇಗಾದರೂ ಒಪ್ಪಿಸಿ ಇದನ್ನು ಸಾಧಿಸೋದೇ ಸರಿ.

**ತಾರಾ:** ಅದು ಹೇಗೆ ಆಗುತ್ತೆ ಈಗ? ಅವರಿಗೆ ಕಾಗದ ಬರೆದು ಒಪ್ಪಿಗೆ ಕೇಳುತ್ತೀರ?

**ರಾಮಚಂದ್ರ:** ಅದು ಪ್ರಯೋಜನವಿಲ್ಲ. ಅವನ ವಿಷಯ ನಾನು ಬಲ್ಲೆ. ಅವನು ಉತ್ತರವೇ ಕೊಡದೆ ಇದ್ದರೂ ಇರಬಹುದು. ನಾವು ಇಲ್ಲಿ ಸುಮ್ಮನೆ ವ್ಯರ್ಥ ಕಾಲ ಕಳೆಯಬೇಕಾಗುತ್ತೆ. ಅಲ್ಲೇ ಹೋಗಿ ಅವನಿಗೆ ತಿಳಿಸಿ........ ಏನಾದರೂ ಮಾಡಿದರೇ ಉಂಟು. ಇಲ್ಲದೆ ಇದ್ದರೆ ಏನೂ ಆಗೋದಿಲ್ಲ.

**ತಾರಾ:** ಅವರನ್ನು ಹೇಗೆ ಒಪ್ಪಿಸುತ್ತೀರಿ?

**ರಾಮಚಂದ್ರ:** ನೋಡಬೇಕು, ಹೇಗೆ ಹೇಗಾದರೂ ಹೇಳಿ. ಈ ಹಾಳು ಹಣದ್ದೇ ತೊಂದರೆ.

**ತಾರಾ:** ನನ್ನ ಒಡವೇನೆಲ್ಲ ಮಾರಿಬಿಡಿ, ಆದಷ್ಟು ಕೂಡಿಸಿಕೊಂಡು ಕೊಟ್ಟುಬಿಡಿ.

**ರಾಮಚಂದ್ರ:** ಅದಕ್ಕೂ ಅವನನ್ನೇ ಕೇಳಬೇಕು. ನನ್ನ ಜವಾಬ್ದಾರಿಗೆ ಹೆಚ್ಚಿದ್ದು. ಕೇಳಿ ನೋಡುತ್ತೀನಿ. ಈ ಚರ್ಚೆಯೆಲ್ಲ ಅವನ ಎದುರಿಗೇ ನಡೆಯಬೇಕು.

**ತಾರಾ:** ಮತ್ತೆ, ನೀವು ಅಲ್ಲಿಗೆ ಹೋದರೆ ನನ್ನ ಗತಿಯೇನು ಇಲ್ಲಿ?

**ರಾಮಚಂದ್ರ:** ಕೆಲವು ದಿನ ಮಾತ್ರ ತಾಳಿಕೊ ನನ್ನ ಚಿನ್ನ. ಮಾತುಕತೆಯನ್ನು ಬೇಗ ಮುಗಿಸಿಕೊಂಡು ಬಂದುಬಿಡುತ್ತೀನಿ.

**ತಾರಾ:** ಇಲ್ಲ, ಅದಕ್ಕೆ ಬಹಳ ಕಾಲ ಆದರೆ?

**ರಾಮಚಂದ್ರ:** ಅದು ಹೇಗೆ ಆದೀತು? ನನಗೆ ಗೊತ್ತಿಲ್ಲವೆ ಪರಿಸ್ಥಿತಿ?

**ತಾರಾ:** ನನಗೆ ಯಾಕೋ ಅನುಮಾನ ಆಗುತ್ತೆ; ಭಯಾನೂ.

**ರಾಮಚಂದ್ರ:** ಏ, ಏನಂತಿ ನೀನು ತೀರ?

**ತಾರಾ:** ಅಲ್ಲಿಗೆ ಹೋದಮೇಲೆ ಅವರ ಮಾತು ಕೇಳಿ ನಿಮ್ಮ ಮನಸ್ಸು ಹೇಗೆ.... ....

**ರಾಮಚಂದ್ರ:** ಇದೇನು ನನ್ನಲ್ಲಿ ಇಷ್ಟು ನಂಬಿಕೆ ಇಲ್ಲವೆ?

**ತಾರಾ:** ಹಾಗಲ್ಲ, ಹಾಗಲ್ಲ. ನಾನು ಅಂದದ್ದು ತಪ್ಪು. ನೀವೇ ನನ್ನ ಕಾಯೋರು. ಮಾನದಿಂದ ನಿಲ್ಲಿಸೋರು. ನಿಮ್ಮನ್ನು ನಂಬದೆ ಬೇರೆ ಹೇಗೆ ಮಾಡಲಿ?

**ರಾಮಚಂದ್ರ:** ಹಾಗಾದರೆ ಇವತ್ತು ಸಂಜೆಗೆ ಹೊರಟು ಬಿಡುತ್ತೀನಿ.

**ತಾರಾ:** ಅಷ್ಟು ಬೇಗ?

**ರಾಮಚಂದ್ರ:** ಹುಂ. ಆದಷ್ಟು ಜಾಗ್ರತೆ ಹೋಗೋದು ಒಳ್ಳೇದಲ್ಲವೆ?

**ತಾರಾ:** ನಿಜ, ಈ ಸಂಕಟದಲ್ಲಿ ಏನು ಸರಿಯೋ, ಏನು ಮಾಡಬೇಕೋ ನನಗೆ ತೋಚೋದೆ ಇಲ್ಲದ ಹಾಗಾಗಿದೆ. ನಿಮಗೆ ತಿಳಿದ ಹಾಗೆ ಮಾಡಿ. ನಾನು ಎಲ್ಲ ನಿಮಗೆ ತಿಳಿಸಿ ಬಿಟ್ಟಿದೀನಿ. ನಿಮ್ಮನ್ನೇ ನಂಬಿದ್ದೀನಿ. ನನ್ನ ಮಾನ, ಪ್ರಾಣ ಎಲ್ಲ ನಿಮ್ಮನ್ನೇ ಸೇರಿದೆ.

**ರಾಮಚಂದ್ರ:** ನೀನು ಭಯಪಡಬೇಡ. ಆತಂಕ ಬಿಡು. ಧೈರ್ಯದಿಂದ ಇರು. ನಾನು ಬೇಗನೇ ಕೆಲಸ ಸಾಧಿಸಿಕೊಂಡು ಬಂದು ಕರೆದುಕೊಂಡು ಹೋಗುತ್ತೀನಿ.

**ತಾರಾ:** ಆಹಾ, ಆ ದಿನ ಎಂದು ಬಂದೀತೋ!

**ರಾಮಚಂದ್ರ:** ಬಹಳ ಬೇಗ, ನನ್ನ ಬಂಗಾರ!

**ತಾರಾ:** ಬೇಗನೇ ಬರುತ್ತೀರ?

**ರಾಮಚಂದ್ರ:** ಅಲ್ಲದೆ?

**ತಾರಾ:** ತಪ್ಪದೆ?

**ರಾಮಚಂದ್ರ:** ಇದೇನೆ, ಹುಚ್ಚು ಹುಡುಗಿ!

**ತಾರಾ:** ನನ್ನ ಆಣೆಗೂ, ದೇವರ ಸಾಕ್ಷಿಯಾಗಿ?

**ರಾಮಚಂದ್ರ:** (ನಸುನಗುತ್ತ) ಮೊದಲಾಯ್ತು ಹಳೇ ಆಣೆ ಪ್ರಮಾಣ.

**ತಾರಾ:** ಇಲ್ಲ, ಹೇಳಿ. ಈಗ ನನಗೆ ಸಮಾಧಾನಕ್ಕೆ ಬೇಕು.

**ರಾಮಚಂದ್ರ:** ಆಗಲಿ. ನೀನು ಹೇಳಿದ ಆಣೆ, ಸಾಕ್ಷಿ ಎಲ್ಲಕ್ಕೂ ನನ್ನ ಒಪ್ಪು.

**ತಾರಾ:** ಛೇ, ನನಗೇಕೋ ಹುಚ್ಚೇ ಹಿಡಿದಿದೆಯೋ ಏನೋ. ನಿಮ್ಮನ್ನ ಅಲ್ಲದೆ ಯಾವ ದೈವನ ಯಾಕೆ ಎಳೆದುಕೊಂಡು ಬರಲಿ? ನಿಮಗೆ ಬೇಸರ....

**ರಾಮಚಂದ್ರ:** ನನಗೆ ಬೇಸರವೇ ನನ್ನ ಅಪ್ಸರೆಯಲ್ಲಿ? ಛೇ!

**ತಾರಾ:** ನೀವು ಮತ್ತೆ ಬರೋವರೆಗೂ ನಾನು ಹಾತೊರೆಯುತ್ತ, ಕುದಿಯುತ್ತಲೇ ಇರಬೇಕಲ್ಲ, ಎಲ್ಲ ನುಂಗಿಕೊಂಡು, ಅದುಮಿಕೊಂಡು.

**ರಾಮಚಂದ್ರ:** ಚಿನ್ನಾ, ಮತ್ತೆ ದಾರಿಯೇ ಇಲ್ಲವಲ್ಲ.

**ತಾರಾ:** (ತನ್ನ ಮುಖವನ್ನು ಮೇಲಕ್ಕೆ ಎತ್ತಿ ಅವನ ಮುಖವನ್ನು ನೋಡುತ್ತ, ಮೆಲ್ಲಗೆ ಅವನ ಮುಖವನ್ನು ಮತ್ತಷ್ಟು ತನ್ನ ಕಡೆಗೆ ಎಳೆದುಕೊಂಡು) ನೋಡಿ, ಇಲ್ಲಿ ನೋಡಿ ನನ್ನ ಮುಖದ ಕಡೆಗೆ, ನನ್ನ ಕಣ್ಣಿನಲ್ಲಿ. ನನಗೆ ಆಗಲೇ ಮೂರು ತಿಂಗಳು. ಹೇಗೆ ಹೇಗೋ ನಟಿಸಿಕೊಂಡು ಕಳ್ಳರ ಹಾಗೆ ಕಾಲ ಹಾಕುತ್ತಾ ಇದ್ದೀನಿ. ಈ ಕಳವಳ ನನ್ನ ಕಿತ್ತು ತಿನ್ನುತ್ತಾ ಇದೆ. ನಾನು ಹೊತ್ತಿರೋದು ನಿಮ್ಮ ವಂಶವನ್ನು. ನನ್ನ ಮಾನ ಪ್ರಾಣಗಳಂತೆ ಅದನ್ನೂ ರಕ್ಷಿಸಿಕೊಳ್ಳೋದು ನಿಮ್ಮ, ನನ್ನ— ಇಬ್ಬರ ಭಾರ. ಅದಕ್ಕಾಗಿ,

ನಮ್ಮಿಬ್ಬರ ಪ್ರೇಮಕ್ಕಾಗಿ, ಧರ್ಮ, ನೀತಿಗಾಗಿ, ನನ್ನ, ಅದರ ಮೇಲಿನ ಕರುಣೆಗಾಗಿ, ಅದಕ್ಕೆ ಕಳಂಕ ತಟ್ಟದಂತೆ ನೋಡಿಕೊಂಡು ಈ ಬಡ ನಿರ್ಭಾಗ್ಯೆಯನ್ನು ಪರಿಗ್ರಹಿಸಿ ಪಾವನಳಾಗಿ ಮಾಡಿ. ಇದು ನನ್ನ ಕಡೇ ಬೇಡಿಕೆ. ನನ್ನಲ್ಲಿ ಅಷ್ಟು ಕನಿಕರ ತೋರಿಸಿ. (ಕಣ್ಣೀರಿಡುತ್ತ ಅವನ ಕಾಲಿನೆಡೆಗೆ ಕುಸಿಯುತ್ತಾಳೆ).

**ರಾಮಚಂದ್ರ :** (ತಕ್ಷಣವೇ ಹಿಡಿದು ಎತ್ತುತ್ತ) ತಾರಾ, ನನ್ನ ಪ್ರಾಣ! ಇದೇನು ನಿನ್ನ ಹೇಳಿಕೆ, ನಡೆವಳಿಕೆ? ಯಾಕೆ ಈ ಕಣ್ಣೀರು? (ಟವಲಿನಿಂದ ಇಳಿಯುವ ಕಣ್ಣೀರನ್ನು ಒರೆಸುತ್ತ) ದುಃಖ ಬಿಡು, ನಾನು ಹೇಗೆ ನೋಡಲಿ? ಇದಕ್ಕೆಲ್ಲ ಏನು ಅಗತ್ಯ? ಹೀಗೆ ನೀನೆಂದೂ ಮಾಡಿರಲಿಲ್ಲ.

**ತಾರಾ :** ಒಮ್ಮೆ ನಾನು ಹೆಮ್ಮೆಯ ಹುಡುಗಿಯಾಗಿದ್ದೆ. ಮೋಹದ ಮಡದಿ. ಈಗ ದೈನ್ಯದ ತಾಯಿಯಾಗಿದ್ದೀನಿ—ಮುದುರಿ ಮುರಿದು ಹೋಗಿ. ಅದೇ ಕಾರಣ ಈ ಮಾರ್ಪಾಡಿಗೆ.

**ರಾಮಚಂದ್ರ :** ಛೆ, ನೀನು ಹಾಗೆಲ್ಲ ಅನ್ನಬಾರದು, ತಿಳಿಯಬಾರದು. ಮತ್ತೆ ನೀನು ಅದೇ ಹೆಮ್ಮೆಯ ಹುಡುಗಿ, ಮೋಹದ ಮಡದಿ, ಆದರೆ ಗೌರವದ ತಾಯಿ ಆಗುತ್ತೀ. ಧೈರ್ಯದಿಂದ ಇರು. ಕೊಂಚ ಸಹಿಸಿಕೊಂಡಿರು. ವಿಧಿಯಿಲ್ಲ, ನೋಡು.

**ತಾರಾ :** ಅದು ಹೇಗೆ ಸಹಿಸಿಕೊಂಡಿರುತ್ತೀನೋ ಏನೋ. ದೇವರೇ ಕನಿಕರದಿಂದ ಶಕ್ತಿ ಕೊಡಬೇಕು, ಅಷ್ಟೆ.

— ತೆರೆ —

# ಅಂಕ ೪

## ದೃಶ್ಯ ೧

[ಸ್ಥಳ: ಮೈಸೂರಿನಲ್ಲಿ ಗುಂಡಪ್ಪನ ಮನೆಯ ಅಡಿಗೆಯ ಮನೆ. ಲಕ್ಷಮ್ಮ ಅಡಿಗೆಗೆ ಅಣಿಮಾಡುತ್ತಿದ್ದಾಳೆ. ಗುಂಡಪ್ಪನು ಬಾಗಿಲಿನ ಪಕ್ಕದಲ್ಲಿ ಗೋಡೆಯನ್ನು ಒರಗಿಕೊಂಡು ಕುಳಿತಿರುತ್ತಾನೆ. ಕಚ್ಚೆ ಪಂಚೆ ಉಟ್ಟು ಟವಲೊಂದು ಹೊದ್ದಿದ್ದಾನೆ. ತೆಗೆದ ಬಾಗಿಲಿನಿಂದ ಆಗಾಗ ಇಣಿಕುತ್ತ ರಾಮಚಂದ್ರನ ತಲೆಯು ಕಾಣಿಸುತ್ತದೆ.

ಕಾಲ ಬೆಳಿಗ್ಗೆ ಏಳೂವರೆ ಗಂಟೆಯ ಸಮಯ.

ಲಕ್ಷಮ್ಮನು ಕಾಫಿಯನ್ನು ತಂದು ಗುಂಡಪ್ಪನ ಮುಂದೆ ಇಡುತ್ತಾಳೆ].

**ಗುಂಡಪ್ಪ :** ಮಗುಗೆ ಆಯಿತೋ ಕಾಫಿ?

**ಲಕ್ಷಮ್ಮ :** ಹುಂ. ಆಗಲೇ ಬಂದು ಕುಡಿದು ಇಲ್ಲಿವರೆಗೂ ಮಾತಾಡುತ್ತಾ ಕೂತಿದ್ದ.

**ಗುಂಡಪ್ಪ :** ಏನಂತೆ ಸಮಾಚಾರ ಮಾವನ ಮನೇಲಿ?

(ಲಕ್ಷಮ್ಮನು ಉತ್ತರ ಕೊಡದೆ ಸುಮ್ಮನೆ ಕೆಲಸದಲ್ಲಿ ತೊಡಗಿರುತ್ತಾಳೆ).

ಏನು ದೀಪಾವಳಿ ಬಲು ಜೋರಂತೊ?

**ಲಕ್ಷಮ್ಮ :** ಹುಂ. ಎಂದಿನಂತೆ.

**ಗುಂಡಪ್ಪ :** ಊಟ, ಉಪಚಾರ ಎಲ್ಲ ಸರಿಯಾಗಿ ಆಯಿತಂತೊ?

**ಲಕ್ಷ್ಮಮ್ಮ :** ಅದೆಲ್ಲ ಆಗದೇ ಇರುತ್ತೆ?

**ಗುಂಡಪ್ಪ :** ಅವನೇ ಅದೃಷ್ಟವಂತ, ಇನ್ನೂ ಒಂದು ಮಾವನ ಮನೆ ದೀಪಾವಳಿ ಸಿಕ್ಕಿದ ಹಾಗೆ ಆಯ್ತಲ್ಲ. ನಿಷೇಕ ಆಗಿಹೋಗಿದ್ದರೆ ಹೋದ ವರ್ಷಕ್ಕೇ ಹಬ್ಬದ ಔತಣ ಕೊನೆ ಆಗುತ್ತಾ ಇತ್ತು.

**ಲಕ್ಷಮ್ಮ :** ಏನು, ನೀವು ಬಂದದ್ದು ಒಂದೇ ಸಾರಿ ಅಂತ ನೆನೆಸಿಕೊಂಡು ಅಸೂಯೆಪಡುತ್ತಾ ಇದ್ದೀರೇನು?

**ಗುಂಡಪ್ಪ :** ಛೆ, ಹಾಗಲ್ಲ.

**ಲಕ್ಷ್ಮಮ್ಮ :** ಇನ್ನೇನು ಮತ್ತೆ ? ನಿಮ್ಮ ಮಾವನ ಮನೆಗೆ ಬಂದಾಗೆಲ್ಲ ನೀವು ಔತಣ ನೋಡಿಕೊಂಡೇ ಬಂದಿರೇನು ?

**ಗುಂಡಪ್ಪ :** ಇಲ್ಲ, ಹೆಂಡತೀನೂ.

**ಲಕ್ಷ್ಮಮ್ಮ :** ಅಂತು ಬಲವಂತದಿಂದ ಆದರೂ ಹೇಳಿದರಲ್ಲ.

**ಗುಂಡಪ್ಪ :** ಹಾಗಂದರೇನೇ, ಔತಣನೂ ಬೇಕೂ ಕಣೇ. ಬರಿ ಹೆಣ್ಣಿನ ಮುಖ ನೋಡೇ ಹೊಟ್ಟೆ ತುಂಬಿಕೊಳ್ಳೋದಿಕ್ಕೆ ಆಗುತ್ತಯೆ ?

**ಲಕ್ಷ್ಮಮ್ಮ :** ಓ, ಹಾಗೋ ? ನೀವೇನು ಹಾಗಿರಲಿಲ್ಲ ಜ್ಞಾಪಿಸಿಕೊಳ್ಳಿ. ಹಾಕಿದ್ದೆಲ್ಲ ಜೆಲ್ಲುತ್ತಾ ಇದ್ದಿರಿ, ತಂದಿದ್ದೆಲ್ಲ ಒಲ್ಲೆ ಅಂತ ಇದ್ದಿರಿ.

**ಗುಂಡಪ್ಪ :** ಹಾಗೇನು ? (ಕಾಫಿ ಮುಗಿಸಿ ಬಟ್ಟಲನ್ನು ಕೆಳಗಿಡುತ್ತಾನೆ).

**ಲಕ್ಷ್ಮಮ್ಮ :** ಇನ್ನೇನು ?

**ಗುಂಡಪ್ಪ :** ಅಳಿಯ ಬಹಳ ನಾಜೂಕು ಅನ್ನಿಸಿಕೊಳ್ಳೋಕೆ ಹಾಗೆ ಮಾಡುತ್ತಾ ಇದ್ದನೋ ಏನೋ ?

**ಲಕ್ಷ್ಮಮ್ಮ :** ಏನಿಲ್ಲ. ಆಮೇಲೆ ನಿಮ್ಮ ಮನೇಲೂ ಹಾಗೇ, ಹಿಡಿ ಅಷ್ಟು ತಿಂತಾ ಇದ್ದಿರಿ. ತಿಂಡಿ ತೀರ್ಥ ಅಂದರೆ ಅಷ್ಟಕ್ಕಷ್ಟೆ.

**ಗುಂಡಪ್ಪ :** ಊಹುಂ !

**ಲಕ್ಷ್ಮಮ್ಮ :** ಈಗ ಅಂದರೆ ವಯಸ್ಸಾಯಿತು. ಬಾಯಿ ಚಪಲ ಹೆಚ್ಚಾಗಿರಬಹುದು.

**ಗುಂಡಪ್ಪ :** ಆಗೇನೂ ಚಪಲ ಇರಲೇ ಇಲ್ಲವೆ ?

**ಲಕ್ಷ್ಮಮ್ಮ :** ಇತ್ತು ಬೇಕಾದಷ್ಟು. ಎಲ್ಲರಿಗೂ ಕಾಲ ಕಳೀತಾ ಕಳಿತಾ ಒಂದು ಚಪಲ ಹೋಗಿ ಇನ್ನೊಂದಕ್ಕೆ ಇಟ್ಟುಕೊಳ್ಳುತ್ತೆ. ಅದು ಇಲ್ಲದೆ ಇರೋ ಕಾಲ ಮಾತ್ರ ಇಲ್ಲ.

**ಗುಂಡಪ್ಪ :** ನಿಜ, ಬದುಕಿರೋದೇನು ಬರಿ ವೈರಾಗ್ಯಕ್ಕೆ ? ಒಂದಲ್ಲ ಒಂದು ತೃಪ್ತಿ ಹುಡುಕಿಕೋತ ಇರೋದಿಕ್ಕೇ, ಸಾಧಿಸಿಕೋತ ಇರೋದಿಕ್ಕೇ.

**ಲಕ್ಷ್ಮಮ್ಮ** : ಹುಂ. ಒಂದು ಆಸೆ ಮಾಸಿ ಹೋಗಿ ಹೋಗಿ ಇನ್ನೊಂದು ಇನ್ನೊಂದು ಹುಟ್ಟುತ್ತೆ.

**ಗುಂಡಪ್ಪ** : ಇಲ್ಲ ಒಂದೊಂದು ಹೊಸದಾಗಿ ಹುಟ್ಟಿದ ಹಾಗೂ ಹಳೇದೊಂದು ಮಾಸಿ ಹೋಗುತ್ತೊ ?

**ಲಕ್ಷ್ಮಮ್ಮ** : ಅದೂ ಸರಿಯೆ. ಹುಟ್ಟುತಲೆ ಹಾಲು, ತೊಟ್ಟಿಲು; ಹುಡುಗ ಆದಾಗ ತಿಂಡಿ, ಆಟ; ಇನ್ನು ಬೆಳೆದರೆ ಸ್ಕೂಲು, ಕಾಲೇಜು.

**ಗುಂಡಪ್ಪ** : ವಿದ್ಯ, ಬುದ್ಧಿ ಅಲ್ಲ ಅನ್ನು ?

**ಲಕ್ಷ್ಮಮ್ಮ** : ಅದು ಹೇಗೋ. ಸ್ಕೂಲು ಕಾಲೇಜು ಅಂತೂ ಕಾಣುತ್ತೊ.

**ಗುಂಡಪ್ಪ** : ಸರಿ, ಸರಿ.

**ಲಕ್ಷ್ಮಮ್ಮ** : ಆಮೇಲೆ ವಯಸ್ಸು ಬಂತು ಅಂದರೆ ಗಂಡ, ಹೆಂಡತಿ.

**ಗುಂಡಪ್ಪ** : ಸಂಸಾರ, ಗೃಹಕೃತ್ಯ ಅಲ್ಲ ?

**ಲಕ್ಷ್ಮಮ್ಮ** : ಅದು ಆಮೇಲೆ ಬಂದರೆ ಬರುತ್ತೆ, ಬಹಳ, ಬಹಳ ವರ್ಷ ಆದ ಮೇಲೆ.

**ಗುಂಡಪ್ಪ** : ಓ.

**ಲಕ್ಷ್ಮಮ್ಮ** : ಅದಾದ ಮೇಲೆ ಮಕ್ಕಳು, ಮರಿ.

**ಗುಂಡಪ್ಪ** : ಲಾಲನೆ ಪಾಲನೆ ಅಲ್ಲವೆ ?

**ಲಕ್ಷ್ಮಮ್ಮ** : ಸರಿ, ಅವೆಲ್ಲ ಎಷ್ಟು ಜನಕ್ಕೆ ಬರುತ್ತೆ ? ಮಕ್ಕಳು ಹೇಗೋ ಬೆಳೆಕೋತವೆ.

**ಗುಂಡಪ್ಪ** ಹುಂ.

**ಲಕ್ಷ್ಮಮ್ಮ** : ಮಕ್ಕಳಾದ ಮೇಲೆ ಅವಕ್ಕೆ ಮುಂಜಿ, ಮದುವೆ ಇದ್ದೇ ಇವೆಯಲ್ಲ.

**ಗುಂಡಪ್ಪ** : ಕರ್ಮ, ಆಶ್ರಮ ಅನ್ನು.

**ಲಕ್ಷಮ್ಮ:** ಚೆನ್ನಾಯಿತು. ಅವೆಲ್ಲ ಯಾರಿಗೆ ಬೇಕು ಈಗ. ಬರಿ ಎಲ್ಲಾರೂ ನೋಡಲಿ, ಹೊಗಳಲಿ ಅಂತ ಕುಣಿತಾರೆ ತಕ್ಕಥೈ ಅಂತ; ಇಲ್ಲವೆ ಸದ್ಯ ತೊಲಗಿ ಹೋಗಲಿ ಅಂತ ಹೇಗೋ ಮುಗಿಸುತ್ತಾರೆ ಗೋಳಾಡಿಕೊೀತ. ಕರ್ಮ ಕಂಡೋರು ಯಾರು ಇದರಲ್ಲಿಲ್ಲ? ಇನ್ನು ಆಶ್ರಮ ಈಶ್ರಮ ಅಂತ ಕೇಳತೀರ?

**ಗುಂಡಪ್ಪ:** ಎಲ್ಲ ಬರೀ ಶ್ರಮ ಅನ್ನು.

**ಲಕ್ಷಮ್ಮ:** ಅಷ್ಟಲ್ಲದೆ? ಹಿಂದಕ್ಕೇನೋ ನಾಲಕ್ಕು ಇದ್ದುವಂತೆ.

**ಗುಂಡಪ್ಪ:** ಹುಂ. ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ವಾನ ಪ್ರಸ್ಥಾಶ್ರಮ, ಸನ್ಯಾಸಾಶ್ರಮ.

**ಲಕ್ಷಮ್ಮ:** ನೋಡಿದಿರಾ ಈಗ ಇರೋವು ಅಂದರೆ, ಅವ್ಯವಸ್ಥೆ ಆಗಿ ಮೊದಲಿಂದು, ವಿಧಿಯಿಲ್ಲದೆ ಎರಡನೇದು, ಇನ್ನು ಮೂರೂ, ನಾಲ್ಕೂ ಅಂತೂ ಮಾಯವಾಗಿ ಯಾವುದೋ ಕಾಲ ಆಯ್ತು ಅಂತಾರೆ.

**ಗುಂಡಪ್ಪ:** ಅದೆಲ್ಲ ಋಷಿ ಕಾಲಕ್ಕೇ ಆಗಿಹೋಯ್ತು.

**ಲಕ್ಷಮ್ಮ:** ಹುಂ, ಈಗೆಲ್ಲ ಖುಷಿ ಕಾಲ.

**ಗುಂಡಪ್ಪ:** ನೀನು ಒಳ್ಳೆ ಚೆನ್ನಾಗಿ ಮಾತಾಡುತ್ತೀಯ

**ಲಕ್ಷಮ್ಮ:** ಮಾತಾಡೋಕೇನು, ಯಾರಿಗೆ ಬರೊಲ್ಲ? ಇವೆಲ್ಲ ಏನು ಯಾರಿಗೆ ಗೊತ್ತಿಲ್ಲ? ಮಾಡೋದು ಮಾತ್ರ ಇಲ್ಲ, ಅಷ್ಟೆ. ನಾನಾಡಿದು ನನಗೇ ಮಾಡೋಕೆ ಆಗೊಲ್ಲ.

**ಗುಂಡಪ್ಪ:** ಎಲ್ಲರಿಗೂ ಅಷ್ಟೆ. ವೇದಾಂತ ಬಡಿಯೋಕೇನು ಮೊಳುದ್ದ, ಮಾರುದ್ದ, ಎಡಕ್ಕೆ, ಬಲಕ್ಕೆ. ಹೋಗಲಿ ಮದುವೆ ಮುಂಜಿ ಆದಮೇಲೆ ಏನು ಅಂತಿ?

**ಲಕ್ಷಮ್ಮ:** ಇನ್ನೇನತ ಮಗ ಸೊಸೆ, ಮಗಳು ಅಳಿಯ, ಮೊಮ್ಮಕ್ಕಳು, ಮರಿಮಕ್ಕಳು ಅಂತ ಬೆಳೆದುಕೊಂಡು ಹೋಗುತ್ತೆ ಹನುಮಂತನ ಬಾಲದ ಹಾಗೆ, ಕೊನೇನೇ ಕಾಣದೆ, ಉಸಿರು ಇರೋವರೆಗೂ.

**ಗುಂಡಪ್ಪ** : ಊಹುಂ! ದೊಡ್ಡಪಟ್ಟೆ. ನಿನಗೇನು ಹಾಗಾದರೆ ಸೊಸೆ ಮೇಲೆ ಆಸೆ ಹೋಗಿದೆಯೇನು ಈಗ? ಮಗ ಅಂತು ಮನೇಲೇ ಇದ್ದಾನಲ್ಲ.

**ಲಕ್ಷ್ಮಮ್ಮ** : ಯಾವಾಗಿನಿಂದಲೋ ಇದೆ. ಆದರೆ ಅದೊಂದು ಇದೆಯಲ್ಲ ವಿಘ್ನ.

**ಗುಂಡಪ್ಪ** : ಹ! ಅವನ ಮಾವ ಏನು ಹೇಳಿದನಂತೆ— ಆ ಹಣದ ವಿಚಾರ?

**ಲಕ್ಷ್ಮಮ್ಮ** : ಸರಿ. ಏನೋ ಹೇಳಿದ ಹಾಗೆ. ಮಗುಗೆ ಗೊತ್ತಾಗುತ್ತೆಯೆ ಅದೆಲ್ಲ? ಅವನೇನು ಒಲ್ಲ ಪಾಪ! ಅದೆಲ್ಲ ವಿಚಾರಿಸೋ ಅಷ್ಟು ವಿವೇಚನೆ ಇದ್ದರೆ ಇನ್ನೇನು.

**ಗುಂಡಪ್ಪ** : ನಿಜ, ಅವನಿಗೇನು ವಯಸ್ಸು—ಅದನ್ನೆಲ್ಲ ಪ್ರಸ್ತಾಪಿಸೋ ಅಷ್ಟು. ಇನ್ನೂ ಕೇವಲ ಹುಡುಗ.

**ಲಕ್ಷ್ಮಮ್ಮ** : ಹಾಗೆ ಅಂತ ಹುಡುಗನ ಹಾಗಾದರೂ ಇದ್ದುಬಿಡುತಾನೇ. ಅದೂ ಇಲ್ಲ.

**ಗುಂಡಪ್ಪ** : ಅಂದರೆ ಏನು ಮಾಡಿದಾನೆ?

**ಲಕ್ಷ್ಮಮ್ಮ** : ಅಲ್ಲಿ ಏನೋ ಅವಿವೇಕ ನಡೆದು ಹೋಗಿದೆ.

**ಗುಂಡಪ್ಪ** · (ಆವೇಶದಿಂದ) ಏನಂದೆ? ಅವಿವೇಕವೆ? ನನ್ನ ಕೇಳದೇ ಹೇಳದೇ ಏನಾದರೂ ನಿಷೇಕ........

**ಲಕ್ಷ್ಮಮ್ಮ** : ಇಲ್ಲ, ತೀರ ಅಷ್ಟೊಂದಕ್ಕೆ ಹೋಗೋಕೆ ಅವನಿಗೆ ಧೈರ್ಯ ಇದೆಯೆ. ಅದರಲ್ಲೆಲ್ಲ ನಾವು ಹುಂ ಅಂದ ಹೊರತು........

**ಗುಂಡಪ್ಪ** : (ಸಮಾಧಾನಗೊಂಡು) ಮತ್ತೇನು ಇದು?

**ಲಕ್ಷ್ಮಮ್ಮ** : ಏನೋ ಆಗಿನ ಹುಡುಗತನದ ಚಪಲ. ಈಗ ದೊಡ್ಡ ಸಮಸ್ಯೆ ಆಗಿ ಕೂತಿದೆ.

**ಗುಂಡಪ್ಪ** : ಓಹೋ, ಏನು........

**ಲಕ್ಷ್ಮಮ್ಮ** : ಹುಂ. ಹುಡುಗಿಗೆ ಮೂರು ತಿಂಗಳಂತೆ.

**ಗುಂಡಪ್ಪ** : ನಿಜವಾಗಿ! ಏನು ಮಾಡಿಬಿಟ್ಟ! ಅವನೆಲ್ಲಿ ?

**ಲಕ್ಷಮ್ಮ** : ಎಲ್ಲೋ ಹೊರಗಿರಬೇಕು. ಅವನಿಗೆ ಹೇಳಿಕೊಳ್ಳೋಕೆ ಮಹಾ ನಾಚಿಕೆ. ನನ್ನ ಹತ್ತಿರ ಹೇಗೋ ಕಷ್ಟಪಟ್ಟು ಹೇಳಿಕೊಂಡ. ನಿಮಗೆ ನಾನೇ ಹೇಳಬೇಕು ಅಂದ.

**ಗುಂಡಪ್ಪ** : ಹುಂ! ಅವನಿಗೆ ಹೇಳುತ್ತಲೇ ಇರುತ್ತೀನಿ. ಅಪ್ಪ, ನನ್ನ ಕೇಳದೆ ಯಾವುದನ್ನೂ ಮಾಡಬೇಡ ಅಂತ. ಹಾಗೂ ಹೀಗೇನಾದರೂ ಮಾಡೇ ಬಿಡುತ್ತಾನೆ. ಈಗ ಏನು ಮಾಡೋದು ನೋಡು.

**ಲಕ್ಷಮ್ಮ** : ಏನು ಮಾಡೋದೂ ತೋರೋ ಹಾಗೇ ಇಲ್ಲ.

**ಗುಂಡಪ್ಪ** : ಮೊಟ್ಟಮೊದಲು ಅವಳು ಗರ್ಭಿಣಿ ಅಂತ ಇವನಿಗೆ ಚೆನ್ನಾಗಿ ತಿಳಿದಿದೆಯೋ ಅಂತ ಪ್ರಶ್ನೆ.

**ಲಕ್ಷಮ್ಮ** : ಅವಳೇ ಹೇಳಿಕೊಂಡಿರಬೇಕು.

**ಗುಂಡಪ್ಪ** : ಹೇಳಿಕೊಳ್ಳೋದಿಕ್ಕೇನು. ಹೀಗಾದರೂ ಕೆಲಸ ನಡೆದು ಹೋಗಲಿ ಅಂತ ಏನಾದರೂ ಉಪಾಯ ಹೂಡಿದಾರೋ ಏನೋ.

**ಲಕ್ಷಮ್ಮ** : ಇರಲಾರದು. ಹಾಗೆಲ್ಲ ಮಾಡೋದಿಕ್ಕೆ ಅವರಿಗೆ ಎಲ್ಲಿ ಎದೆ. ನಾಳೆ ಹುಡುಗಿ ಇಲ್ಲಿ ಬಾಳಬೇಡವೆ?

**ಗುಂಡಪ್ಪ**: ಇವನದ್ದೇ ಅವಿವೇಕ ಅಂತ ಇವನಿಗೆ ಚೆನ್ನಾಗಿ ಗೊತ್ತೋ ? ಹೇಗೆ?

**ಲಕ್ಷಮ್ಮ**: ಅವನೇ ಹಾಗೆ ಅಂತಾನೆ.

**ಗುಂಡಪ್ಪ** : ಹೇಳೋಕಿಲ್ಲ. ಹೇಳೋಕಿಲ್ಲ. ಇವನಿಗೆ ಏನೂ ತಿಳಿಯದು.

**ಲಕ್ಷಮ್ಮ** : ಛೆ, ಅವಳು ಅಂಥ ಹುಡುಗಿ ಅಲ್ಲ.

**ಗುಂಡಪ್ಪ**: ನಾನು ಹಾಗೆ ಅಂತ ಹೇಳಲಿಲ್ಲ. ಆದರೆ ಸಾಧ್ಯಾಸಾಧ್ಯ, ಹೇಳಿದೆ ಅಷ್ಟೆ

**ಲಕ್ಷಮ್ಮ** : ಉಹುಂ; ಅದರಲ್ಲಿ ಸಂಶಯ ಬೇಡ.

**ಗುಂಡಪ್ಪ :** ಇದು ಅವಳ ಅಪ್ಪನಿಗೆ ತಿಳಿದಿದೆಯಂತೇ ?

**ಲಕ್ಷ್ಮಮ್ಮ :** ಇಲ್ಲ ಅಂತ ಕಾಣುತ್ತೆ. ಅವನ್ನೇ ಕೇಳಬೇಕು.

**ಗುಂಡಪ್ಪ :** ಮಗು ! ಮಗು !

**ರಾಮಚಂದ್ರ :** ಇಲ್ಲಿ ಇದ್ದೀನಿ ( ರಾಮಚಂದ್ರನು ಬಾಗಿಲಿಗೆ ಬಂದು ತಲೆಯನ್ನು ಬಗ್ಗಿಸಿ ನಿಂತುಕೊಳ್ಳುತ್ತಾನೆ).

**ಗುಂಡಪ್ಪ :** ಓ, ಇಲ್ಲೇ ಇದ್ದೀಯ ? ಏನಪ್ಪ ಇದು ಸಮಾಚಾರ ? ನೋಡು, ನೀನೇ ಸ್ವತಂತ್ರ ವಹಿಸಿ ಎಷ್ಟು ಕಷ್ಟಕ್ಕೆ ತಂದು ಕೂರಿಸಿದ್ದೀಯೆ.
(ರಾಮಚಂದ್ರನು ಮೌನವಾಗಿರುತ್ತಾನೆ).
ನನ್ನ ಮಾತನ್ನು ನೆನಪಿನಲ್ಲಿಟ್ಟುಕೊಂಡಿರಪ್ಪ ಅಂದರೆ........ ನೋಡು ಈಗ ! ಹೇಗೆ ಮಾಡೋಣ ? ಹಣ ಬಿಟ್ಟು ಬಿಡೋದಿಕ್ಕೆ ಆಗುತ್ತೆಯೆ ?

**ರಾಮಚಂದ್ರ :** (ಮೆಲ್ಲಗೆ) ತಪ್ಪೇನೋ ಆಯ್ತು. ಈಗ ಏನಾದರೂ ಮಾಡಬೇಕು.

**ಗುಂಡಪ್ಪ :** ಸರಿ, ಏನು ಮಾಡೋದು ? ನಾನಂತು ಆ ಹಣ ಕಳೆದು ಕೊಳ್ಳೋಕೆ ಸಿದ್ಧವಾಗಿಲ್ಲ........ ಹುಂ. ಖಂಡಿತವಾಗಿ........(ಯೋಚಿಸಿ) ಅದು ಸರಿ. ನಿನ್ನ ಕೇಳಬೇಕು ಅಂದಿದ್ದು ಇದು; ಈ ಸಮಾಚಾರ ನಿನ್ನ ಮಾವನಿಗೆ ತಿಳಿದಿದೆಯೆ ?

**ರಾಮಚಂದ್ರ :** ಇಲ್ಲ.

**ಗುಂಡಪ್ಪ :** ಹುಂ. ಅದೇ ನಾನೂ ಯೋಚಿಸಿಕೊಂಡಿದ್ದು. ಗೊತ್ತಿದ್ದರೆ ಇಷ್ಟು ಹೊತ್ತಿಗಾಗಲೇ ಕುಯ್ಯೋ ಮರ್ರೋ ಅಂತ ಬರಬೇಕಾಗಿತ್ತು ಕಾಗದ— ಇಲ್ಲವೇ ಅವನೇ. (ಇನ್ನೂ ಯೋಚಿಸಿ)........ಅಥವ ತಂದೆ ಮಗಳು ಒಂದಾಗಿ ನಾಟಕ ಏನಾದರೂ ಹೂಡಿರಬಹುದೋ, ಇದೂ ನೋಡೋಣ ಮೊದಲಿಗೆ, ಆಮೇಲೆ ಹೇಗಿದ್ದರೂ ತೆರೋದು ಇದ್ದೇ ಇದೆ ಅಂತ ? ಸ್ಕೂಲು ಮೇಷ್ಟರ ಬುದ್ಧಿ ಏನು ಸಾಮಾನ್ಯವೆ ? ಶ್ಯಾನುಭೋಗರದ್ದು, ಗುಮಾಸ್ತರದ್ದು ಇದ್ದ ಹಾಗೆ ಪ್ರಳಯಾಂತಕ ಬುದ್ಧಿ.

**ರಾಮಚಂದ್ರ :** ಇಲ್ಲ. ಇನ್ನೂ ಯಾರಿಗೂ ಹೇಳಿಲ್ಲ, ಅವಳು.

**ಗುಂಡಪ್ಪ :** ಅಯ್ಯೋ ಬೆಳ್ಳಗೆ ಕಂಡದ್ದೆಲ್ಲ ಹಾಲು ಅನ್ನೋನು ನೀನು ನಿನಗೆ ಏನು ಅನುಭವ ಇನ್ನೂ ?

**ರಾಮಚಂದ್ರ :** ಅದೇನೋ ಖಂಡಿತ.

**ಗುಂಡಪ್ಪ :** ಹೇಗಾದರೂ ಇನ್ನೇನು ಸಧ್ಯದಲ್ಲೇ ಗೊತ್ತಾಗುತ್ತೆ, ಯಾವುದು ನಿಜ ಯಾವುದು ಸುಳ್ಳು ಅಂತ. ಅವನಿಗೂ ಗೊತ್ತಿದ್ದರೆ ಇನ್ನು ಸ್ವಲ್ಪ ದಿನ ನೋಡುತ್ತಾರೆ ನಮ್ಮ ಕಡೆಯಿಂದ ಸಮಾಧಾನ ಸೂಚನೆ ಬಂದೀತೇನೋ ಅಂತ. ಆಮೇಲೆ ಬರದೇ ಬರೀತಾನೆ. ಕಾಗದ ಬರದೇ ಇದ್ದರೆ ಅವನಿಗೆ ಇನ್ನೂ ಗೊತ್ತಿಲ್ಲ ಅಂತ. ಹಾಗಾದರೆ ಅವನಿಗೆ ಗೊತ್ತಾಗೋವರೆಗೂ ತಡೆದರೆ ಸರಿ, ತಾನೇ ಆಮೇಲೆ ಓಡಿ ಬಂದು ಹಣ ತಂದು ಮುಂದೆ ಬಡಿದು 'ದಮ್ಮಯ್ಯ ನಿಷೇಕ ಮಾಡಿಕೊಳ್ಳಿ' ಅಂತ ಕೈಕಾಲು ಕಟ್ಟಿಕೋತಾನೆ....... (ನಗುತ್ತ) ಹ್ಹ ! ಇದೂ ಒಂದು ಒಳ್ಳೇದೆ ಆಯ್ತು. ಇದೇಕೆ ಹೊಳೆದಿರಲಿಲ್ಲ........ ನನಗೆ ? ಈಗ ಮುನ್ನೂರು ಭದ್ರವಾದ ಹಾಗೇ.

**ರಾಮಚಂದ್ರ :** ಆದರೆ ಅವಳು ಕಡೇವರೆಗೂ ಹೇಳದೆಯೋ ಇದ್ದುಬಿಟ್ಟರೆ ?

**ಲಕ್ಷ್ಮಮ್ಮ :** ಅದು ಹೇಗಾದೀತು. ಅವಳು ತಡೆದರೂ ಅವಳ ಹೊಟ್ಟೆ ತಡೆದೀತೆ ? ನೀನು ಹೇಳೋದಂತೂ ಸರಿಯೆ.

**ಗುಂಡಪ್ಪ :** ಅದೇ........ ಅವನಿಗೆ ಅದೆಲ್ಲ ಹೇಗೆ ಗೊತ್ತಾಗಬೇಕು ? ಬರಿ ಹುಡುಗತನದ ಭಯ ಭ್ರಾಂತಿ ಅಷ್ಟೆ.

**ರಾಮಚಂದ್ರ :** ಅವಳು........ ಪಾಪ !........

**ಗುಂಡಪ್ಪ :** ಏನು ? ಪಾಪ, ಗೀಪ, ಅನುತಾಪ ಎಲ್ಲ ನಮಗೂ ಇದೆ ಮಗು. ಆದರೆ ಎಲ್ಲ ಪ್ರಶ್ನೆನೂ ಬರಿ ಭಾವನೆಯಿಂದಲೇ ನೋಡೋಕೆ ಆಗುತ್ತೆಯೆ ? ಬುದ್ಧಿಯಿಂದಲೂ ನೋಡಬೇಕಲ್ಲ. ಲೌಕಿಕವಾಗಿಯೂ ಪರೀಕ್ಷಿಸಬೇಕಲ್ಲ. ಎಳೆ ವಯಸ್ಸಿನಲ್ಲಿ ಬರಿ ಭಾವನೆಯೇ ಸಾಗುತ್ತೆ. ಆಮೇಲೆ ವಿವೇಕವೂ ಬೇಕಾಗುತ್ತೆ. ನಾವೂ ಮುತ್ತಾಳರಾಗಬಾರದು ಸುಮ್ಮಸುಮ್ಮನೆ.

**ರಾಮಚಂದ್ರ :** ಅವಳು........

**ಗುಂಡಪ್ಪ :** ಏನು ‘ ಅವಳು ಅವಳು ’ ಅಂತಲೇ ಇದ್ದೀಯಲ್ಲಪ್ಪ ?

**ಲಕ್ಷ್ಮಮ್ಮ :** ಅವನು ಅನ್ನೋದು ‘ ಹುಡುಗಿ ಕೊರಗಿ ಕೊರಗಿ ಕೃಶವಾಗಿ ಹೋಗಿದಾಳೆ ’ ಅಂತ.

**ರಾಮಚಂದ್ರ :** ಹುಂ.

**ಗುಂಡಪ್ಪ :** ಓ, ಹಾಗೇನು. ಕೊರಗೋದಿಕ್ಕೆ ಏನು ಕಾಸು ಕೊಡಬೇಕೆ ? ಬೇಕಾದಷ್ಟು ಕೊರಗಬಹುದು. ಅವಿವೇಕ ಮಾಡಿಕೊಳ್ಳೋರಿಗೆಲ್ಲ ಕೊರಗೋದೆ ಗತಿ. ಹಾಗೆ ಮಾಡಿಕೊಳ್ಳೋಕೆ ಮುಂಚೆಯೇ ಎಚ್ಚತ್ತುಕೊಳ್ಳಬೇಕು. ಆಮೇಲೆ ಗೋಳಾಡಿದರೆ ಏನು ಪ್ರಯೋಜನ ? ಆಗೋಕೆ ಬಿಟ್ಟದ್ದಕ್ಕೆ ಅನುಭವಿಸಲೂ ಬೇಕಪ್ಪ— ಸುಮ್ಮನೆ. ಅದಕ್ಕೆ ನಾನೇನು ಮಾಡಬೇಕು ಹೇಳು ?

**ರಾಮಚಂದ್ರ :** ಸ್ವಲ್ಪ ಮರುಕ........

**ಗುಂಡಪ್ಪ :** ಓ, ಮರುಕಕ್ಕೇನು ಮರುಕಕ್ಕೆ— ಮೊರಮೊರದಷ್ಟು ಸುರಿಯಬಹುದು. ಒಂದು ಸವೆಕಲು ಕಾಸು ಕಳೆದುಕೊಳ್ಳುವಾಗ ಅಲ್ಲವೆ ಕಾಣೋದು ಸತ್ವ. ನಾವು ಮಾರ್ವಾಡಿಗೆ ಕೊಡಬೇಕು, ಮರುಕದ ಮೇಲೆ ಉಪನ್ಯಾಸ. ಮಾರ್ವಾಡಿ ಮರುಕ ತೋರಿಸುತ್ತಾ ಹೋದರೆ ಮೂರು ದಿನಕ್ಕಾಗುತ್ತೆ, ಅವನಿಗೇ ಹಜಾಮತ್ತು— ನೀರಿಲ್ಲದೆ. ಇಷ್ಟಕ್ಕೂ ನಾವು ಮರುಗಿ ಅವಳಿಗೇನು ಮಾಡಿದ ಹಾಗಾಗುತ್ತೆ ? ನಾಲ್ಕುದಿನ ಹಿಂಚು, ಮುಂಚು ಅವರ ಅಪ್ಪನೇ ಸರಿ ಮಾಡುತ್ತಾನೆ. ಅಲ್ಲಿ ವರೆಗೆ ಸೈರಿಸಿಕೊಂಡಿರಬೇಕು— ಮಾಡಿಕೊಂಡ ತಪ್ಪಿಗೆ. ಇಲ್ಲದೆ ಹೋಗಿ ನಾವೇ ಅಯ್ಯೋ ಅಪ್ಪ, ಅಂದರೆ ಅವನು ತಪ್ಪಿಸಿಕೊಂಡೇ ಬಿಡುತ್ತಾನೆ— ಈ ಭಾರದಿಂದಲೂ. ಆಮೇಲೆ ನಮಗೆ ಸಿಕ್ಕೋದೇನು— ಲೊಟ್ಟೆ ? ಅವನಿಗೆ ನಾನು ಮರುಕ ಗಿರುಕ ತೋರಿಸೋದೂ ಇಲ್ಲ ಮಾಡೋದೂ ಇಲ್ಲ. ಉಹುಂ, ಮುನ್ನೂರು ರೂಪಾಯಿ ಪೀಕಿದ ಹೊರತು. ನಾನು ಅಷ್ಟೊಂದು ಸ್ಪಷ್ಟವಾಗಿ ಗಿಣಿಗೆ ಹೇಳಿದ ಹಾಗೆ ಹೇಳಿದೆನಲ್ಲ. ಅವನ ಬಾಯಲ್ಲಿ ಏನಾದರೂ ಹೊರಟಿತೆ ‘ ಆಗಲಿ ’ ಅಂತ ? ಏನೇನೋ ವಾಕ್ಚಾತುರ್ಯ ತೋರಿಸೋಕೇ ಹೋದನೇ ಹೊರತು ಒಪ್ಪಿಕೊಳ್ಳಲಿಲ್ಲವೋ. ಇವನಿಗೆ ಏಕೆ ಮರುಕ ? ಅವನೊಬ್ಬ ಶುದ್ಧ ಮೋಸಗಾರ-

ಮದುವೇಲೂ ಹೀಗೇ ಆಟ ಕಟ್ಟಿ ಜಯಿಸಿಕೊಂಡೆ ಅಂತ ಈಗಲೂ ಆಡಿವರೆ ನಾನಲ್ಲ ಬಿಡೋನು. (ಹೆಂಡತಿಯ ಕಡೆ ತಿರುಗಿ) ಏನಂದ್ರೆ ಮದುವೇಲಿ....

**ಲಕ್ಷ್ಮಮ್ಮ :** ಹುಂ, ಎಷ್ಟೆಷ್ಟೊಂದು ಮಾಡಿದರು. ಒಂದೊಂದೇ. ಹೆಜ್ಜೆ ಹೆಜ್ಜೆಗೂ ತೊಡಕೇ.

**ಗುಂಡಪ್ಪ :** ನಾವು ಮೊದಲೇ ಸ್ಪಷ್ಟವಾಗಿ ಹೇಗೆ ಷರತ್ತು ಮಾಡಿಕೊಂಡು ಏನೇನೂ ಅನುಮಾನ ಬರದ ಹಾಗೆ ಮಾಡಿಕೊಂಡಿದ್ದೆವು. ಪಟ್ಟಿ ಕೂಡ ಹಾಕಿಕೊಟ್ಟಿದ್ದೆವು. ಎಲ್ಲಕ್ಕೂ 'ಹೂ' ಗುಟ್ಟಿ ಹೇಗೆ ಹೇಗೆ ಮಾಡಿದರು

**ಲಕ್ಷ್ಮಮ್ಮ :** ಹಾಗೆ ಅಂತ ತಿಳಿದಿದ್ದರೆ ನಾವು ಮದುವೇಗೇ ಒಪ್ಪುತ್ತಾ ಇರಲಿಲ್ಲ. ಅಲ್ಲ ಮೊದಲೇ ಸಾರಿ ಸಾರಿ ಹೇಳಿದೆ ನಮ್ಮ ಮಗನ ಪಾದಗಳು ಅಗಲ. ಎರಡೂ ಹಿಡಿಸೋ ಅಂಥ ದೊಡ್ಡ ಬೆಳ್ಳಿ ತಟ್ಟೆ ಮಾಡಿಸಿ, ಕಾಲು ತೊಳೆಯೋಕೆ ಅಂತ. ಆದರೂ ಆ ಸಮಯದಲ್ಲಿ ತಂದಿಟ್ಟರು ಅಂಗೈ ಅಗಲದ್ದನ್ನ. ಪಾಪ, ಅವನ ಪಾದದ ಬೆರಳು ಕೊಂಚ ಭಾಗವೆಲ್ಲ ಹೊರಗೇ ಇತ್ತು. ನಾನು ಬಲವಾಗಿ ಪಟ್ಟು ಹಿಡೀದೇ ಇದ್ದರೆ ಅವರು ಆಗ ಅಂಗಡಿಯಿಂದ ಬೇರೆ ದೊಡ್ಡ ತಟ್ಟೆ ತರುತ್ತಾ ಇದ್ದರೆ? ಎಂದಿಗೂ ಇಲ್ಲ.

**ಗುಂಡಪ್ಪ :** ಚಿನ್ನದ ಉಂಗುರವೋ? ಒಂದು ಸವರನ್ನಿಗೆ ಕಡಿಮೆ ಆಗೋದಿಲ್ಲ ಅಂತ ಹೇಳಿದ್ದರೂ ಮುಕ್ಕಾಲಿಗೇ ಸರಿ ಮಾಡಿದನಲ್ಲ! ಇಲ್ಲಿಗೆ ಬಂದ ಮೇಲೆ ತೂಕ ಹಾಕಿಸಿದೆ—ಅದೇ ನನ್ನ ತಪ್ಪು. ಮೊದಲೇ ಆಗಿದ್ದರೆ ಮದುವೆ ಗಿದುವೆ ಎಲ್ಲ ಬಿಟ್ಟು, ಅವನ ಉಂಗುರ ಅವನ ಮುಖಕ್ಕೇ ಒಗೆದು ಹೊರಟು ಬಂದು ಬಿಡುತ್ತಿದ್ದೆವು. ಹುಂ. ಮೋಸವಾಯಿತು. ಹ! ಏನು ಮಾಡೋದು. ಆ ಮೇಲೆ ಕೇಳಿದರೆ ಏನು ಹೇಳಿದ ಅಂತೀಯೆ? ಆ ಕರ್ಚಿಗೂ ಹೆಚ್ಚಾಗೋ ಹಾಗೆ ಅದಕ್ಕೆ ಕೆಂಪಿನ ಹರಳು ಕಟ್ಟಿಸಿದ್ದನಂತೆ.

**ಲಕ್ಷ್ಮಮ್ಮ :** ಸವರನ್ನು ಪೂರ್ತಿ ಮಾಡಿಸಿ ಕಟ್ಟಿಸಿದ್ದರೆ ಇವರ ಮನೆ ಏನು ಬರೀದು ಆಗಿ ಹೋಗುತ್ತಾ ಇತ್ತೋ, ಏನೋ....ಇನ್ನೇನೂ ಬೇಡ ಆ ಮಗುಟ? ಜರತಾರಿ ಅಂಚಂದು ಇರಲಿ ಅಂತ ನಾಲಿಗೆ ಕಿತ್ತುಕೊಂಡಿದ್ದರೂ

ಅಂಗಡಿಲೇ ಇರಲಿಲ್ಲ ಅಂತ ರುದ್ರಾಕ್ಷಿ ಅಂಚಿಂದನ್ನು ತಂದರಲ್ಲ. ಶಿವಮೊಗ್ಗ ದಲ್ಲಿ ಇಲ್ಲದೆ ಇದ್ದರೆ ಬೆಂಗಳೂರಿಗೆ ಹೋಗಿ ತರೋದಿಕ್ಕೆ ಇವರಿಗೆ ಏನಾಗಿತ್ತು-ಬೇನೆ? ಊರಿನಲ್ಲೆಲ್ಲ ವಿಚಾರಿಸಿ 'ಇಲ್ಲ' ಅಂದ ಮೇಲೆ ನಾನೇನೋ ಸುಮ್ಮನಾದೆ, ಹೋಗಲಿ ಪಾಪ ಅಂತ. ಇನ್ನೊಂದು ದಿನ ಕಾಲ ಇದ್ದರೆ ಸುಮ್ಮನೆ ಇರುತ್ತ ಇದ್ದೆನೇ ನಾನು ?

**ಗುಂಡಪ್ಪ:** ಸರಿ, ನಾನು 'ವೆಸ್ಟೆಂಡು' ಕಂಪನಿಯು ಗಡಿಯಾರ 'ಸೆಕೆಂಡಸ್' ಚೆನ್ನಾದ್ದು ಅಂತ ಬರೆದು ಕೊಟ್ಟಿದ್ದೆ. ಆದರೆ ಯಾರೋ 'ಫೇವರ್ ಲೂಬ' ಕಂಪನಿಯ 'ಸ್ಯಾಂಡೊ' ಅದಕ್ಕಿಂತ ಒಳ್ಳೇದು ಅಂತ ಅಂದರು ಅಂತ ಆದನ್ನೇ ತಂದು ಬಿಟ್ಟಿದ್ದ. ಆದನ್ನೆಲ್ಲ ಹೇಗೆ ಸಹಿಸೋದು-ಗಂಡಿನೋರಾಗಿ? ಆ ಮೇಲೆ ನೋಡಿದೆಯೋ ಇಲ್ಲವೋ ಅದನ್ನು ಯಾರಿಗೋ ಮಾರಿ, ನಮಗೆ ಬೇಕಾದ್ದನ್ನು ತರಿಸಿಕೊಡೋಕೆ ಎಷ್ಟು ದಿನ ಹಿಡಿಯಿತು ಅಂತ ?

**ಲಕ್ಷಮ್ಮ:** ಅಬ್ಬಬ್ಬ, ಒಂದೊಂದು ಮಾಡಿದರೇ. ರಾಮ, ರಾಮ. ಮದುವೆ ಚೆನ್ನಾಗಿ ಮಾಡಿಕೊಡುತ್ತೀವಿ ಅಂತ ಮಾತುಕೊಟ್ಟು, ಅವರು ಮಾಡಿದ್ದೇನು ಕಡೆಗೆ? ಲಾಡು ಚಿರೋಟಿ ಜಿಲೇಬಿ ಕಂಡದ್ದು ಧಾರೆ ಒಂದು ದಿನ, ನಾಗೋಲಿ ಒಂದು ದಿನ, ಬೀಗರ ಔತನದ ಒಂದು ದಿನ. ಆಗಿ ಹೋಯ್ತು. ಬಾಕಿ ದಿನ ಎಲ್ಲ ಒಬ್ಬಟ್ಟು, ಆಂಬೊಡೆ' ಇಲ್ಲ ಕೇಸರಿ ಭಾತು ಬೋಂಡ, ಇನ್ನೇನೇನೋ ಕಳಪೇದೇ ಬರೀ. ಏನು ಅಂದರೆ, ಕಂಡ ಹಾಗೆ ಇದೆಯಲ್ಲ 'ರೇಷನಿಂಗು' ಅಂದು ಬಿಟ್ಟರೆ ಆಯ್ತು ಎಲ್ಲಾ ದಿಕ್ಕೂ ಅದೊಂದು ಹಾಳಾದ್ದು ಬಂದು ಸಹಾಯವಾಗಿದೆಯಲ್ಲ ಹೆಣ್ಣಿನೋರಿಗೆ ಈಗ.

**ಗುಂಡಪ್ಪ:** ಸರಿ, ಹಾಗೆ ಹೇಳುತ್ತ ಹೋದರೆ ಒಂದು ದಿನವೆಲ್ಲ ಹೇಳ ಬಹುದು. ಅದಕ್ಕೆ ಮೊದಲೇನು ಕೊನೆ ಏನು. ಒಂದೊಂದಲ್ಲ.

**ಲಕ್ಷಮ್ಮ:** ವರಪೂಜೆ ಲಾಗಾಯ್ತು ಮತ್ತೆ ರೈಲು ಹತ್ತುವ ವರೆಗೂ ಹಾಗೇ ಹೊಟ್ಟೆ ಸುಮ್ಮನೆ ಉರಿಸಿಬಿಟ್ಟರು. ಚಿಟಿಕಿಮುಳ್ಳು ಇಟ್ಟು ಆಡಿಸಿ ಬಿಟ್ಟರು. ಇಷ್ಟರ ಮೇಲೆ ನಾವೇ ಗಂಡಿನೋರು ಅಂತ........ ಹೋಗಲಿ ಆ

ಪಾಯಸದ ತಪ್ಪಲೆ–ಇನ್ನೇನೂ ಬೇಡ, ಒಂದೂವರೆ ಸೇರು ಅಕ್ಕಿಯಾದರೂ ಬೇಯೋದು ಬೇಡವೆ ? ಬರಿ ಗಂಡ ಹೆಂಡತಿನೇ ಕಡೆಯ ವರೆಗೂ ಸನ್ಯಾಸಿಗಳ ಹಾಗೆ ಇದ್ದು ಬಿಡುತ್ತಾರೇನು ? ಬಯಸೋದು ಮಾತ್ರ ಒಂದು ಹಿಂಡು ಮಕ್ಕಳು ಬೇಕು ಅಂತ ಕೊಡೋದು ಮಾತ್ರ ಮೂರುಪಾವು ಅಕ್ಕಿತಪ್ಪಲೆ. ಒಂದೊಂದರಲ್ಲಿ, ಹೇಳೋಕೆ ? ಸಣ್ಣದು ದೊಡ್ಡದು ಎಲ್ಲದರಲ್ಲೂ ಹಾಗೇ. ನಮ್ಮಂಥವರು ಆಗೋಹೊತ್ತಿಗೆ ಏನೋ ಪಾಪ ! ಅಂತ ಹಾಗೂ ಹೀಗೂ ತಿದ್ದೀ ತಿದ್ದೀ ನಮಗೆ ಬೆಕಾದ ಹಾಗೆ ಮಾಡಿಸಿಕೊಂಡು ಧಾರೆ ಅಂತ ಎರೆಸಿಕೊಂಡೆವು. ಇನ್ಯಾರಾದರೂ ಆಗಿದ್ದರೆ........ ಹುಂ, ಆದರ ಕತೆಯೇ ಬೇರೆ ಆಗುತ್ತಿತ್ತು.

**ಗುಂಡಪ್ಪ** : ಹೋಗಲಿ ಬಿಡು. ಎಷ್ಟೆಂದರೂ ಒಂದೆ. ಹೆಣ್ಣಿನೋರೆಲ್ಲ ಹಾಗೆ. ಆಗಿದ್ದು ಆಗಿಹೋಯ್ತಲ್ಲ. ಈಗಲಾದರೂ ಮೋಸ ಹೋಗೋ ಹಾಗಿಲ್ಲ. ಮುನ್ನೂರು ತೆತ್ತಹೊರತು ಬೇರೆ ಮಾತೇ ಇಲ್ಲ. ಅದು ಏನೇ ಆಗಲಿ.

**ರಾಮಚಂದ್ರ** : ಅವಳು ಬೇಕಾದರೆ ಅವಳ ಒಡವೆ ಮಾರಿ ಹಣ ತೀರಿಸಿಕೊಳ್ಳೋದಕ್ಕೆ ಒಪ್ಪುತ್ತಾಳೆ.

**ಗುಂಡಪ್ಪ** : ಓಹೋ. ಅವಳೇ ಆಗಬೇಕು ಅಲ್ಲವೆ– ಇದನ್ನು ಹೇಳೋಕೆ ? ಒಡವೆ ಯಾರದ್ದು ಈಗ ? ನಮ್ಮದು ಅಂತ ಅಷ್ಟು ಗೊತ್ತಿಲ್ಲವೆ ನಿನಗೆ ? ಇದೇನೋ ಎಡಗೈಯಿಂದ ತೆಗೆದು ಬಲಗೈಗೆ ಕೊಟ್ಟಹಾಗೆ ಆಯ್ತು. ಯಾರಿಗೆ ತಿಳಿಯೋದಿಲ್ಲ ? ಇದೆಲ್ಲ ನನ್ನ ಹತ್ತಿರ ನಡೆಯೋದಿಲ್ಲ. ಅವಳ ಅಪ್ಪ ಬೇರೆ ಹಣ ತಂದು ಬಡಿದರೆ ಸರಿ, ಇದೆಲ್ಲ ನೆಟ್ಟಗಾಗೋದು. ಇಲ್ಲದೆ ಮೊಂಡತನ ಮಾಡುತ್ತಾ ಇದ್ದರೆ ಮಾಡಲಿ. ನೋಡೋಣ ಕಡೇಲಿ ಯಾರು ಗೆಲ್ಲುತ್ತಾರೆ ಅಂತ.

**ರಾಮಚಂದ್ರ** : ಅವರ ತಪ್ಪಿಗೆ ಪಾಪ, ಅವಳು........

**ಗುಂಡಪ್ಪ** : ಹುಂ. ಮತ್ತೆ ಇನ್ನೇನು. ತಂದೆ ತಾಯಿಗಳ ತಪ್ಪಿಗೆ ಮಕ್ಕಳೂ ತುತ್ತೆ. ಅವರು ಸುಖಕ್ಕೆ ಹೇಗೋ ದುಃಖಕ್ಕೂ ಬಾಧ್ಯರೇ. ಅಡ್ಡಿಯೇನು ?

**ಲಕ್ಷ್ಮಮ್ಮ** : ಈಗ ಕಳ್ಳಬಸಿರಿನ ಮಗು ಇದ್ದರೆ ಒಳ್ಳೆಯೋರು ಯಾರ ಮನೇಲಿ ಸಾಕುತ್ತಾರೆ ನೋಡೋಣ ? ಹಾಗಂದರೆ ಅದು ಮಗು ತಪ್ಪೆ ? ಅಲ್ಲ.

**ಗುಂಡಪ್ಪ** : ಹಾಗೇ.

**ರಾಮಚಂದ್ರ** : ನಾನು ಅವಳಿಗೆ ಮಾತು ಕೊಟ್ಟು ಬಂದಿದೀನಿ.

**ಗುಂಡಪ್ಪ** : ಏನು ? ಯಾಕಪ್ಪ ಕೊಟ್ಟೆ ಮಾತು ? ನಮ್ಮನ್ನು ಕೇಳಿದೆಯೊ ಏನಾದರೂ. ನಾವೇನಾದರೂ ಒಪ್ಪಿದೆವೇ ? ಏನು ಮಾತು ಕೊಟ್ಟೆ ?

**ರಾಮಚಂದ್ರ** : ಏನೂ ಇಲ್ಲ. ಆದಷ್ಟು ಜಾಗ್ರತೆ.........

**ಗುಂಡಪ್ಪ** : ಅಷ್ಟೇ ತಾನೆ ? ಆದಷ್ಟು ಜಾಗ್ರತೆಯೇ ನಾವು ಮಾಡೋದೂ– ಹಣ ಬಂದ ಮೇಲೆ. ಆ ಮೇಲೆ ಯಾಕೆ ತಡ ?

**ರಾಮಚಂದ್ರ** : ಮತ್ತೆ ಏನು ಬರೆಯೋದು ?

**ಗುಂಡಪ್ಪ**: ಬರೆಯೋದು ಬೇರೆ ಬರೀಬೇಕೊ ? ಒಪ್ಪಂದ ಆಗಿದೆಯೋ?

**ರಾಮಚಂದ್ರ** : ಹೂಂ. ಇಲ್ಲವೆ ಇದ್ದರೆ ತುಂಬ ಅಧೈರ್ಯ ಪಟ್ಟುಕೋತಾಳೆ.

**ಗುಂಡಪ್ಪ** : ಇನ್ನೇನು. ಸುಮ್ಮನೆ ಧೈರ್ಯವಾಗಿರು. ಎಲ್ಲ ಸರಿಯಾಗುತ್ತೆ ಅಂತ ಅಷ್ಟೆ.

**ರಾಮಚಂದ್ರ** : ಅಷ್ಟೇನೆ ?

**ಗುಂಡಪ್ಪ**: ಇನ್ನೇನು ? ಹೆಚ್ಚೇನಾದರೂ ಮಾಡೋಕೆ ಹೋಗಬೇಡ– ಸ್ವತಂತ್ರಿಸಿ. ಅವಿವೇಕ ಆದೀತು. ಆಗಲೇ ಒಂದಾಗಿದೆ. ಮತ್ತೆ ಅವಿವೇಕದ ಮೇಲೆ ಅವಿವೇಕ ಆಗುತ್ತೆ. ( ಏಳುತ್ತಾನೆ )

— ತೆರೆ —

## ದೃಶ್ಯ ೨

[ಸ್ಥಳ : ಗುಂಡಪ್ಪನ ಮನೆಯ ವರಾಂಡ. ಕಾಲ : ಸಂಜೆ ಐದೂವರೆ ಗಂಟೆಯ ಸಮಯ. ಗುಂಡಪ್ಪನು ಪಕ್ಕದ ಗೋಡೆಯನ್ನೊರಗಿಕೊಂಡು ಕುಕ್ಕುರುಗಾಲಿನಲ್ಲಿ ಕುಳಿತುಕೊಂಡು ಪತ್ರಿಕೆಯನ್ನು ಓದುತ್ತಿರುತ್ತಾನೆ. ಕಚ್ಚೆ ಪಂಚೆ, ಶರಟು. ಚಾಳೀಸಿನ ಕನ್ನಡಕವನ್ನು ಹಾಕಿದ್ದಾನೆ. ದೃಶ್ಯವು ಮೊದಲಾಗಿ ಅರೆನಿಮಿಷವಾದಮೇಲೆ ಎದುರು ಬಾಗಿಲಿನಿಂದ ರಾಮಚಂದ್ರನು ಸದ್ದಿಲ್ಲದೆ ಮೆಲ್ಲಗೆ ಪ್ರವೇಶಿಸುತ್ತಾನೆ. ಪಟ್ಟೆ ಪಂಚೆ, ಶರಟು. ಬಲದ ಕೈಯಲ್ಲಿ ಒಂದು ಮಡಿಸಿದ ಕಾಗದವಿದೆ. ಪ್ರವೇಶಿಸಿದವನೆ ಅರ್ಧ ನಿಮಿಷ ಏನನ್ನೂ ಹೇಳದೆ ಗುಂಡಪ್ಪನನ್ನೇ ನೋಡುತ್ತ ನಿಂತಿದ್ದು, ಅನಂತರ ಗುಂಡಪ್ಪನ ಗಮನವನ್ನು ಎಳೆಯುವ ಉದ್ದಿಶ್ಯದಿಂದ ಮೃದುವಾಗಿ ಕೆಮ್ಮುತ್ತಾನೆ ]

**ಗುಂಡಪ್ಪ :** ( ಪತ್ರಿಕೆಯಿಂದ ದೃಷ್ಟಿಯನ್ನು ತೆಗೆಯದೆಯೆ ) ಹುಂ ! ಏನು ಸಮಾಚಾರ ?

**ರಾಮಚಂದ್ರ :** ಇವತ್ತು ಒಂದು....

**ಗುಂಡಪ್ಪ :** ಕಾಗದ ತಾನೆ ? ಸರಿ, ಇವತ್ತು ಸೋಮವಾರ. ಬರಲೇ ಬೇಕಲ್ಲ ವಾರವಾರಕ್ಕೆ. ಮಾಮೂಲು. ಇದೇನು ನಾಲ್ಕನೆದೋ ಐದನೆದೋ ? ಸರಿ, ಮಾಮೂಲು ಕಾಗದಕ್ಕೆ ಮಾಮೂಲು ಉತ್ತರ ಬರೆದು ಬಿಡು. ಅವಳು ' ನನಗೆ ಬಹಳ ಹೆದರಿಕೆ, ನನಗೆ ತುಂಬ ಕೊರಗು ' ಅಂತ ಬರಿತಾ ಇರಲಿ. ನೀನು ' ಧೈರ್ಯವಾಗಿರು, ಕೊರಗಬೇಡ ' ಅಂತ ಬರೀತಾ ಇರು. ಆಗಲೇ ಯಾವಾಗಲೋ ಹೇಳಿ ಬಿಟ್ಟೇದ್ದೀನಲ್ಲ ? ಹಾಗೇ ಬರೀತಾ ಇದ್ದೀಯಷ್ಟೆ ?

**ರಾಮಚಂದ್ರ :** ಹುಂ.

**ಗುಂಡಪ್ಪ ;** ಸರಿ, ಮತ್ತೆ. ಈ ಸಲವೂ ಹಾಗೇ ಬರೆಯೋದು. ಕೇಳೋದೇನು ? ( ರಾಮಚಂದ್ರನು ಮೌನದಿಂದಿರುವನು ) ಅಷ್ಟೇ ತಾನೆ ?

**ರಾಮಚಂದ್ರ :** ಈ ಸಲ....ಬಹಳ ಬರೆದಿದ್ದಾಳೆ.

**ಗುಂಡಪ್ಪ :** ಬಹಳಕ್ಕೇನು ಮುಟ್ಟಿಸಬೇಕು. ಒಂದೂವರಾಣೆ ಕರ್ಚು ಮಾಡಿದರೆ ಆಯ್ತು ಕಂತೆ ಕಂತೆ ಬರೆಯೋಕೆ ಆಗುತ್ತೆ. ( ಪತ್ರಿಕೆ ಯಿಂದ ಮುಖ ತೆಗೆದು ) ಈ ಪತ್ರಿಕೆಗಳಲ್ಲಿ ಸುಳ್ಳು ನೂರು ಸಲ ಬರೆದರೆ ನಿಜ ಆಗುತ್ತೆ ಅಂತ ಮಾಡುತ್ತಾರಲ್ಲ ಹಾಗೆ ನಿನ್ನ ಹೆಂಡತೀನೂ ಬೇಗ ಬೇಗ

ಹೆಚ್ಚು ಹೆಚ್ಚು ಹಳೇ ಪ್ರಕರಣವನ್ನೆ ಬರಿತಾ ಇದ್ದರೆ ನಮ್ಮ ಮನಸ್ಸು ಬದಲಾಯಿಸಿ ಹೊಸ ಪ್ರಕರಣ ಮೊದಲಾಗುತ್ತೆ ಅಂತ ತಿಳಿದಿದ್ದಾಳೋ ಏನೋ. ಹಾಗಿದ್ದರೆ ಅದು ಶುದ್ಧ ತಪ್ಪು. ನಾನು ಬೇರೆ 'ಜುಂ' ಅನ್ನೋದಿಲ್ಲ, ಮುನ್ನೂರನ್ನು ತಂದು ಹಾಕುಂದೆ ಬಡಿಯೋವರೆಗೆ. ಈ ಪದೇ ಪದೇ ಪತ್ರವ್ಯವಹಾರಕ್ಕೆ ನೀನೇ ಕಾರಣ ಅಂತ ನನ್ನ ಅಭಿಪ್ರಾಯ. ನೀನು ಅಷ್ಟಷ್ಟು ಬೇಗ ಉತ್ತರ ಬರೀದೆ ಇದ್ದರೆ ಅವಳು ಮತ್ತೂ ಮತ್ತೂ ಬರೆದು ಪೀಡಿಸುತ್ತಾ ಇರಲಿಲ್ಲ.

**ರಾಮಚಂದ್ರ :** ಅವಳು ಅಷ್ಟು ಕಷ್ಟದಲ್ಲಿದ್ದು ಬರೆದರೆ....

**ಗುಂಡಪ್ಪ :** ನನಗೂ ಅವಳು ಕಷ್ಟದಲ್ಲಿ ಇರೋದು ಗೊತ್ತು. ಆದರೆ ಹಾಗೆ ಅಂತ ನಾವು ಬರಬೇಕಾದ್ದೆಲ್ಲ ಕಳೆದುಕೊಂಡು 'ದುಡುಂ' ಅಂತ ಮಾಡಿಬಿಡೋದು ಹೇಗೆ ಸಾಧ್ಯ ಆಗುತ್ತೆ ? ಹೀಗೆಲ್ಲ ನಾವು ಅವಳ ಕಷ್ಟ ನೀಗೋಕೆ ಸುಮ್ಮನೆ ಹೋಗೋಕೆ ಆಗೋದಿಲ್ಲ. ಅವಳಿಗೆ ಔಷಧ ಅವಳ ಕೈಯಲ್ಲೇ ಇದೆ. ಅವಳ ಅಪ್ಪನಿಗೆ ಹೇಳಿ ಅವನಿಗೂ ಜ್ಞಾನ ಇದ್ದರೆ, ಹಣಕಾಸು ತೀರ್ಮಾನ ಆಗಿ ಎಲ್ಲ ಸರಿಹೋಗೇ ಹೋಗುತ್ತೆ.

**ರಾಮಚಂದ್ರ :** ಅವಳು ಹೇಗೆ ಹೇಳೋಕೆ ಆಗುತ್ತೆ ಪಾಪ !

**ಗುಂಡಪ್ಪ :** ಹೇಗೆ ಆಗುತ್ತೆ ! ನಿನಗೆ ಹೇಳಿದ ಹಾಗೇ. ಅದು ಹೇಗೆ ಆಯ್ತು ?

**ರಾಮಚಂದ್ರ :** ನಾನೂ....ಅಂದರೆ.

**ಗುಂಡಪ್ಪ :** ಅಂದರೇನು ?

**ರಾಮಚಂದ್ರ :** ನಾನಲ್ಲದೆ ಅವಳಿಗೆ ಇನ್ನು ಯಾರು ಗತಿ ?

**ಗುಂಡಪ್ಪ :** ಚೆನ್ನಾಗಿ ಹೇಳಿದೆ. ಈ ಹುಡುಗತನದಲ್ಲಿ ನೀನೇ ಗತಿಯೋ ಅವಳಿಗೆ ? ಆ ಪುಸ್ತಕದ ಭಾವನೆಯೆಲ್ಲ ಬಿಡು. ನಾವೂ ಮದುವೆ ಮಾಡಿಕೊಂಡು ಗಂಡ-ಹೆಂಡತಿ ಅಂತ ಸಂಸಾರ ಮಾಡಿಕೊಂಡು, ಮನೆ ತುಂಬ ಮಕ್ಕಳುಮರಿ ಹೆತ್ತುಕೊಂಡು, ಬೆಳೆಸಿಕೊಂಡು, ಸಮಾಜದಲ್ಲಿ ಮಾನವಾಗೇ ಬಾಳಿಕೊಂಡು ಬಂದಿದ್ದೀವಿ. ನಮ್ಮ ಮಾತು ಕೊಂಚ

ತಿಳಿದುಕೊ. ಹೆಣ್ಣಿಗೆ ತೌರಿನಕಡೆ ಜವಾಬ್ದಾರಿ ಎಂದಿಗೂ ತಪ್ಪೋದೇ ಇಲ್ಲ. ಕಡೆಗೆ ಗಂಡ ಸತ್ತ್ರೆ, ಕೆಟ್ರೆ ಅಂದರೂ ಹೆಣ್ಣುಮಕ್ಕಳು ಈಗಲೂ ತೌರು ಮನೇನೆ ಸೇರೋದು. ಹೆಣ್ಣಿನ ಬೇರು ತೌರಿನಲ್ಲೆ. ಕೀಳೋ ಹಾಗೆ ಇಲ್ಲ. ಯಾರನ್ನು ಬೇಕಾದರೂ ಕೇಳು—ನಮ್ಮ ಸಮಾಜದಲ್ಲಿ. ಈಗಂತೂ ಅವಳು—ಹುಡುಗಿ ಮನೇಲಿ ಇರೋವಾಗ ಆಗೋದು ಹೋಗದನ್ನೆಲ್ಲ ಅವರಪ್ಪ ಒಬ್ಬನೇ ಹೇಗೋ ಸರಿಪಡಿಸಿಕೋಬೇಕು. ನಮಗೇಕೆ ಅದೆಲ್ಲ. ಇದು ತಿಳಿದುಕೊಳ್ಳದೆ ಸುಮ್ಮನೆ ಏನೇನೋ ಯೋಚಿಸಿಕೊಂಡು ಭಾವಿಸಿಕೊಂಡು ಸುಮ್ಮನೆ ಭಾರ ಹೊರೋಕೆ ಆತುರಪಟ್ಟು ಭಂಗ ತಂದುಕೋ ಬೇಡ. ಅದು ಸರಿಯಲ್ಲ.

**ರಾಮಚಂದ್ರ** : ತಪ್ಪು ನನ್ನದು. ಆದಕ್ಕಾಗಿ.

**ಗುಂಡಪ್ಪ** : ಓ, ಇದೊಂದು ಭ್ರಾಂತಿ. ಇದೇನು ನೀನೇ ಹುಟ್ಟಿಸಿಕೊಂಡೆಯೊ. ಅಥವ ನಿನ್ನ ಹೆಂಡತಿ ಬರೆದು ಬರೆದು ನಿನ್ನ ತಲೆಗೆ ತುಂಬಿದಾಳೊ ? ತಪ್ಪು ನಿನ್ನದೇ ಹೇಗೆ? ಅವಳದ್ದೂ ಇದೆ. ಅವರ ಅಪ್ಪಂದೂ ಇದೆ. ನಾನು ಹೇಳಿದ್ದಕ್ಕೆ ಅವನು ಒಪ್ಪಿಕೊಂಡಿದ್ದರೆ ಇಲ್ಲಿಯವರೆಗೆ ಕೆಲಸ ಆಗೇ ಹೋಗುತ್ತಾ ಇತ್ತು. ಯಾವುದೂ ತಂಟೇಗೆ, ಗಮನಕ್ಕೇ ಬರುತ್ತಾ ಇರಲಿಲ್ಲ. ಹಾಗಿಲ್ಲದೆ ಇರೋದು ಅವನ ತಪ್ಪೆ—ಸಂಶಯ ಇಲ್ಲದೆ ತಪ್ಪು ನಮ್ಮದು ಅಂತ ಅಂದುಕೊಂಡಾಗಲೇ ಬರೋದು ಎಲ್ಲ ತಾಪತ್ರಯ. ಸುಮ್ಮನೆ ಇರು. ನಿನಗಿನ್ನೂ ತಿಳಿಯೋದಿಲ್ಲ ಈ ವಿಷಯ ಎಲ್ಲ.

**ರಾಮಚಂದ್ರ** : ಸುಮ್ಮನೆ ಇರೋದಿಕ್ಕೆ ಆಗೋ ಹಾಗಿಲ್ಲ....

**ಗುಂಡಪ್ಪ** : ಯಾಕೆ? ಯಾಕಪ್ಪ ?

**ರಾಮಚಂದ್ರ** : ಅವಳು ಬರೆದಿದ್ದಾಳೆ "ಈ ಸಲ ಏನಾದರೂ ಮಾಡದೇ ಇದ್ದರೆ...."

**ಗುಂಡಪ್ಪ** : ಹುಂ. ಏನಾಗಿ ಹೋಗುತ್ತಂತೆ ಮಹಾ ?

**ರಾಮಚಂದ್ರ** : "ಜೀವದಿಂದ ಉಳಿಲಾರೆ...." ಅಂತ....

**ಗುಂಡಪ್ಪ** : ಅಂತ ಬರೆದಿದ್ದಾಳೋ ?.... ಓಹೋ ಇದು ಬೇರೆ ಈಗ. ಹಿಂದಕ್ಕೆಲ್ಲ ಸಲಹೆ ಆಯ್ತು, ಪುಸಲಾಯಿಸಿ ಆಯ್ತು. ಆ ಮೇಲೆ

ಬೇಡಿದ್ದಾಯ್ತು, ಆ ಮೇಲೆ ಅಂಗಲಾಚಿದ್ದೂ ಆಯ್ತು, ಅದೂ ಆಗಿ 'ಬುದ್ಧಿ ಭ್ರಮಣೆ ಆದೀತು' ಅಂತ ಸಣ್ಣ ಬೆದರಿಕೆ ತೋರಿಸಿ ಆಯ್ತು, ಈಗ ಕಡೇ ಬೆದರಿಕೆಗೆ ಬಂದಿದೆಯೊ? ಊಹೂಂ. ಅವಳೂಏನು ಸಾಮಾನ್ಯ ಅಲ್ಲ ಅಂತ ಕಾಣುತ್ತೆ. ಒಂದಲ್ಲ ಒಂದು ಉಪಾಯ ಹೂಡಿ ನಿನ್ನ ಮರುಳಾಗಿಸಿ, ನಮ್ಮನ್ನೂ ಮೋಸಗೊಳಿಸಬೇಕೂ ಅಂತ ಮನಸ್ಸು ಮಾಡಿದ ಹಾಗಿದೆ. ಇದಕ್ಕೆಲ್ಲ ನೀನು ಬಿದ್ದರೇನು, ನಾನೇ ಜಗ್ಗೋನು.

**ರಾಮಚಂದ್ರ:** ಛೆ, ಅವಳು ಅಂಥವಳಲ್ಲ.

**ಗುಂಡಪ್ಪ:** ಸರಿ ಬಿಡು, ನಿನ್ನ ಹೆಂಡತಿ ಮೇಲೆ ನಿನಗೆ ಬಹಳ ಅಭಿಮಾನ. ಅದೇ ನಿನ್ನ ಕುರುಡು. ಅವಳ ವಿಚಾರ ಏನು ಕಂಡಿದ್ದೀಯೆ, ಇನ್ನೂ? ಗಿಣಿ ಗಿಣಿ ಹಾಗೆ ಮಣಿ ಮಣಿ ಮಾತಾಡೋದನ್ನ ಕೇಳಿರಬಹುದು. ಒಳಗೆ ಏನಿದೆಯೋ ನಿನಗೆ ಹೇಗೆ ಗೊತ್ತಾಗಬೇಕು? ಈಗ ಯಾರನ್ನೂ— ಕಡೆಗೆ ನಿನ್ನ ಬಲಗೈಯನ್ನೇ ನೀನು ನಂಬೋದಿಕ್ಕೆ ಆಗೋದಿಲ್ಲ. ಇನ್ನು ಅವರಿವರ ಮಾತೇಕೆ? ಈಗ ಹಳೇ ಕಾಲದಲ್ಲಿ ಇದ್ದ ಹಾಗೆ ಜನ ಕೆಟ್ಟೋರು ಅಂತ ತೋರಿಸಿಕೊಳ್ಳೋವರೆಗೂ ಒಳ್ಳೆಯೋರು ಅಂತಲೇ ಭಾವಿಸಿಕೊಂಡು ಇರೋದಲ್ಲ ಈ ಕಾಲದಲ್ಲಿ ಒಳ್ಳೆಯೋರು ಅಂತ ತೋರಿಸಿಕೊಳ್ಳೋವರೆಗೂ ಕೆಟ್ಟೋರು ಅಂತಲೇ ಭಾವಿಸಿಕೊಂಡಿರಬೇಕು ಗೊತ್ತೆ? ನಿನ್ನ ಹೆಂಡತಿ ಆದರೇನು ಹೆಚ್ಚಲ್ಲ

**ರಾಮಚಂದ್ರ:** ಇಲ್ಲ, ಅಪ್ಪ....

**ಗುಂಡಪ್ಪ:** ಹಾಗಾದರೆ ಅವಳು ಒಳ್ಳೆಯೋಳೇ ಆದರೆ ಈ ತರಹ ನಿನಗೆ ಬಲೆ ಬೀಸೋಕೆ ಹೇಗೆ ಸಾಧ್ಯ? ಇಲ್ಲದೆ ಅವಳಿಗೆ ಏನೇನೂ ತಿಳಿಯದೇ ಇದ್ದರೆ, ನನಗೆ ತೋರೋದು ಒಂದೇ. ಅವಳ ಅಪ್ಪ ಈ ತಂತ್ರ ನಡೆಸುತ್ತಾ ಇರಬಹುದು—ಹಿಂದೇ ಇದ್ದುಕೊಂಡು. ಹುಂ, ಹಾಗೇ ಅಂತ ಕಾಣುತ್ತೆ. ಅದಕ್ಕೆ ನೀನೂ, ನಾನು ಹೇಳಿದ ಹಾಗೆ ಮಾಡುತ್ತ ಬಾ. ಯಾರು ಸೋಲುತ್ತಾರೋ ತಿಳಿಯುತ್ತೆ.

**ರಾಮಚಂದ್ರ:** ಯಾರು ಯಾಕೆ ಹೇಳಬೇಕು? ಹಾಗೆಲ್ಲ ಯೋಚನೆ ಬರೋದು, ಬರೆಯೋದು ಅವಳಿಗೇ ಸ್ವಾಭಾವಿಕ ಅಲ್ಲವೆ— ಈ ಸ್ಥಿತಿಯಲ್ಲಿ?

**ಗುಂಡಪ್ಪ:** ಬಿಡೋ ಬಿಡೋ ಮಗು, ಈ ನಾಟಕ ಎಲ್ಲ ನನಗೆ ತಿಳೀದೆ? ಈ ಗಡ್ಡ ಸುಮ್ಮನೆ ಹಣ್ಣಾಗಿಲ್ಲ. ಈ ಸ್ಥಿತಿಯಲ್ಲಿ ಮನೆಯೋರಿಗೆ ತಿಳಿದು ಅವರು ನಮಗೆ ತಿಳಿಸಿ ಸಂಧಾನಕ್ಕೆ ಬರೋದೆ ಹೆಚ್ಚು ಸ್ವಾಭಾವಿಕ, ಗೊತ್ತೆ? ಇಲ್ಲದೆ ಇದ್ದರೆ ಅದರಲ್ಲಿ ಏನೋ ಕುತಂತ್ರ ಇದೆ ಅಂತ ಊಹಿಸ ಬೇಕು. ತಿಳೀತೆ? ನೀನಿನ್ನೂ ಯಾವ ಕನಸಿನಲ್ಲಿದ್ದೀಯೋ, ಬೆಳಗಾಗಿಲ್ಲ. ತೆಪ್ಪಗಿರು.

**ರಾಮಚಂದ್ರ:** ನಾವು ಹೀಗೆ ತಟಸ್ಥರಾಗಿ, ಅವಳೇನಾದರೂ...

**ಗುಂಡಪ್ಪ:** ಪ್ರಾಣ ಬಿಟ್ಟರೊ? ಬುದ್ಧಿ ಭ್ರಮಣೆ ಆಗುತ್ತೆ ಅಂತ ಬರೆದಾಗ ಹೇಗೆ ಸುಳ್ಳಾಯ್ತೋ ಈಗ ಸಾಯೋದೂ ಹಾಗೇ. ಅಯ್ಯೋ ಹುಚ್ಚು, ಆತ್ಮಹತ್ಯ ಮಾಡಿಕೊಳ್ಳೋರು ಎಲ್ಲಾದರೂ ಹೀಗೆ ನೋಟೀಸು ಕೊಡುತ್ತಾರೇನೋ? ಕೆರೆಗೆ ಮಗುಚಿಕೋತೀನಿ, ಬಾವಿಗೆ ಬೀಳುತ್ತೀನಿ ಅನ್ನೋ ಹೆಂಗಸರನ್ನೆಲ್ಲ ಲಕ್ಷ್ಯಕ್ಕೆ ತಂದುಕೊಂಡರೆ ಸಂಸಾರ ಮಾಡಿದ ಹಾಗೇ ಆಯ್ತು. ಅಂಥವರನ್ನು ಎಷ್ಟು ಜನ ನಾನು ನೋಡಿಲ್ಲ ಅಂತಿ— ಈ ವಯಸ್ಸಿಗೆ? ಹೆಂಗಸರು ಉದ್ವೇಗದಲ್ಲಿ ಏನೇನೋ ಹೇಳಿಬಿಡುತ್ತಾರೆ, ಒಂದೂ ಮಾಡೋಕೆ ಧೈರ್ಯವಿಲ್ಲ—ಅವರಿಗೆ. ನೀನು ಏನೊ ಮಾತಾಡು ತ್ತೀಯೆ. ಸಾಯೋ ಹಾಗೆ ಇದ್ದರೆ ಸತ್ತು ಬಿಡುತ್ತಾರೆ. ಹೇಳಿಕೊಳ್ಳೋ ದಿಲ್ಲ. ತಿಳಿಮುಕೊ. ಮಾಡೋದು ಮಾಡೋ ಹಾಗೇ ಹೇಳಿಬಿಟ್ಟರೆ ಈ ಬಾಳೇಕೆ ಚದುರಂಗದ ಹಾಗೆ ಆಗಬೇಕು? ಎಲ್ಲರಲ್ಲೂ ಕೃತ್ರಿಮ ಒಂದು ಇಲ್ಲದೇ ಇದ್ದರೆ ಕಲಿಯುಗದ ಕೆಡುಕು ಗೊಂದಲ ಎಲ್ಲ ಹೋಗಿ ಕೃತಯುಗದ ಕ್ಷೇಮವೇ ಬಂದೀತು. ಇದನ್ನು ಯೋಚಿಸಿಕೊಂಡರೆ ಇದೆಲ್ಲ ಒಂದು ಆಟ ಅಂತ ಸ್ಪಷ್ಟವಾಗುತ್ತ—ನನಗೆ. ನಿನಗೆ ಅನುಭವ ಇಲ್ಲದೆ, ಎಲ್ಲೂ ಇಲ್ಲದ ಭಯ ಅಷ್ಟೆ. ಅವಳಿಗಿಂತ ನಿನಗೇ ಜಾಸ್ತಿ.

**ರಾಮಚಂದ್ರ:** ಅಷ್ಟು ನಂಬಿಕೆ ಇಲ್ಲದೆ....

**ಗುಂಡಪ್ಪ:** ಹುಂ. ಪ್ರಪಂಚದಲ್ಲಿ ಸುಮ್ಮನೆ ನಂಬಿದರೆ ಚೊಂಬು ಸಿಗುತ್ತೆ—ಕೈಗೆ. ಎಲ್ಲಾನೂ ಪರೀಕ್ಷಿಸಿಯೇ ನೋಡಬೇಕು—ಆ ಕಡೆ ಈ ಕಡೆ ಎಲ್ಲಾ ಕಡೆಯಿಂದ. ಇಲ್ಲದೆ ಇದ್ದರೆ ಗೋವಿಂದ.

**ರಾಮಚಂದ್ರ** : ಅದೇನೋ ಸರಿ, ಆದರೆ....

**ಗುಂಡಪ್ಪ** : ಆದರೇನು ?

**ರಾಮಚಂದ್ರ** : ಈ ಸಂದರ್ಭದಲ್ಲಿ ಮಾತ್ರ........

**ಗುಂಡಪ್ಪ** : ಈ ಸಂದರ್ಭ ಅಂದರೇನು ? ಸಂದರ್ಭದ ತೂಕ, ಬಣ್ಣ ಎಲ್ಲ ನಮ್ಮ ಮನಸ್ಸಿನ ಭಾವನೆನೇ ಅನುಸರಿಸೋದು. ಭಾವನೆ ನಮ್ಮ ಸ್ಥಿತಿಗೆ ಸೇರಿಕೊಂಡಿರುತ್ತೆ. ಹಸಿವಿನಿಂದ ಸಾಯೋ ತಿರುಕನಿಗೆ ಒಂದು ತುತ್ತು ಅನ್ನವೇ ಪ್ರಾಣದ ಹಾಗೆ ಕಾಣುತ್ತೆ, ಕೋಟ್ಯಾಧೀಶ್ವರನಿಗೋ ರಾಶಿ ರಾಶಿ ಧಾನ್ಯ ಯಾಕೆ, ರಾಶಿ ರಾಶಿ ಹಣವೇ ಲೆಕ್ಕ ಇಲ್ಲ. ಹಾಗೇ ತಿಳಿವಳಿಕೆ ಇಲ್ಲದೆ ನಿನಗೆ ಇದೇ ಬೆಟ್ಟದ ಹಾಗೆ ಕಾಣುತ್ತೆ. ಅನುಭವ ಬಂದಿರೋ ನನಗೆ ಇದೂ ಸಾಮಾನ್ಯವೇ.

**ರಾಮಚಂದ್ರ** : ಹಾಗೆ ಕಠಿಣವಾಗಿ........

**ಗುಂಡಪ್ಪ** : ಮಗು, ಕಠಿಣವಾಗಿದ್ದರೇ ಕರಗಿಸಿಬಿಡುತ್ತಾರೆ ಜನ; ಇನ್ನು. ಬೆಣ್ಣೆ ಹಾಗಿದ್ದರಂತು ಹಾಗೇ ತಿಂದು ಹಾಕಿ ಬಿಡುತ್ತಾರೆ. ಕಾಠಿಣ್ಯವೇ ನಮಗೆ ಒಂದು ಕವಚ ಇದ್ದ ಹಾಗೆ, ನಾವು ಈಗ ಕಠಿಣ ವಾಗಿ ಇರದೇ ಇದ್ದರೆ ಅವರ ಒಟ್ಟು ಕತೆ ಹೊರಕ್ಕೆ ಬರೋದೆ ಇಲ್ಲ.

**ರಾಮಚಂದ್ರ** : ಅವಳು ಬರೆದಿರೋದು ನೋಡಿದರೆ....

**ಗುಂಡಪ್ಪ** : ನೋಡಿದರೇನು ?

**ರಾಮಚಂಪ್ರ** : ಎದೆ ಕರಗಿ ಕಣ್ಣೀರು ಬರುತ್ತೆ.

**ಗುಂಡಪ್ಪ** : ಹುಂ. ಓದಿದಾಳೆ, ಬರೀತಾಳೆ ಸಾಹಿತ್ಯ. ನಿನಗೆ ಅರ್ಥ ಆಗೋದೂ ಬರೀ ಸಾಹಿತ್ಯ, ನಾಟಕ ಅಷ್ಟೆ, ಬಾಳಲ್ಲ, ಅದರ ತಂತ್ರ ಅಲ್ಲ. ನಾನೂ ಕಣ್ಣೀರು ಬಿಡಬಲ್ಲೆ—ಕೋಡಿ ಹರಿಸಿ. ಆದರೆ ಅದ ರಲ್ಲೆ ಕೊಚ್ಚಿಕೊಂಡು ಹೋಗದ ಹಾಗೆ ನಿಂತುಕೋ ಬೇಕಾದರೆ ವಿವೇ ಕದ ಕಾಲು ಭದ್ರವಾಗಿರಬೇಕು. ಹಾಗಿಲ್ಲದೆ ಹೋದರೂ ಅನುಭವದ ಕೋಲು ಕೊಟ್ಟಾಗಾದರೂ ಊರಿ ಹಿಡಿದುಕೋಬೇಕು. ಸುಮ್ಮನೆ ತತ್ತರಿಸಿ ಕೂಗಿ ಕೊಂಡರೆ ಏನು ಪ್ರಯೋಜನ ? ಇಗೊ, ನೀನು ಮಾಡೋದು

ಹಾಗೆ ಆಗಿದೆ. ನೀನು ಹೇಳಿ ಹೇಳಿದ್ದಕ್ಕೆಲ್ಲ ನಾನು ಸಮಾಧಾನ ಹೇಳುತ್ತ ಇದ್ದರೂ ಮತ್ತೆ ಮತ್ತೆ ಏನಾದರೂ ಹೇಳುತ್ತಲೇ ಇದ್ದೀಯೆ.

**ರಾಮಚಂದ್ರ:** ಕೋಪಿಸಿಕೋ ಬೇಡ, ಅಪ್ಪ. ನನ್ನ ಕರ್ತವ್ಯ....

**ಗುಂಡಪ್ಪ:** (ಬೇಸರದಿಂದ) ನಿನ್ನ ಕರ್ತವ್ಯ ನನಗೆ ವಿಧೇಯನಾಗಿ ನಡೆದು ಕೊಳ್ಳೋದು.

**ರಾಮಚಂದ್ರ:** ನಿಜ. ಆದರೆ........

**ಗುಂಡಪ್ಪ:** ಆದರೆ ಗೀದರೆ ಏನು ಇಲ್ಲ. ಅಷ್ಟೆ.

**ರಾಮಚಂದ್ರ:** (ಪೆಚ್ಚಾಗಿ) ಹಾಗಾದರೆ........

**ಗುಂಡಪ್ಪ:** ಹಾಗಾದರೆ ಏನು ?

**ರಾಮಚಂದ್ರ:** ಏನು ಬರೆಯೋದು....ಅವಳಿಗೆ

**ಗುಂಡಪ್ಪ:** ಬರೀಲೇ ಬೇಕಾದರೆ, " ಇನ್ನೇನಾದರೂ ಮಾಡಿಕೊಂಡು ಹೆಚ್ಚು ಅವಿವೇಕಕ್ಕೆ ದಾರಿ ಕೊಡಬೇಡ. ಆದಷ್ಟು ಬೇಗ ನಿಮ್ಮ ತಂದೆಯವರಿಗೆ ನಿನ್ನ ವಿಷಯ ತಿಳಿಸೋದು ಒಳ್ಳೇದು ಆಗಲೇ ಈ ಗೊಂದಲ ಪರಿಹಾರ ಆಗಬೇಕಾದರೆ........ "

**ರಾಮಚಂದ್ರ:** ಅಷ್ಟೊಂದು ನಾಚಿಕೆ.........ಅವಳಿಗೆ.

**ಗುಂಡಪ್ಪ:** ಬಿಡೋ ಕಾಲ ಬಂದಾಗ ಎಲ್ಲರೂ ನಾಚಿಕೆ ಗೀಚಿಕೆ ಎಲ್ಲ ಬಿಡಬೇಕು, ಬಿಟ್ಟೂ ಬಿಡುತ್ತಾರೆ. ನೀನು ಬರೆಯೋದು ಬರಿ. ಮುಂದೆ ಅವಳ ಪಾಡು. ನಾವಂತೂ ಈಗಲೇ ಮುಂದಕ್ಕೆ ಹೋಗೋಕೆ ಸಾಧ್ಯವೇ ಇಲ್ಲ. ಅದು ಖಂಡಿತ. ಆಗಲೇ ತೀರ್ಮಾನ ಆಗಿ ಹೋಗಿದೆ. ( ಏಳುತ್ತಾನೆ )

— ತೆರೆ —

# ದೃಶ್ಯ ೩

[ಸ್ಥಳ: ಗುಂಡಪ್ಪನ ಮನೆಯ ಹಜಾರ. ಕಾಲ: ರಾತ್ರಿ ಎಂಟು ಗಂಟೆಯ ಸಮಯ. ವಿದ್ಯುಚ್ಛಕ್ತಿಯ ದೀಪ ಉರಿಯುತ್ತಿದೆ. ಗುಂಡಪ್ಪನೂ ಲಕ್ಷಮ್ಮನೂ ಇದಿರು ಬದಿರು ಗೋಡೆಯನ್ನು ಒರಗಿಕೊಂಡು ಕುಳಿತಿರುತ್ತಾರೆ. ಗುಂಡಪ್ಪನ ಕೈಯಲ್ಲಿ ಒಂದು 'ಟೆಲಿಗ್ರಾಂ' ಇದೆ. ಲಕ್ಷಮ್ಮನು ಸೀರೆಯ ಸೆರಗಿನಿಂದ ಕಣ್ಣನ್ನೊರಸಿಕೊಳ್ಳುತ್ತಿರುತ್ತಾಳೆ.]

**ಗುಂಡಪ್ಪ:** ಸುಮ್ಮನೆ ಯಾಕೆ ಅಳುತ್ತೀಯ? ಸುಮ್ಮನೆ ಇರು. ಅವನು ಪೇಟೆಯಿಂದ ಬರೋಹೊತ್ತೂ ಆಯ್ತು.

**ಲಕ್ಷಮ್ಮ:** ಪಾಪ, ಮಗುಗೆ ಇದು ಒಂದು ದೊಡ್ಡ ಪೆಟ್ಟು. ಹೇಗೆ ತಡೀತಾನೋ ಏನೊ?

**ಗುಂಡಪ್ಪ:** ತಡಿದೇ ಏನು, ಅವನು ಗಂಡಸಲ್ಲವೆ? ಹೇಳೋ ತರಹದಲ್ಲಿ ಹೇಳಿದರೆ ಎಲ್ಲ ದಾರಿಗೆ ಬರುತ್ತಾನೆ. ನಾನು ಅವನನ್ನು ಸರಿಯಾಗಿ ಮಾಡಬಲ್ಲೆ. ನಾನು ಹೇಳಿದರೆ ಎಲ್ಲ ಕೇಳುತ್ತಾನೆ. ನೋಡುತ್ತಾ ಇರು.

**ಲಕ್ಷಮ್ಮ:** ಏನಾದರೂ........

**ಗುಂಡಪ್ಪ:** ಹುಶ್, ಅವನು ಬರೋ ಸದ್ದು! ('ಟೆಲಿಗ್ರಾಮ'ನ್ನು ಮಡಿಸಿಕೊಳ್ಳುತ್ತಾನೆ. ಲಕ್ಷಮ್ಮನು ಬೇಗ ಬೇಗ ಕಣ್ಣನ್ನು ಒರೆಸಿಕೊಳ್ಳುತ್ತಾಳೆ. ಅಷ್ಟರಲ್ಲೆ ರಾಮಚಂದ್ರನು ಪ್ರವೇಶಿಸುತ್ತಾನೆ. ದಟ್ಟಿಪಂಚೆ, ಷರಟು. ಸಾಮಾನು ತುಂಬಿದ ಕೈಚೀಲವನ್ನು ಹಿಡಿದಿದ್ದಾನೆ.)

**ರಾಮಚಂದ್ರ:** (ದಡಬಡದಿಂದ ಪ್ರವೇಶಿಸುತ್ತಲೇ ಉತ್ಸಾಹದಿಂದ) ಅಮ್ಮ! ಅಮ್ಮ!

**ಲಕ್ಷಮ್ಮ:** (ಗಂಭೀರವಾಗಿ) ಏನು ಮಗು?

**ರಾಮಚಂದ್ರ:** ಏನು ಅದೃಷ್ಟ ಅಂತಿ ಇವತ್ತು! ನನ್ನ ಬೊಂಬಾಯಿನ ಸ್ನೇಹಿತ ಊರಿಗೆ ಬಂದಿದ್ದಾನೆ ಅಂತ ನೋಡೋಕೆ ಹೋಗಿದ್ದೆ. ದೊಡ್ಡ ಕೆಲಸದಲ್ಲಿ ಇದ್ದಾನಂತೆ. ಕೈತುಂಬ ಸಂಬಳವಂತೆ. ಎಷ್ಟು ವಿಶ್ವಾಸ

ವಾಗಿ ಕಂಡ ಅಂತಿ ? ಅವನೇ ಈ 'ಮೊಸಂಬಿ'— ಅಲ್ಲಿ ಕಿತ್ತಳೆಹಣ್ಣು— ಚೀಲಕ್ಕೆ ತುಂಬಿಕೊಟ್ಟಿದ್ದಾನೆ ನೋಡು.

**ಲಕ್ಷ್ಮಮ್ಮ :** ಹೂಂ.

**ರಾಮಚಂದ್ರ :** ಇನ್ನೂ ಒಂದು ವಿಶೇಷ. ದೊಡ್ಡ ವಿಶೇಷ! ನೀವು ಕೇಳಿದರೆ ಏನು ಅಂತೀರೊ ? (ಕೊಂಚ ತಡೆದು) ಹಾಗೇ ಮಾತಾಡುತ್ತಾ ನನ್ನ ಹೆಂಡತಿ ಮಕ್ಕಳ ವಿಚಾರ ಕೇಳಿದ....... ಅವನಿಗೆ ಆಗಲೇ ಒಂದು ಗಂಡು ಮಗು ಇದೆ. ಎಷ್ಟು ಚೆನ್ನಾಗಿದೆ ಅಂತಿ ? ಅವನು ಕೇಳಿದ ಮೇಲೆ ನಾನು ಇಲ್ಲಿ ಕತೆಯೆಲ್ಲ ಹೇಳಲೇಬೇಕಾಯ್ತು. ನನಗೇನು ಮುಚ್ಚುಮರೆ ಅವನಲ್ಲಿ. ಎಲ್ಲ ಹೇಳಿದೆ. ಆದನ್ನು ಕೇಳಿ ಅವನು– ನೋಡಮ್ಮ ಸ್ನೇಹ ಅಂದರೆ!— "ಲೋ, ರಾಮು, ನೀನು ಹೀಗೆ ಕಷ್ಟಪಡುತ್ತ ಇದ್ದೀಯ ಅಂತ ನನಗೆ ಗೊತ್ತಿರಲಿಲ್ಲ. ಬರೀಬಾರದಾಗಿತ್ತೆ ಆಗಲೇ ? ನನ್ನ ಕೈಯಲ್ಲಿ ಆದದ್ದು ಮಾಡುತ್ತಾ ಇದ್ದೆ" ಅಂದ. ನನಗೆ ಹೇಗೆ ಗೊತ್ತಾಗಬೇಕು, ಅವನು ಯಾವ ಸಂದರ್ಭದಲ್ಲಿ ಇದ್ದಾನೋ, ಹೇಗೆ ಅಂತ ? ಅಥವ ಅವನ ಸ್ನೇಹ ಅಷ್ಟೊಂದು ಆಳವಾಗಿದೆ ಅಂತ ?.... ಹುಂ. ಕೇಳು, ಕೂಡಲೇ ಹೇಳಿಬಿಟ್ಟ, ಅಮ್ಮ. "ರಾಮು, ದೇವರು ನನಗೆ ಒಳ್ಳೇದು ಮಾಡಿದ್ದಾನೆ. ಧೈರ್ಯವಾಗಿ ಅಲ್ಲಿಗೆ ನುಗ್ಗಿದ್ದು ಸಾರ್ಥಕ ಆಯ್ತು. ಕರ್ಚು ಕಳೆದು ಕೊಂಚ ಕೂಡಿ ಹಾಕೋಕು ಸಾಧ್ಯವಾಗಿದೆ. ಆಷ್ಟೇನು ಇಲ್ಲ. ಆದರೆ ನಿನಗೆ ಸಾಕಾದಷ್ಟು ಕೊಟ್ಟಿರ ಬಲ್ಲೆ. ನಿದಾನವಾಗಿ ವಾಪಸು ಕೊಡುವೆಯಂತೆ" ಅಂದ. ಹುಂ. ಹಾಗೇ ಸರಾಗವಾಗಿ. ಆ ಮೇಲೆ "ಹೋಗು ತಕ್ಷಣ ಹೆಂಡತಿ ಕರೆದುಕೊಂಡು ಬಂದುಬಿಡು. ಈ ಸ್ಥಿತಿಯಲ್ಲಿ ಅಲ್ಲಿ ಹಾಗೆ ಬಿಟ್ಟಿರೋದು ಸರಿಯಾದ್ದಲ್ಲ ಅಂದ. ನೋಡಮ್ಮ ಅವನ ಸ್ನೇಹಾನ, ಅವನ ಗುಣಾನ? ಇಂಥ ಸ್ನೇಹಿತರು ಇರೋದು ಅದೃಷ್ಟ ಅಲ್ಲವೆ ? ಹಾಗೆ ಬರಿಮಾತು ಅಂತಿಯಾ ? ಬರೋವಾಗ ಒಳಗೆ ಹೋಗಿ ಪೆಟ್ಟಿಗೆ ತೆಗೆದು (ಜೇಬಿನಿಂದ ನೋಟುಗಳನ್ನು ತೆಗೆದು) ಕೊಟ್ಟೇಬಿಟ್ಟ ಐನೂರು! ನನಗೆ ಹೇಗೆ ಆಯ್ತು ಅಂತಿ ? ಮೈ ಎಲ್ಲ ಬೆವರಿಬಿಟ್ಟಿತು– ಆನಂದದಿಂದ. ಆದರೂ ಅವನು ಹೇಳಿದ್ದೇ ಸಾಕು ಅಂದು ತಗೋಬಾರದು ಅಂತ 'ನಿನಗೆ ತೊಂದರೆ ಆಗ.

ಬಹುದು ಇರಲಿ. ಇಷ್ಟಕ್ಕೂ ನಾನು ಯಾವಾಗ ಕೊಡುತ್ತೀನೋ ಏನೋ' ಅಂದೆ. ಅವನು "ಪರವಾಯಿಲ್ಲ. ತಿಂಗಳು ತಿಂಗಳಿಗೆ ನಿನಗೆ ಸಾಧ್ಯವಾದಷ್ಟು ಕಳುಹಿಸಿ ತೀರಿಸು. ನಿನಗೆ ತೀರ ಅಗತ್ಯವಾಗಿದೆ. ನಿಮ್ಮ ತಂದೆ ಬೇರೆ ಮನಸ್ಸು ಮಾಡಿದ್ದರೆ, ಅದೊಂದು ಮಾತು ಆಗುತ್ತಾ ಇತ್ತು" ಅಂದು ಒತ್ತಾಯವೇ ಮಾಡಿಕೊಟ್ಟ. ಎಂಥವನಮ್ಮ ಅವನು! ತಿಂಗಳಿಗೆ ಹತ್ತೋ ಹದಿನೈದೋ ಕಳುಹಿಸೋದು........ಅಲ್ಲವೇನಪ್ಪ?

**ಗುಂಡಪ್ಪ:** (ಗಂಭೀರವಾಗಿ) ಹುಂ.

**ರಾಮಚಂದ್ರ:** (ಲಕ್ಷಮ್ಮನನ್ನು ನೋಡುತ್ತ) ಇನ್ನು ಸಧ್ಯ ಅವಳನ್ನು ಕರೆದುಕೊಂಡು ಬರಬಹುದು ಬೇಗ– (ಗುಂಡಪ್ಪನನ್ನು ನೋಡುತ್ತ) ಆ ಮಾರ್ವಾಡಿಗೆ ಅತ್ತಕಡೆ ಹಣಬಿಸಾಕಿ– ನನ್ನ ಹತ್ತಿರ ನೂರು ಇದ್ದೇ ಇದೆ. ಮಾವನೋರು ಕೊಡಲಿ ಬಿಡಲಿ. ಈಗೇನು....ಅಲ್ಲವೆ? ಪಾಪ, ಅವಳು ಎಷ್ಟು ಒದ್ದುಕೊಂಡಿದ್ದಾಳೋ. ನೊಂದುಕೊಂಡಿದ್ದಾಳೋ ನನ್ನ ಕಡೇ ಕಾಗದ ನೋಡಿ. ಈ ಶುಭ ಸಮಾಚಾರ ತಿಳಿಸಿ ಈಗಲೇ ಒಂದು ಕಾಗದ ಅವಳಿಗೆ ಬರೆದುಬಿಡಬೇಕು. ಅಲ್ಲವೇನಮ್ಮ?

(ಲಕ್ಷಮ್ಮ ತಡೆಯಲಾಗದೆ ಕಣ್ಣೀರನ್ನು ಹರಿಯಿಸುತ್ತಾಳೆ)

**ರಾಮಚಂದ್ರ:** ಇದೇಕಮ್ಮ, ಅಳುತ್ತಾ ಇದಿ? ನಿನಗೂ ಅಷ್ಟು ಸಂತೋಷವೇ? ನನಗೂ ಕಣ್ಣಲ್ಲಿ ನೀರು ಬರೋ ಹಾಗೆ ಆಯ್ತು ಅವನ ಇದಿರಿನಲ್ಲಿ. ಹೇಗೋ ತಡೆದುಕೊಂಡೆ. ಆದರೆ ದಾರಿಯಲ್ಲಿ ಹರಿದೇ ಬಿಟ್ಟಿತು. ಹ! ಹ! (ನಗುತ್ತ ತಾನೂ ಕಣ್ಣನ್ನು ಒರೆಸಿಕೊಳ್ಳುತ್ತಾನೆ) ನಾಳೆ ಶಿವಮೊಗ್ಗಕ್ಕೆ ಹೊರಡಬಹುದು ಅಲ್ಲವೆ— ರಾತ್ರಿ ರೈಲಿಗೆ? (ಗುಂಡಪ್ಪನು 'ಇಲ್ಲ' ಅನ್ನುವ ಹಾಗೆ ತಲೆಯನ್ನು ಅತ್ತಿತ್ತ ಆಡಿಸುತ್ತಾನೆ. ರಾಮಚಂದ್ರನು ಯೋಚಿಸಿ) ಹುಂ. ಮತ್ತೆ ಲಗ್ನ ಅದು ಎಲ್ಲ ಆಗಬೇಕಲ್ಲ. ಇನ್ನೊಂದು ಎರಡು ಮೂರು ದಿನದಲ್ಲೇ....

**ಗುಂಡಪ್ಪ:** ಆಗೋದಿಲ್ಲ, ಮಗು.

**ರಾಮಚಂದ್ರ:** ಯಾಕೆ? ಇನ್ನೂ ಎಂಟು ಹತ್ತು ದಿನ........? (ಗುಂಡಪ್ಪನು ಮತ್ತೂ ತಲೆಯಾಡಿಸುತ್ತಾನೆ) ಏನು ಈಗಲೂ ಮಾವನೋರೇ ಹಣ........

**ಗುಂಡಪ್ಪ** : ಅದಲ್ಲ.

**ರಾಮಚಂದ್ರ** : ಮತ್ತೆ ?

**ಲಕ್ಷಮ್ಮ** : ಅಯ್ಯೋ, ಮಗು, ನಿನಗೆ ಹೇಗೆ ಹೇಳೋದಪ್ಪ ! (ಬಿಕ್ಕಳಿಸಿ ಅಳುತ್ತಾಳೆ.)

**ರಾಮಚಂದ್ರ** : ಇದೇನಮ್ಮ ?.... ಅಪ್ಪ ?

**ಗುಂಡಪ್ಪ** : ಕೆಲಸ ಕೈಮೀರಿ ಹೋಯ್ತು.

**ರಾಮಚಂದ್ರ** : (ಗಾಬರಿಯಿಂದ) ಮೀರಿ ಹೋಯ್ತು ?.... ಅಂದರೆ

**ಗುಂಡಪ್ಪ** : ನಿನ್ನ ಹೆಂಡತಿ ತೀರಿಹೋದಳಂತೆ.

**ರಾಮಚಂದ್ರ** : (ಆವೇಶದಿಂದ) ಹ! ತೀರಿಹೋದಳು ! ತೀರಿ.... ಯಾಕೆ ?.... ಏನು... ? (ತಲೆಯ ಮೇಲೆ ಕೈಯಿಟ್ಟುಕೊಂಡು) ಓ.... ಓ ! ಗುಂಡಪ್ಪನು ಮೌನವಾಗಿ ಟೆಲಿಗ್ರಾಮನ್ನು ಬಿಚ್ಚಿ ರಾಮಚಂದ್ರನ ಕೈಗೆ ಕೊಡುತ್ತಾನೆ. ರಾಮಚಂದ್ರನು ನೋಡುತ್ತಲೆ) ಆತ್ಮಹತ್ಯೆ ! ತಾರಾ ಆತ್ಮಹತ್ಯೆ ! ಅಯ್ಯೋ, ರಾಮ ! ರಾಮ ! (ಕೆಳಗೆ ಕುಸಿದುಕೊಳ್ಳುತ್ತಾನೆ, ಕುಕ್ಕರಗಾಲಿನಲ್ಲಿ ಕುಳಿತು ಎರಡು ಕೈಗಳ ಮೇಲೆ ತಲೆಯನ್ನಿಟ್ಟು ದೀರ್ಘಕಾಲ ಮೌನವಾಗಿರುತ್ತಾನೆ ಯಾರೂ ಮಾತನಾಡುವದಿಲ್ಲ, ಲಕ್ಷಮ್ಮನು ಮಾತ್ರ ಬಿಕ್ಕಳಿಸಿ ಅಳುತ್ತಿರುತ್ತಾಳೆ. ಅನಂತರ ರಾಮಚಂದ್ರನು ಕೊಂಚ ಕತ್ತೆತ್ತಿ ವಾಕ್ಯ ವಾಕ್ಯಕ್ಕೂ ತಡೆತಡೆದು ಮಾತನಾಡುತ್ತಾನೆ) ಛೆ, ಬರೆದಂತೆಯೇ ಮಾಡಿಬಿಟ್ಟಳಲ್ಲ ! ನಾನು ಪಾಪಿ, ನಂಬದೆ ಹೋದೆ— ಏನೇನನ್ನೋ ಕೇಳಿ. ಅಯ್ಯೋ, ನಾನೇ ಆರಿಸಿಕೊಂಡ ಗಿಣಿಯನ್ನು ನಾನೇ ಕಯ್ಯಾರ ಕತ್ತು ಮುರಿದ ಹಾಗೆ ಆಯ್ತು. ನಾನೇ ತುಂಬಿದ ಜೇನಿನ ಗಡಿಗೆಗೆ ನಾನೇ ಕಲ್ಲು ಹೊಡೆದೆ........ನನಗೇನು ಬಂದಿತ್ತು ಹೊತ್ತು ? ನನಗೇನು ಕವಿದಿತ್ತು ಮಂಕು ? ಯುಕ್ತಾಯುಕ್ತ ವಿವೇಚನೆ ಮಾಡಲಾರದೆ ಹೋಗಿ ನನ್ನ ಅವಿವೇಕಕ್ಕೆ ಅವಳನ್ನು—ಅಂಥವಳನ್ನು ತುತ್ತಾಗಿಸಿದೆನಲ್ಲ!.... ಅಲ್ಲ, ನನಗೆ ನಿಶ್ಚಿತ ಜ್ಞಾನ ಇದ್ದೂ ಧೈರ್ಯ ಇಲ್ಲದೆ ನನ್ನನ್ನೇ ನಾನು ಮೋಸಗೊಳಿಸಿಕೊಂಡು ನನ್ನ ಹೇಡಿತನಕ್ಕೆ ಅವಳನ್ನು ಬಲಿಕೊಟ್ಟೆನೋ ? .... ಛೀ, ಧೈರ್ಯ ಇಲ್ಲದೆ ತುಂಬಿಕೊಂಡ ಜ್ಞಾನ ಏನು ಪ್ರಯೋಜನ—ಅಗೆಯದೆ ಇದ್ದ ಕೊಪ್ಪರಿಗೆ ಹಣದ ಹಾಗೆ ? ....ಅಯ್ಯೋ, ನನಗೆ ಬುದ್ಧಿ ಇಲ್ಲದೆ ಹೋಗಿದ್ದರೂ

ಎದೆಯೂ ಇಲ್ಲದೆ ಹೋಯಿತೆ? ಇದೇ ನಾನು ಅವಳನ್ನು ಪ್ರೀತಿಸುತ್ತ ಇದ್ದ ಬಗೆ? ಎಷ್ಟು ಪ್ರೀತಿಸುತ್ತ ಇದ್ದೆ—ನಿಜವಾಗಿ! ಆದರೂ ಕೈಬಿಟ್ಟೆನಲ್ಲ—ಹೀಗೆ. ಕಡೆಗೆ ಕನಿಕರವೂ ಕೂಡ ಅಡಗಿ ಹೋಯಿತಲ್ಲ ನನಗೆ—ಇಲ್ಲ ನಾನೇ ಅಡಗಿಸಿಕೊಂಡೆನೋ?....ಪಾಪ, ಕಡೆಯದಾಗಿ ಅವಳು ಕೇಳಿದ್ದು ಕನಿಕರ—ನನ್ನ ತಪ್ಪಿಗಾಗಿ! ನನ್ನ ತಪ್ಪನ್ನು ಒಪ್ಪಿಕೊಂಡು ನಾನೇ ಅದನ್ನು ಸರಿಪಡಿಸುವ ಧೈರ್ಯವಾಗಲೀ ಸ್ವತಂತ್ರವಾಗಲೀ, ಸಭ್ಯತೆಯಾಗಲೀ ನನ್ನಲ್ಲಿ ಹುಟ್ಟದೆ ಹೋಯಿತೆ? ಅಯ್ಯೋ, ನನ್ನ ಆತುರದ ತಪ್ಪಿಗಾಗಿ, ಪ್ರಜ್ಞೆಯಿಲ್ಲದ ಅತ್ಯಾಚಾರಕ್ಕಾಗಿ ಅವಳು ಎಷ್ಟು ನೊಂದಳು, ನಾಚಿದಳು, ಕೊರಗಿದಳು ಸೊರಗಿದಳು. ಆದರೂ ಒಂದು ನಿಷ್ಠುರದ ಮಾತಾಡಲಿಲ್ಲ. ಅವಳು ಕೊಂಚವೇ ಕೊಂಚ ಅನುಮಾನ ಸೂಚಿಸಿದಾಗ ನಾನು ಅದನ್ನು ಒಪ್ಪಲಿಲ್ಲ ಅಂತ ತಕ್ಷಣ ಕ್ಷಮೆ ಬೇಡಿದಳು....ಆಹಾ! ಅವಳ ಅನುಮಾನ ಎಷ್ಟು ಸಹಜವಾಗಿತ್ತು—ನಿಜವಾಗಿತ್ತು? ಅವಳು ಆಣೆಯಿಟ್ಟು ಭಾಷೆ ಕೇಳಿದಾಗ ನಾನು ನಕ್ಕೆ, ಈಗ ಅಳುತ್ತೇನಿ. ಆಗಿನ ನಿಶ್ಚಯ ಇಲ್ಲಿಗೆ ಬಂದಮೇಲೆ ಬದಲಾಯಿಸಿತಲ್ಲ. ಎಂಥ ಹೀನ ಸ್ವಭಾವ ನನ್ನದು!.... ಅಪರಾಧವನ್ನೇ ತಿಳಿಯದ ಅವಳು—ಆ ಹೆಮ್ಮೆಯ ಹುಡುಗಿ ಬೇಡಿಕೊಂಡಳು—ಕೇವಲ ತಪ್ಪಿತಸ್ಥಳಂತೆ. ಕಾಲಿಗೆರಗಿ–ಹುಂ–ಅಂಗಲಾಚಿದಳು. ನನ್ನ ಏರ್ಪಾಡು ಸರಿಯಲ್ಲ ಅಂತ ಕಂಡು ಬಂದರೂ ಅವಳು—ಆ ಹಸುಳೆ ಮನಸ್ಸಿನವಳು—ತನ್ನ ಕಷ್ಟದಲ್ಲಿ ತನ್ನನ್ನೇ ನನ್ನ ಕೈಯಲ್ಲಿಟ್ಟು ನನ್ನನ್ನೇ ಎಷ್ಟು ನಂಬಿದ್ದಳು? ದೈವವನ್ನೂ ಸಹ ನನಗಿಂತ ಮುಂದೆ ತರೋದು ಇಷ್ಟವಿರಲಿಲ್ಲ—ಅವಳಿಗೆ....ಆಗ ಎಷ್ಟೊಂದು ಭರವಸೆ ಕೊಟ್ಟೆ, ನಂಬಿಸಿದೆ? ಆದರೂ.........ಆದರೂ ಅದನ್ನೆಲ್ಲ ಮುರಿದು ಬಿಟ್ಟೆ—ಅಲಕ್ಷ್ಯದಿಂದ. ಲಲ್ಲೆ ಮಾತುಗಳಿಂದ ನಂಬಿಸಿ ನಂಬಿಸಿ ತುಂಬಿಸಿ ಮೋಸದಿಂದ ಕತ್ತು ಕುಯ್ದೆನಲ್ಲ... ದೇವರೇ, ಈ ಬುದ್ಧಿಗೆ ಹೇಗೆ ದಾರಿ ಆಯ್ತು—ನನ್ನಲ್ಲಿ? ಎಲ ಎಲ ಗೃಹಿಣಿಯಾಗಿರೋಕೆ ತಕ್ಕವಳು ದಾಸಿಯಾಗಲು ಸಿದ್ಧಳಿದ್ದಳಲ್ಲ!—ಅವಳ ನೋವು, ಧೈರ್ಯ ಎಷ್ಟು? ಕೇವಲ ಮಾತಿಗೆ ಅಂಜಿ ಸುಮ್ಮನಿದ್ದು ಅವಳ ಕೊಲೆಗೆ ಸಮ್ಮತಿಸಿದೆನಲ್ಲ!—ನಾನು ಮನುಷ್ಯನೇ?.... ಆಹಾ? ಅವಳು 'ನೋಡಿ, ಇಲ್ಲಿ ನೋಡಿ, ನನ್ನ ಮುಖದ ಕಡೆಗೆ, ನನ್ನ ಕಣ್ಣಿನಲ್ಲಿ' ಅಂದು ಕಣ್ಣೀರನ್ನು ತುಂಬಿ ತೋರಿಸಿದ.

ದೈನ್ಯದೃಷ್ಟಿಯೂ ನನ್ನನ್ನು ಎಚ್ಚರಿಕೆಯಿಂದ ಇಡದೆ ಹೋಯ್ತು ? ಅವಳು ಹೊತ್ತಿದ್ದ ' ವಂಶಕ್ಕೆ ಕಳಂಕ ಬರದೆ ಇರಲಿ ಅಂತ ಸ್ವಾರ್ಥವನ್ನೂ ಬಿಟ್ಟು ಅದರ ಮೇಲಿನ ಕರುಣೆ ನಮ್ಮ ಪ್ರೇಮ, ಧರ್ಮ, ನೀತಿ—ಇದಕ್ಕಾಗಿ ಅವಳು ಇಟ್ಟ ಮೊರೆಯನ್ನು ಕೇವಲ ಅಗತ್ಯವಿಲ್ಲದ್ದು ಎಂದು ಪ್ರೋತ್ಸಾಹಿಸಿ ಸಮಾಧಾನ ಪಡಿಸಿ ಕಡೆಗೆ ಬಲವಂತದಿಂದ ತಳ್ಳಿಹಾಕಿದೆನಲ್ಲ.'.... ಹೆಮ್ಮೆಯ ಹುಡುಗಿ, ಮೋಹದ ಮಡದಿ, ಗೌರವದ ತಾಯಿಯಾಗುತ್ತೀಯೆ, ಧೈರ್ಯದಿಂದ ಇರು ಎಂದು ಮಾತು ಕೊಟ್ಟು ಅದನ್ನು ನನ್ನಿಂದ ದೂರ ಬಚ್ಚಿಟ್ಟು ಈ ಚಿತ್ರಹಿಂಸೆಯ ಸಾವಿಗೆ ಎಸೆದೆ ಅವರನ್ನು—ಕಠೋರ ನಿಷ್ಕರುಣಿಯಾಗಿ... ಎದೆ ಕರಗೋ ಕಾಗದಗಳಿಂದ ಅವಳು ನನ್ನನ್ನು ಆಗಾಗ್ಗೆ ಎಚ್ಚರಿಸೋಕೆ ಯತ್ನಿಸುತ್ತ ಇದ್ದರೂ, ಇಲ್ಲಿ ನಾನೂ ಮೋಸಹೋಗಿ ಸಣ್ಣ ನಿಷ್ಠುರಕ್ಕೆ ಬೆದರಿ, ದಾಕ್ಷಿಣ್ಯಕ್ಕೆ ಕಟ್ಟುಬಿದ್ದು, ಮನೋದಾರ್ಢ್ಯವಿಲ್ಲದೆ ಪ್ರೇಮ, ಕರ್ತವ್ಯಗಳನ್ನು ಕುರುಡುವಿಧೇಯತೆಗೆ ಬಲಿಕೊಟ್ಟು ಎದೆ ಕಲ್ಲು ಮಾಡಿಕೊಂಡು ಫಲವಿಲ್ಲದ ಒಣಕಾಗದಗಳಿಂದ ಕಪಟ ಮಾತುಗಳಿಂದ ಮೋಸಮಾಡಿ ನೋಯಿಸಿ, ಹುಚ್ಚು ಹಿಡಿಸಿ,.... ಛೀ ಛೀ....ಕೊಂಚ ಹಣದ ಹಟಕ್ಕಾಗಿ ಒಂದು ಜೀವವನ್ನೇ,...ಒಂದಲ್ಲ ಎರಡನ್ನು, ನೀರುಪಾಲುಮಾಡಿ ನನ್ನ ಬಾಳನ್ನೂ ಬರಿದು ಹಾಳನ್ನಾಗಿ ಮಾಡಿಕೊಂಡ ನಾನು ದೌರ್ಭಾಗ್ಯನೋ ಪಾತಕಿಯೋ—ಎರಡೂ ಕೂಡೋ ? .... ಹಾ ! ಈ ನನ್ನ ಶೋಚನೀಯವಾದ ವ್ಯಕ್ತಿತ್ವವನ್ನು ನಾನೇ ಅರಿತುಕೊಳ್ಳೋದಿಕ್ಕೆ, ಇಷ್ಟೊಂದು ದೊಡ್ಡ ದುರಂತದ ಪೆಟ್ಟು ಬೀಳಬೇಕಾಯ್ತು ? ಇನ್ನು ಮರುಭೂಮಿಯ ಹಾಗೆ, ಸ್ಮಶಾನದ ಹಾಗೆ ಇರೋ ಈ ಜೀವನದ ಗತಿ ಹೇಗೆ ? ಬಾಳನ್ನು ಹೇಗೆ ತಳ್ಳೋದು, ಈ ಭಾರ ಹೊತ್ತುಕೊಂಡು ? ಈ ಪಾಪಿಷ್ಠನಿಗೆ ಏನು ಪ್ರಾಯಶ್ಚಿತ್ತ ? ಏನು ? .... ಏನು ?

**ಲಕ್ಷಮ್ಮ :** ಮಗು, ಇದೇನಪ್ಪ ಇಷ್ಟೊಂದು ಹಚ್ಚಿಸಿಕೊಂಡು ಮರುಗುತ್ತೀಯ ?

**ರಾಮಚಂದ್ರ :** ಇನ್ನೇನು ಮಾಡಲಮ್ಮ ? ಹೀಗೆ ನಡೆದುಕೊಂಡು, ಅಷ್ಟೊಂದು ಕಳೆದುಕೊಂಡು ಮರುಗದೆ ಇರೋದೂ ಹೇಗೆ ?

**ಗುಂಡಪ್ಪ**: ಗಂಡಸಾಗಿ ಇದೇನು ಹೀಗೆ ಆಡುತ್ತೀಯ? ಏನು ಯಾರಿಗೂ ಆಗದೇ ಇದ್ದದ್ದೆ? ಸುಮ್ಮನೆ ತಿಳಿಯದೆ ಮಾಡದೆ ಇಷ್ಟೊಂದು ತೀರ........

**ರಾಮಚಂದ್ರ**: ಏನು, ಅದಕ್ಕೂ ಆಕ್ಷೇಪಣೆಯೇನು? ಅದೂ ನೀವು ಹೇಳಿದಷ್ಟೇ ವ್ಯಸನಪಡಬೇಕೇ? ಆಗ ಉಳಿಸಿಕೊಳ್ಳೋಕೆ ಆಗಿದ್ದಾಗ ಅವಕಾಶ ಇಲ್ಲವಾಯ್ತು, ಈಗ ಅಳೋದಿಕ್ಕೂ ಇಲ್ಲವೆ? ಗಂಡಸು, ಗಂಡಸು ಅಂದರೆ ಅವನೇನು ಎಲ್ಲ ತಪ್ಪಿಗೂ ಕಾರಣವಾಗಿ, ಎಲ್ಲ ದುಃಖಕ್ಕೂ ಹೊರಗಾಗಿ ಇರೋ ವಿಚಿತ್ರಪ್ರಾಣಿಯೆ?

**ಲಕ್ಷಮ್ಮ**: ಹಾಗಲ್ಲ ಮಗು. ಹಣೇಲಿ ಬರೆದಿದ್ದರೆ ಯಾರು ಏನು ಮಾಡ್ತಾರೆ.... ಹೇಳು?

**ರಾಮಚಂದ್ರ**: ಒಳ್ಳೆ ಮಾತು ಹೇಳಿದೆ ಅಮ್ಮ. ಈಳಿಯಿಟ್ಟು ಸುತ್ತಿಗೇಲಿ ಹೊಡೆದು ಅವಳ ಹಣೇ ಮೇಲೆ 'ಸಾಯಿ' ಅಂತ ಕೆತ್ತಿ, ಯಾರೇನು ಮಾಡ್ತಾರೆ ಅಂತೀಯಲ್ಲ— ಏನು ಹೇಳಲಿ? ಒಳ್ಳೆ ಹಣೇಬರಹದ ವಿಚಾರ! ಇದೇ ನಮ್ಮ ದುಸ್ಥಿತಿಯ ಕಾರಣ, ಲಕ್ಷಣ. ಮಾಡೋದು ಮಾಡೋದು, ಹಣೆಬರಹ ಅನ್ನೋದು

**ಲಕ್ಷಮ್ಮ**: ಪಾಪ, ನಿನ್ನದೇನಪ್ಪ ತಪ್ಪು? ಏನೋ ಆಗಿಹೋಯ್ತು. ಎಷ್ಟೋ.......

**ರಾಮಚಂದ್ರ**: ಚೆನ್ನಾಗಿ ಹೇಳುತ್ತೀಯ. ನನ್ನದೇನು ತಪ್ಪೆ? ನನ್ನದಲ್ಲದೆ ಇದ್ದರೆ, ಇನ್ನು ಯಾರದ್ದು?

**ಗುಂಡಪ್ಪ**: ನಿಮ್ಮ ಪಾಪಂದು. ನಾನು ಹೇಳುತ್ತೀನಿ ಧಾರಾಳವಾಗಿ. ಅವನ ಪೆಂಡತನವೇ ಅವನ ಮಗಳನ್ನು ಕೊಂದಿದ್ದು. ಮನಸ್ಸು ಮಾಡಿದ್ದರೆ ಅಷ್ಟು ಮಾಡೋಕೆ ಆಗುತ್ತಾ ಇರಲಿಲ್ಲವೆ? ಬೇಕಂತ ಮಾಡಿದ; ಅವಕ್ಕೆ ಸರಿಯಾಗಿ ಆಯ್ತು. ಮಗಳ ಮೇಲೆ ಪ್ರೇಮ ಇದ್ದಿದ್ದರೆ ಉಳಿಸಿಕೊಳ್ಳುತ್ತಲೇ ಇದ್ದ. ಶುದ್ಧ ಮುಠ್ಠಾಳ— ಅವನೊಬ್ಬ.

**ರಾಮಚಂದ್ರ**: ಮುಠ್ಠಾಳ ಅವರಲ್ಲ, ನಾನು. ನನಗಿಂತ ಆವಳನ್ನು ಹೆಚ್ಚು ಪ್ರೀತಿಸಿದೋರು ಇಲ್ಲ. ನಾನು ಅವರ ಹಾಗೆ ಹಣಕ್ಕೆ ಹೆಣಗಲೂ

ಬೇಕಾಗಿರಲಿಲ್ಲ— ಅವಳನ್ನು ಉಳಿಸಿಕೊಳ್ಳೋಕೆ, ಮಾನದಿಂದ ಬಾಳಿಸೋಕೆ. ಆ ಮಾತು ಈ ಮಾತು ಕೇಳದೆ ನನ್ನ ತಿಳಿವಳಿಕೆಗೆ ಬಂದ ಹಾಗೆ ಧೈರ್ಯದಿಂದ ಮಾಡಿದ್ದರೆ ಸಾಕಾಗಿತ್ತು. ಹಾಗೆ ಮಾಡದೆ, ಬಾಳಿನಲ್ಲಿ ಯಾವುದು ಒಂದೇ ನನ್ನ ಜೀವಸರ್ವಸ್ವವಾಗಿ, ಜೀವನದ ರಸವಾಗಿ ಇತ್ತೋ ಅದನ್ನು ಬಚ್ಚಲಿಗೆ— ಇಗೋ ಈ ಕೈಯಿಂದಲೇ ಸುರಿದು, ನಿರ್ಗತಿಕನಾದ ಮೂಢ ನಾನು.

**ಗುಂಡಪ್ಪ** : ಓ, ನೀನು ಹೇಳೋದು ಗೊತ್ತಾಯಿತು. ಏನು, ನಾವು ಬುದ್ಧಿವಾದ ಹೇಳಿದ್ದರಿಂದ ಹಾಗಾಯ್ತು ಅಂತ ಅಲ್ಲವೆ ?

**ರಾಮಚಂದ್ರ** : ಅಲ್ಲ. ನಿಮಗೆ ತಿಳಿದ ಹಾಗೆ ಬುದ್ಧಿವಾದ ಹೇಳೋಕೆ ನಿಮಗೆ ಅಧಿಕಾರ ಇದೆ. ಆದರೆ ಅದನ್ನು ವಿಮರ್ಶೆ ಮಾಡಿ ನನಗೆ ಸರಿ ಅಂತ ತಿಳಿದುದ್ದನ್ನು ಮಾಡದೆ ಸುಮ್ಮನೆ ನೀವು ಹೇಳಿದ ಹಾಗೆ ಮಾಡಿದ್ದು ನನ್ನದು ತಪ್ಪು........ ಇದಕ್ಕೆ ಏನು ಕಾರಣ ಇಷ್ಟು ವಿವೇಚನೆ ಬರದೇ, ಇಷ್ಟು ತಿಳಿ ಯಾಗಿ ಕಂಡ ಸರಿಯಾದ ಘನವಾದ ದಾರಿ ಅನುಸರಿಸದೆ ಹೋದದ್ದಕ್ಕೆ ? ನಿಮ್ಮ ಉಪದೇಶವೆ ? ಉಹುಂ. ನೀವು ತಪ್ಪು ಅಂತ ನನಗೆ ಗೊತ್ತಿತ್ತು. ನಿಮ್ಮ ಹೆದರಿಕೆಯೆ ? ಇಲ್ಲ, ನಿಮ್ಮಿಂದ ಏನೂ ಸಾಧ್ಯವಿಲ್ಲ ಅನ್ನೋದೂ ಗೊತ್ತು. ಮತ್ತೇನು ? ನಿಜವಾಗಿ ?........ ಹುಂ. ಮೊದಲಿನಿಂದ ಪರತಂತ್ರ ದಲ್ಲೇ ಬಿದ್ದು, ಹೇಳಿದಂತೆ ಕೇಳಿಕೊಂಡು, ಮೂಗುದಾರ ಎಳೆಸಿಕೊಂಡೇ ಇದ್ದು ಯಾವಾಗಲೂ ಸಾಕಾದಷ್ಟು ಸ್ವತಂತ್ರವಾಗಿ ಯೋಚಿಸಿಕೊಳ್ಳದೆ, ಯೋಚಿಸಿಕೊಂಡರೂ ನನ್ನಲ್ಲೇ ಭರವಸೆ ಇಟ್ಟುಕೊಳ್ಳದೆ, ಹಾಗೇ ಸ್ವತಂತ್ರ ವಾಗಿ ನಡೆದುಕೊಳ್ಳದೆ ಇದ್ದ ಅಭ್ಯಾಸ.... ಆ ಹಾಳು ಅಭ್ಯಾಸವೇ ನನ್ನನ್ನು ಇಷ್ಟು ನಿಸ್ಸಹಾಯಕನನ್ನಾಗಿ ಮಾಡಿದ್ದು.

**ಗುಂಡಪ್ಪ** : ಓಹೋ, ಈಗ ಗೊತ್ತಾಗಿಹೋಯ್ತು ಆದೆಲ್ಲ ಸ್ವತಂತ್ರದ ವಿಚಾರ ಅಂತ ? ನಾವು ನಮ್ಮ ಅನುಭವ, ವಿವೇಕ ಲೌಕಿಕ ಇದನ್ನೆಲ್ಲ ಹಾಕಿ ನಡೆಸಿಕೊಂಡು ಬಂದರೂ ನೀನು ತಪ್ಪಿನ ಮೇಲೆ ತಪ್ಪು ಮಾಡೋನು ಇನ್ನು ಸ್ವತಂತ್ರ ಅಂತ ಬಿಟ್ಟುಬಿಟ್ಟದ್ದರೆ ದೇವರೇ ಗತಿ ! ಇನ್ನೂ ಹೆಚ್ಚಿನ.... ...

**ರಾಮಚಂದ್ರ** : ಇದಕ್ಕಿಂತಲೂ ಹೆಚ್ಚಿನ 'ತಪ್ಪೆ? ಅಂಥಾದ್ದು ಇದೆಯೆ ? ಅಂ. ಇಂಥಾ ಪರಿಣಾಮವನ್ನೇ ಉಂಟುಮಾಡೋ ಅನುಭವ, ವಿವೇಕ

ಲೌಕಿಕ ನನ್ನ ಶತ್ರುಗಳಿಗೂ ಬೇಡ. ಅವೆಲ್ಲಕ್ಕಿಂತ ನನ್ನ ಅವಿವೇಕವೇ ವಾಸಿಯಾಗಿರುತ್ತಿತ್ತು. ಅಲ್ಲದೆ ತಪ್ಪು ಹೆಜ್ಜೆ ಇಡದೆ ನಡೆಯೋದಿಕ್ಕೆ ಬರುತ್ತೆಯೆ–ಮಕ್ಕಳಿಗೆ? ಆ ಹೆಜ್ಜೆಗೇ ಬಿಡದಿದ್ದರೆ? ನನಗೆ ಮೊದಲಿನಲ್ಲಿ ಸಣ್ಣ ಸಣ್ಣ ತಪ್ಪಿಗೆ ಸ್ವಾತಂತ್ರ್ಯ ಸಿಕ್ಕಿದ್ದರೆ ತಿದ್ದಿಕೊಂಡು ಇಂಥ ಅಗಾಧವಾದ ತಪ್ಪು, ಮಹಾಪಾತಕವನ್ನು ತಪ್ಪಿಸಿಕೊಳ್ಳುತ್ತಿದ್ದೆ. ನನಗೆ ತಪ್ಪು ಮಾಡುವ ಅಧಿಕಾರವೂ ಇರಲಿಲ್ಲ, ಅದರಿಂದ ತಿಳಿವಳಿಕೆಗೆ ಅವಕಾಶವೂ ಸಿಕ್ಕದೆ ಹೋಯಿತು. ಸರಿ ತಪ್ಪಿನ ವಿವೇಚನೆಯೋ ನನಗೆ ಆಗಲಿಲ್ಲ.

**ಗುಂಡಪ್ಪ:** (ಲಕ್ಷಮ್ಮನನ್ನು ನೋಡಿ) ನೋಡಿದೆಯೋ ಎಲ್ಲಿಗೆ ಬಂತು?.... ಈಗ?

**ಲಕ್ಷಮ್ಮ :** ಇದೇನೋ ಮಗು, ಇದೆಲ್ಲ ನಿನಗೆ ಏನು ತಿಳಿಯುತ್ತಪ್ಪ ಇನ್ನೂ ?

**ರಾಮಚಂದ್ರ :** ಅಮ್ಮ, ಸಾಕಮ್ಮ.... ಈ ಮಗು ಮಗು ಅನ್ನೋದು. ನನಗೆ ಈಗ ಕೇಳೋದಿಕ್ಕೆ ಆಗೋದಿಲ್ಲ. 'ಮಗು, ಮಗು' ಅಂತ ಸಣ್ಣ ಮಗೂನೇ ಮಾಡಿ, 'ನಿನಗೆ ಅದು ತಿಳಿಯೋದಿಲ್ಲ, ಇದು ತಿಳಿಯೋದಿಲ್ಲ' ಅಂತ ನನ್ನ ತಿಳಿವನ್ನೇ ಅಳಿಸಿ, 'ನೀನು ಅಶಕ್ತ, ಅಶಕ್ತ' ಅಂತ ಶಕ್ತಿಯನ್ನೇ ಹಾಳುಮಾಡಿ, ಯಾವ ಸ್ವಪ್ರಯತ್ನಕ್ಕೂ ಆಸ್ಪದವೇ ಕೊಡದೆ, ನನ್ನ ಹತ್ತಿರವೇ ಸ್ವತಂತ್ರ ಸುಳಿಯದ ಹಾಗೆ ಮಾಡಿ, ನನ್ನಲ್ಲೇ ನನಗೆ ಅಧೈರ್ಯ ಹುಟ್ಟಿಸಿ, ಅಲ್ಲಿ ಇಲ್ಲಿ ಎಳೆದಾಡಿಸಿ ಈ ದುಃಸ್ಥಿತಿಗೆ ತಂದು ನಿಲ್ಲಿಸಿದಿರಿ.

**ಗುಂಡಪ್ಪ :** ಹಾಗಾದರೆ ನಾವು ತಂದೆ ತಾಯಿ ಅಂತ ಇದ್ದುಕೊಂಡು ಸಾಕಿ ಸಲಹಿದ್ದೆ ತಪ್ಪೆ ? ಹಾಗೆ ಮಾಡದೇ ಇದ್ದರೆ....

**ರಾಮಚಂದ್ರ :** ಅಲ್ಲ. ಆದರೆ ಎಲ್ಲಿ ಮಕ್ಕಳಿಗೆ ಅತಿ ಉಪಕಾರವು ಅಪಕಾರವಾಗುತ್ತೋ ಅದನ್ನು ಅರಿಯದ ಅಜ್ಞಾನಿಗಳು ತಂದೆ ತಾಯಿಗಳಲ್ಲ. ಹಿತಶತ್ರುಗಳು. ಅವರು ಹಿತವನ್ನು ದಾರಿ ಮೀರಿ, ದಾರಿ ತಪ್ಪಿ ಸಾಧಿಸಿ ನೆಲದೊಳಗೆ ನೆಡಬೇಕಾದ ಗಿಡವನ್ನು ಕುಂಡದಲ್ಲಿ ಬೆಳೆಸುತ್ತಾರೆ. ನೆಟ್ಟಗಿರಬಹುದಾದ ಜೀವನವನ್ನು ಅಲ್ಲಿ ಇಲ್ಲಿ ಬಗ್ಗಿಸಿ ಸೊಟ್ಟಾಗಿಸುತ್ತಾರೆ. ಇದೇ ಅವರ ಹೆಮ್ಮೆ. ಈಗ ನನ್ನ ನೋಡಿ, ಹುಡುಗತನದಲ್ಲಿ ಕೈಲಾಗದವನೆಂದು

ಎಲ್ಲರ ಹಾಸ್ಯಕ್ಕೂ ಗುರಿಯಾಗಿದ್ದೆ. ದೊಡ್ಡವನಾದ ಮೇಲೂ ಮಾಡ ಬೇಕಾದದ್ದು ಯಾವಾಗಲೂ ತೋರದೆ ಅಧೈರ್ಯದಿಂದ ಮಂಕಾಗಿಯೇ ಇದ್ದು ದಡ್ಡ ಅನ್ನಿಸಿಕೊಂಡೆ. ಈಗ ಪರಮ ಪಾತಕಿ ಅಂತಲೂ ಆಗಬೇಕಾಯ್ತು.... ಬೇರೆ ತಪ್ಪು ಲೆಕ್ಕಕ್ಕೆ ನನ್ನದನ್ನೂ ಸೇರಿಸಿಹೋಗಿಸಿಕೊಳ್ಳಲು ಒದ್ದಾಡಿ. ಒದ್ದಾಡಿ.

**ಲಕ್ಷ್ಮಮ್ಮ**: ಏನೋ ಹಾಗು ನಾವು ಎಲ್ಲ ನಿನ್ನ ಒಳ್ಳೇದಿಕ್ಕೆ ಅಂತಲೇ....

**ರಾಮಚಂದ್ರ**: ನಿಜ, ಇಲ್ಲ ಅನ್ನೋದಿಲ್ಲ. ಆದರೆ ಇನ್ನೊಬ್ಬರಿಗೆ ಒಳ್ಳೆಯದಾಗದೇ ಇರೋದು ನಮಗೂ ಒಳ್ಳೆಯದು ಆಗಲಾರದು ಅಂತ ಈಗಲಾದರೂ ಗೊತ್ತಾಯ್ತೆ? ಇಷ್ಟ ಸರಿಯಾಗಿದ್ದರೂ ದಾರಿ ತಪ್ಪು. ಆದರ ಫಲವೇ ಇದು. ಕುರುಡ ಪ್ರೇಮ ಹೇಗೆ ಹೇಗೆ ಪ್ರವಹಿಸುತ್ತೆ ಅಂತ ನೋಡಿ, ಸಂತೋಷ ಪಡಿ ಈಗ!

**ಗುಂಡಪ್ಪ**: ಇದು ಶೀರ ಅವಿಧೇಯತೆ!

**ರಾಮಚಂದ್ರ**· ಹುಂ! ಅವಿಧೇಯತೆ. ಇದು ನನಗೆ ವ್ಯಸನವೆ. ಆದರೆ ಅದಕ್ಕಿಂತ ಹೆಚ್ಚಿನ ವ್ಯಸನ ಅತಿ ವಿಧೇಯತೆಯನ್ನು ತೋರಿಸಿದೆನಲ್ಲ ಅಂತ—ಹಿತಕ್ಕೆ ಮೀರಿದಷ್ಟು. ವಿಧೇಯತೆಗಿಂತಲೂ ನ್ಯಾಯ ಹೆಚ್ಚು. ನ್ಯಾಯ ವಿಧೇಯತೆಗಳು ಸೇರದಿದ್ದ ಕಡೆ ವಿಧೇಯತೆಯ ಅನ್ಯಾಯಕ್ಕಿಂತ ಅವಿಧೇಯತೆಯ ನ್ಯಾಯವೇ ಮೇಲು. ಅದೇ ತಂದೆ ತಾಯಿಗಳಿಗೂ ಆ ಕ್ಷಣದಲ್ಲಿ ದುಃಖವನ್ನೇ ತಂದರೂ ಆಮೇಲೆ ಕೀರ್ತಿಯನ್ನು ತರುತ್ತೆ. ಆದರೆ ವಿಧೇಯತೆಯ ಅನ್ಯಾಯ, ಸುಖದ ಅಪಕೀರ್ತಿ ಅಷ್ಟೆ. ಇದೇ ಪರಿಣಾಮವೇ ನಿಮ್ಮನ್ನು ಈಗ ಸುತ್ತಿಕೊಂಡಿರೋದು. ಜನವೆಲ್ಲ ನಿಮ್ಮ ಕಡೆಗೆ ಬೆರಳು ತೋರಿಸಿ 'ಹೆಂಡತಿ ಕೊಂದವನ ತಂದೆ ತಾಯಿ' ಅನ್ನುತ್ತಾರೆ, ಎಂದೆಂದಿಗೂ. ನನ್ನ ಪಾಡಂತೂ....ಅಯ್ಯೊ, ಪ್ರಾಣದ ಹಾಗಿದ್ದ ಅವಳನ್ನು ಕಳೆದುಕೊಂಡು....

**ಲಕ್ಷ್ಮಮ್ಮ**: ಇದು ಯಾಕಪ್ಪ ಇಷ್ಟು ನಿರಾಶನಾಗುತ್ತೀಯೆ?

**ರಾಮಚಂದ್ರ** : ಇಂಥ ಜೀವನದಲ್ಲಿ ಆಸೆಗೆ ಏನು ಆಧಾರ? ಯಾಕಿರಬೇಕು ಅದು ?

**ಲಕ್ಷ್ಮಮ್ಮ** : ಅಯ್ಯೊ, ಹೋಗೋಳು ಕಣ್ಣುಮುಚ್ಚಿಕೊಂಡು ಹೋಗಿ ಬಿಟ್ಟು ನಿನಗೇನು ಸಂಕಟ ತಂದಿಟ್ಟಳಪ್ಪ !

**ರಾಮಚಂದ್ರ** : ಅಮ್ಮ, ಈಗಲೂ ನನ್ನ ಮೇಲೆಯೇ ನಿಮಗೆ ಕರುಣೆ. ಅವಳ ಕಡೆಗೆ ಎಳ್ಳಷ್ಟೂ ಹೋಗದಲ್ಲ. ಇದೇನು ನಿಮ್ಮ ವ್ಯಾಮೋಹದ ಮದ್ಯ ? ಒಂದೇ ಪ್ರೇಮ ಹೀಗೆ ಒಂದು ಕಡೆ ಹುಚ್ಚು ಮೋಹ, ಇನ್ನೊಂದು ಕಡೆ ಕಠಿಣ ನಿರ್ದಯತೆಯಾಗಿ ಎರಡು ಕವಲು ಒಡೆಯೋದು ಹೇಗೆ ಸಾಧ್ಯ? ಇದೇನು ಮನುಷ್ಯಸ್ವಭಾವವೆ? ಅವಳು ಕೆಲವು ದಿನದಲ್ಲಿ ಪಟ್ಟಿರೋ ಯಾತನೆ, ನನ್ನ ಜೀವನವನ್ನೆಲ್ಲ ತುಂಬಿ ಇನ್ನೂ ಉಕ್ಕಿ ಹರಿಯುವಷ್ಟು. ಆದರೂ ಅದರ ಕಡೆಗೆ ಅವಳಿದ್ದಾಗಲೇ ನಿಮ್ಮ ಕರುಣ ಹೋಗಲಿಲ್ಲ. ಏನು ವಿಚಿತ್ರ? ನನಗೆ ಪಡುವ ಸಂಕಟದಲ್ಲಿ ಒಂದು ಸಣ್ಣ ಪಾಲು ಅವಳ ಕಡೆಗೆ ಹೊರಳಿಸಿದ್ದರೆ ಈ ನಿಮ್ಮ ಸಂಕಟವೇ ಇರುತ್ತಿರಲಿಲ್ಲ.

**ಲಕ್ಷ್ಮಮ್ಮ** : ಆಗಿದ್ದು ಆಗಿಹೋಯ್ತು. ಈಗ ಹೋದೋಳಿಗೆ ಮರುಗಿ ಏನು ಪ್ರಯೋಜನ? ನೀನೂ ದುಃಖ ಸೈರಿಸಿಕೊಂಡು ಮುಂದಕ್ಕಾದರೂ ಸುಖಕ್ಕೆ ದಾರಿ ಮಾಡಿಕೋ. .

**ರಾಮಚಂದ್ರ** : ಅಮ್ಮ, ನನಗೆ ಇನ್ನು ಸುಖ ಇಲ್ಲ—ಬೇಡ. ನಾನು ಅದಕ್ಕೆ ಅರ್ಹನಲ್ಲ ಜೀವನದ ದಿನವೆಲ್ಲ ಬೆಂದರೂ ನನಗೆ ಪ್ರಾಯಶ್ಚಿತ್ತ ಆಗೋದಿಲ್ಲ. ಇನ್ನು ನನಗೆ ಸುಖದ ಮಾತೂ ಪಾತಕದ ಮಾತೂ ಎರಡೂ ಒಂದೇ

**ಗುಂಡಪ್ಪ** : ಹಾಗಂದರೆ ಏನು ಮಗು ? ನಿನಗಿನ್ನೂ ಚಿಕ್ಕ ವಯಸ್ಸು. ವಿದ್ಯಾವಂತ

**ರಾಮಚಂದ್ರ** : ನನ್ನ ವಿದ್ಯೆಗೆ ಮಣ್ಣು. ವಿವೇಚನೆ ತರದ ವಿದ್ಯೆ ಕಲಿಯೋದು ಮರುಭೂಮಿ ಉತ್ತ ಹಾಗೆ.

**ಗುಂಡಪ್ಪ** : ( ಗಮನಿಸದೆ ) ಕೆಲಸ ಇದೆ.

**ರಾಮಚಂದ್ರ**: ಹ, ಹಾಳು ಕೆಲಸ—ಅನೀತಿ ಸಂಪಾದಿಸಿದ್ದು. ಅದೇ ವಿಷಬೀಜ. ವಿಷಫಲಾನೂ ಕೊಟ್ಟಿತು ಇದಕ್ಕಿಂತ ತಿರುಪೆ ಮೇಲಾಗಿತ್ತು...

**ಗುಂಡಪ್ಪ:** ಈಗೆಲ್ಲ ಹಾಗೆ ಅನ್ನಿಸುತ್ತೆ. ನನ್ನ ಕೇಳು. ಈ ದುಃಖ ಹೀಗೇ ಇರೋದಿಲ್ಲ. ಕಾಲದಲ್ಲಿ ಎಲ್ಲ ಸರಿಯಾಗುತ್ತೆ.

**ರಾಮಚಂದ್ರ :** ಆ ಸುಡುಗಾಡು ಕಾಲ ಬರದೆ ಇರಲಿ. ಈ ಕೃತ್ಯ ವನ್ನು ಮರೆಸಿ ಬರುವಂಥ ಸುಖಕ್ಕಿಂತ ಈ ದುಃಖವೇ ವಾಸಿ—ಸಾವಿರ ಪಾಲಿಗೆ.

**ಗುಂಡಪ್ಪ** : ಯಾರಾದರೂ ದಮ್ಮಯ್ಯ ಅಂತ ಕೈಕಾಲು ಕಟ್ಟಿ ಕೊಂಡು ಇನ್ನೊಂದು ಹೆಣ್ಣು....

**ರಾಮಚಂದ್ರ :** ಸಾಕು ! ಸಾಕು ! ತಡೆಯುಲಾರೆ. ಈ ಸಮಾಧಾನ, ಪ್ರೋತ್ಸಾಹ- ಗಾಯದ ಮೇಲೆ ಉಪ್ಪು ತಿಕ್ಕಿದ ಹಾಗೆ. ಬೇರೆ ಹೆಣ್ಣೆ ? ಯಾಕೆ ಯಾವಾದರೂ ಹೆಣ್ಣು ಸುಖವಾಗಿರೋದು ನಿಮಗೆ ಅಸೂಯೆ ಆಗುತ್ತಾ ಇದೆಯೇನು ? ತಾರಾ ಸತ್ತರೂ ನನಗೆ ಬದುಕಿಯೇ ಇರುತ್ತಾಳೆ. ಇನ್ನೊಬ್ಬಳು ಅಂದರೆ ಬದುಕಿದ್ದರೂ ಸತ್ತಹಾಗೇ ಮಾಡಬೇಕೇನು ? ಹ್ಹ, ಇನ್ನೊಬ್ಬಳು ! ಅವಳೂ ಸಿಕ್ಕುತ್ತಾಳಲ್ಲ ! ಏನು ಸಮಾಜ ? ಗಂಡನಿಂದಲೇ ತಾಯಿಯಾದವಳಿಗೆ ಶಾಸ್ತ್ರ ಮಾತ್ರ ಇಲ್ಲದೆ ಇದ್ದದ್ದಕ್ಕೆ ತಿರಸ್ಕಾರ ! ನಿರಪರಾಧಿ ಹೆಂಡತಿಯನ್ನು ಅವಮಾನಿಸಿ, ನೋಯಿಸಿ ಕೊಂದ ಘಾತುಕನಿಗೆ ಮಾತ್ರ ಇನ್ನೂ ಪುರಸ್ಕಾರ ಇದ್ದೇ ಇರುತ್ತೆ ಇಲ್ಲಿ ! ಇದಕ್ಕಿರಲಿ ಧಿಕ್ಕಾರ ! ನನ್ನ ಹಾಗೆ, ನಿಮ್ಮ ಹಾಗೆ ಇರೋರು ಬಾಳುತ್ತಿರೋ ಈ ಸಮಾಜಕ್ಕೆ ಬರಿ ತಲೆಯಿದೆ ಹೃದಯ ಇಲ್ಲ; ನಾಲಿಗೆ ಇದೆ, ಕಣ್ಣಿಲ್ಲ; ಅನುಕೂಲ ಗೊತ್ತು ನ್ಯಾಯ ಗೊತ್ತಿಲ್ಲ. ಇಂಥ ಸಮಾಜದಿಂದ ಎಲ್ಲಾದರೂ ದೂರ ದೂರ ಹೋಗಿಬಿಡಬೇಕು....ದೂರ....

**ಲಕ್ಷ್ಮಮ್ಮ** : ಹ ! ಮಗು !

**ಗುಂಡಪ್ಪ** : ( ಗಾಬರಿಯಾಗಿ ) ಇದೇನು ಮಗು, ವಿಪರೀತ ? ಎಲ್ಲಿಗೆ ಹೋಗೋದು ? ಸಾಕಪ್ಪ, ಸುಮ್ಮನಿರು.

**ರಾಮಚಂದ್ರ** : ಎಲ್ಲಿಗೋ, ಎಲ್ಲಿಗಾದರೂ– ಇಲ್ಲಿ ಬಿಟ್ಟು.

**ಗುಂಡಪ್ಪ** : ಆ ! ಮಗೂ ಇದು ಯಾವ ಹುಚ್ಚು ನಿನಗೆ ?

**ರಾಮಚಂದ್ರ** : ಅಪ್ಪ. ನೀನು ಇಲ್ಲಿಯ ವರೆಗೆ ಮಾಡಿದ ಹಾಗೆ ಬರಿ ಬಾಯಿಬಡಿದು ಬೆದರಿಸಿದರೆ ನಾನು ಈಗ ಬಗ್ಗೋದಿಲ್ಲ. ತಿಳೀತೆ ? ನನಗೆ ಹುಚ್ಚು ಹಿಂದೆ ಇತ್ತು. ಈಗ ಎಚ್ಚರವಾಗಿದ್ದೀನಿ– ಆದ್ದರಿಂದ ಇಲ್ಲಿಯ ವರೆಗೆ ಗರ್ಭಶಿಶುವಾಗಿದ್ದೆ. ಹೇಗೆ ತಾಯಿಗೆ ಬೇಕಾದದ್ದು ತನಗೂ ಬೇಕೋ, ಅವಳಿಗೆ ಬೇಡವಾದದ್ದು ಬೇಡವ್ರೋ, ಅವಳು ಅತ್ತರೆ ಹಿಂಸೆ, ನಕ್ಕರೆ ಹಿಗ್ಗು ಇದ್ದು ಅವಳ ರೀತಿಯಂತೆಯೇ ಮಗುವೂ ನಡೆಯುತ್ತಿತ್ತೋ ಹಾಗೆ ನಾನೂ ನಿಮ್ಮ ದಾರಿಯನ್ನೇ ಪ್ರಶ್ನಿಸದೆ ಅನುಸರಿಸುತ್ತಿದ್ದೆ. ಆದರೆ ಈಗ ಹುಟ್ಟಿ ಪ್ರಪಂಚಕ್ಕೆ ಬಿದ್ದಿದೀನಿ. ನನ್ನದೇ ಸ್ವತಂತ್ರದ ಉಸಿರಾಡುತ್ತಾ ಇದ್ದೀನಿ. ನನ್ನ ಕಣ್ಣು ತೆರೆಯಿತು. ನನ್ನ ಕನಸೂ ಮಾಯವಾಯ್ತು. ಆದರೆ ಇದಕ್ಕೆ ಇಂಥ ದುರ್ಘಟನೆಯ ಪೆಟ್ಟಿನ ಬೆಲೆ ಕೊಡಬೇಕಾಯಿತು. ಹುಂ ! ಇದನ್ನು ಯೋಚಿಸಿ ಫಲವೇನು ? ಅಂತೂ ಮುಕ್ತಿಯು ಈಗಲಾದರೂ ಸಿಕ್ಕಿತಲ್ಲ. ಇನ್ನು ನನ್ನ ದಾರಿ ನನಗೆ. ಇದಲ್ಲ ನನಗೆ ಸ್ಥಳ. ( ಏಳುತ್ತಾನೆ )

**ಲಕ್ಷಮ್ಮ** : ಅಯ್ಯೋ ಮಗು ! ಇದೇನು ಅಂತೀಯಪ್ಪ ? ಏನು ಮಾಡುತ್ತೀಯಪ್ಪ ? ಮನೆ ಬಿಟ್ಟು ಎಲ್ಲಿ ಹೋಗುತ್ತೀಯೆ ?

**ರಾಮಚಂದ್ರ** : ಅಮ್ಮ, ಈಗ ನೋಡಿದರೆ ನನ್ನ ದೃಷ್ಟಿಯಲ್ಲಿ ಇದು ಮನೆಯಲ್ಲಾ. ಇಷ್ಟು ದಿನ ನಾನು ಇದ್ದ ಬಂದೀಖಾನೆ. ನೀವು ಕಾಣಿಸೋದು ತಂದೆ ತಾಯಿಗಳ ಹಾಗಲ್ಲ, ನನ್ನ 'ಜೇಲರ್'ಗಳ ಹಾಗೆ. ನೀವು ನಡೆಸಿದ ಹಾಗೆ. ಮಾಡಿಸಿದ ಹಾಗೆ ನಾನು ಮಾಡಿ ಮಾಡಿ ಸೋತಿದ್ದೀನಿ. ರೋಸಿ ಹೋಗಿದ್ದೀನಿ. ಇಲ್ಲಿ ಬಾಳೇ ಅಸಹ್ಯವಾಗಿದೆ.

**ಗುಂಡಪ್ಪ** : ಅಪ್ಪ, ಮಗು. ಇದು ನ್ಯಾಯವೆ ನಿನಗೆ— ಹೀಗೆ ಅನ್ನೋದು ?

**ರಾಮಚಂದ್ರ** : ಅದು ನಿಮ್ಮನ್ನು ನೋಯಿಸಿತೇನು ? ಹೋಗಲಿ ಅದು ಬೇಡ. ನಾನು ನಿಮ್ಮ ಬಂದಿ ಅಲ್ಲದೆ ಇದ್ದರೆ ಕೈಗೊಂಬೆಯಾಗಿದ್ದೆ

ಅನ್ನಿ. ಸರಿಯೆ ? ಇಷ್ಟು ಕಾಲವೂ, ನಿಮ್ಮ ಇಷ್ಟ ಬಂದ ಹಾಗೆ ಕುಣಿಸಿದಿರಿ. ನನ್ನ ವ್ಯಕ್ತಿತ್ವ ನನಗೆ ಈಗ ತಾನೆ ಕಾಣಿಸುತ್ತಾ ಇದೆ. ಇನ್ನು ಸಿಕ್ಕೋದಿಲ್ಲ ನಿಮ್ಮ ಕೈಗೆ- ಮೇಣವಾಗಿ, ಜೇಡಿಯಾಗಿ. ದೂರ ಇದ್ದುಬಿಡುತ್ತೀನಿ.

**ಲಕ್ಷಮ್ಮ :** ಅಯ್ಯೋ ಮಗು, ನಾವು ಹಾಕಿದ ಗೆರೆ ಮೀರದೆ ಇರುತ್ತಾ ಇದ್ದ ಆಗಿನ ಮಗು ಎಲ್ಲಿ, ಈಗ ಹೀಗೆಲ್ಲ ಆಡಿ ಮಾಡೋಕೆ ಸಿದ್ಧವಾಗಿರೋ ನೀನೆಲ್ಲಿ, ಯೋಚಿಸಿಕೊ.

**ರಾಮಚಂದ್ರ :** ಅದೇ ನಾನೂ ಹೇಳುತ್ತಾ ಇರೋದು. ಎರಡಕ್ಕೂ ಒಂದು ಜನ್ಮದಷ್ಟು ವ್ಯತ್ಯಾಸ. ನಿಮ್ಮ ಮುದ್ದಿನ ಮಗ, ಹಾಕಿದ ಗೆರೆ ಮೀರದ ಮಗ, ಆ ಮೂಢ ರಾಮಚಂದ್ರ ಇಂದಿಗೆ ಇಲ್ಲವಾದ.

**ಲಕ್ಷಮ್ಮ :** ರಾಮು, ರಾಮು !

**ಗುಂಡಪ್ಪ :** ಛೇ !

**ರಾಮಚಂದ್ರ :** ಹುಂ. ದಿಗ್ಮೂಢನಾಗಿದ್ದ ಅವನಿಗೆ ಈಗ ನೇಸರು ಕಂಡಿದೆ.

**ಗುಂಡಪ್ಪ :** ನಿನ್ನನ್ನು ಇಷ್ಟು ದಿನ ಸಾಕಿ ಸಲಹಿದ್ದಕ್ಕೆ........

**ರಾಮಚಂದ್ರ :** ಹ, ನೀವು ಬಹಳ ದಿನ ಕಾಪಾಡಿದಿರಿ.... ಬಹಳ ಬಹಳ ದಿನ. ಅದಕ್ಕೇ ನಾನು ತಪ್ಪಿಸಿಕೊಳ್ಳಬೇಕು ಅನ್ನೋದು.

**ಗುಂಡಪ್ಪ :** ವಿದ್ಯೆ, ಬುದ್ಧಿ ಕಲಿಸಿದ್ದಕ್ಕೆ....

**ರಾಮಚಂದ್ರ :** ಏನು ಕಲಿಸಿದಿರೋ ನೀವು. ಇಷ್ಟು ವರ್ಷ ಕೊಟ್ಟ ಶಿಕ್ಷಣ ನನ್ನನ್ನು ನನ್ನ ಕಾಲಿನ ಮೇಲೇ ನಿಲ್ಲಿಸದೆ ಇರುವಾಗ ಆ ಶಿಕ್ಷಣ ಎಂಥಾದ್ದು ? ಅದಕ್ಕೆ ಏನು ಬೆಲೆ ? ಅದು ಏನು ಪ್ರಯೋಜನ ? ಎಲ್ಲ ವ್ಯರ್ಥ ! ಅದನ್ನು ಇಲ್ಲಿ ಮುಂದುವರಿಸೋ ಇಷ್ಟ ಇಲ್ಲ. • ಇದನ್ನೆಲ್ಲ ತೊಳೆದು ಬಿಟ್ಟು ಬೇರೆ ಜೀವನವನ್ನು ಮೊದಲಾಗಿಸಬೇಕು. ಇಲ್ಲಿ ನಾನು ಕಲಿಯಬೇಕಾದದ್ದು ಏನನ್ನೂ ಕಲಿಯಲಾರೆ.

**ಗುಂಡಪ್ಪ :** ಇದೇಯೇನಪ್ಪ, ನಮ್ಮ ಬಗ್ಗೆ ನಿನಗೆ ಇರುವ ಕರ್ತವ್ಯ ?

**ರಾಮಚಂದ್ರ**: ಅದು ಅಲ್ಲದೆ ಇರಬಹುದು—ನಿಮ್ಮ ದೃಷ್ಟಿಯಿಂದ. ಆದರೆ ನೀವು ನನ್ನ ಬಗ್ಗೆ ನಿಮ್ಮ ಕರ್ತವ್ಯವನ್ನು ನಡೆಸಿದ ಬಗೆ ಹೇಗಿದೆ ಯೋಚಿಸಿ. ಅದರಿಂದ ನಾನು ಶುದ್ಧ ಮುಠ್ಠಾಳ ಆದೆ. ಆ ನಿರಪರಾಧಿ, ನಿರ್ಭಾಗ್ಯೆಯ ಬಗ್ಗೆ ನೀವು ಸಲ್ಲಿಸಿದ ಕರ್ತವ್ಯವೋ ?—ಅವಳನ್ನೆ ಕೊಂದಿತು. ಇನ್ನು ನೀವು ನಿಮ್ಮ ಬಗ್ಗೆ ಇತರರ ಕರ್ತವ್ಯವನ್ನು ನಿರೀಕ್ಷಿಸೋದು ಹೇಗೆ ? ಯಾವ ನ್ಯಾಯ ? ಆದರೂ ಕೇಳಿ. ನಾನು ನನ್ನ ತಿದ್ದಿಕೊಂಡು ಯೋಗ್ಯವಾಗಿ ಬಾಳೋದು ನಿಮ್ಮ ಬಗ್ಗೆ ನನಗಿರುವ ಮುಖ್ಯ ಕರ್ತವ್ಯ. ನಿಮ್ಮ ಮುಂದೆ ಕುಳಿತುಕೊಂಡು ಹುಳುವಿನ ಹಾಗೆ ಬಾಳೋದಲ್ಲ.

**ಲಕ್ಷ್ಮಮ್ಮ** : ಮಗು, ನಮ್ಮನ್ನು ಕೈ ಬಿಡಬೇಡಪ್ಪ. (ಕಣ್ಣೀರಿಡುತ್ತಾಳೆ)

**ರಾಮಚಂದ್ರ** : ನಿಮ್ಮ ಗೊಂಬೆಯಿಂದ ನಿಮಗೆ ಆಗಬೇಕಾದದ್ದು ಏನು ? ನನ್ನ ಕೈ ಗಟ್ಟಿಯಾಗಿದ್ದರೆ ಅಲ್ಲವೆ—ನಿಮ್ಮನ್ನು ಹಿಡಿಯೋದು ಬಿಡೋದು ? ಗಟ್ಟಿಯಾದಾಗ ನೋಡೋಣ, ಈ ವಿಚಾರ. ಇನ್ನು ಇಲ್ಲಿರೋದು ನನ್ನಿಂದ ಆಗದ ಮಾತು. ನಾನು ಹೊರ-ಪ್ರಪಂಚಕ್ಕೆ ಹೋಗಿ, ಶಕ್ತಿ ಸಂಪಾದಿಸಿ ಮನುಷ್ಯನಾಗಬೇಕು. ಅದಕ್ಕೆ ಯಾವ ಅಡ್ಡಿಯೂ ಬರುವಂತೆ ಇಲ್ಲ. ಪಂಜರದ ಗಿಣಿಯಾಗಿ ಬೆಳೆದ ಹಾಗೇ ನಾನು ಇನ್ನು ಬದುಕೋದಿಲ್ಲ; ಮರದ ಮೇಲಿನ ಕೋಗಿಲೆ ಹಾಗೆ, ಅಂತರಿಕ್ಷದ ಗರುಡನ ಹಾಗೆ ಆಗಬೇಕು.

**ಗುಂಡಪ್ಪ** : ಇನ್ನು ನಿನಗೆ ಬೇಕಾದ ಹಾಗೆ ಮಾಡುವಂತೆ, ಮಗು.

**ರಾಮಚಂದ್ರ** : ಹಾಗಾದರೆ ಈ ಮನೆ—ನನಗೆ ಜಿಗುಪ್ಸೆ ಹುಟ್ಟಿದ ಈ ಮನೆಯನ್ನು ಬಿಡೋದೇ ನಾನು ಮಾಡೋ ಮೊದಲ ಕೆಲಸ, ಅಡ್ಡಿ ಬರಬೇಡಿ ! ಹುಂ ! ಈ ಬಲೆಗೆ ನಾನು ಬೀಳೋದಿಲ್ಲ, ಈಗ, ಇನ್ನು.

**ಲಕ್ಷ್ಮಮ್ಮ** : ಮಗು, ಬೇರೆ ದಾರಿಯೇ ಇಲ್ಲವೆ ?

**ರಾಮಚಂದ್ರ** : ಇಲ್ಲ—ನನ್ನ ಶಕ್ತಿ ದೌರ್ಬಲ್ಯಗಳನ್ನು ತಿಳಿದುಕೊಳ್ಳೋದಿಕ್ಕೆ ತಪ್ಪನ್ನಾದರೂ ಮಾಡೋದಿಕ್ಕೆ ಸ್ವಾತಂತ್ರ್ಯ ಹೊಂದೋದಿಕ್ಕೆ ; ತಪ್ಪು, ಸರಿ ಅನ್ನೋದನ್ನ ನಾನೇ ನನ್ನ ಪ್ರಯತ್ನ, ಕಷ್ಟ ಇವುಗಳಿಂದ ತಿಳಿದುಕೊಳ್ಳೋದಿಕ್ಕೆ, ಹಿತಶತ್ರುತ್ವ ಮೂಗುದಾರ ಇವುಗಳಿಂದ ತಪ್ಪಿಸಿ

ಕೊಳ್ಳೋದಿಕ್ಕೆ, ವಿವೇಚನೆ ಧೈರ್ಯ ಕಲಿಯೋದಿಕ್ಕೆ, ಹೊಸ ಮನುಷ್ಯನಾಗಿ ಬಾಳೋದಿಕ್ಕೆ.

**ಗುಂಡಪ್ಪ :** ಮಗು ! ಮತ್ತೊಂದು ಸಲ ಯೋಚಿಸಿ....

**ರಾಮಚಂದ್ರ :** ನನ್ನ ನಿರ್ಧಾರ ಆಗಿಹೋಗಿದೆ. ಬದಲಾಯಿಸೋದಿಲ್ಲ. ನನ್ನ ಬರಿ ತಡೆಗಟ್ಟಬೇಡಿ. ಪ್ರಯೋಜನ ಇಲ್ಲ. ಇಗೋ ರೂಪಾಯಿ. ( ನೋಟುಗಳನ್ನು ಕೆಳಗೆ ಹಾಕುತ್ತಾನೆ. ) ಇಗೋ ಈ ಉಂಗರವೂ ನಿಮಗೆ ಉಪಯೋಗ ಆಗಬಹುದು. ( ತೆಗೆದು ಕೆಳಗೆ ಹಾಕುತ್ತಾನೆ. )

**ಗುಂಡಪ್ಪ :** ಅದಾದರೂ ಇಟ್ಟುಕೊಳ್ಳಪ್ಪ—ಹೋಗಲೇಬೇಕಾದರೆ.

**ರಾಮಚಂದ್ರ :** ಇಲ್ಲ ನನಗೆ ಇಲ್ಲಿಯದು ಸಾಧ್ಯವಾದಷ್ಟೂ ಏನೂ ಬೇಡ. ನನ್ನ ದೇಹ ಕೊಡೋದಿಕ್ಕೆ ಅಂತೂ ಆಗೋದಿಲ್ಲ. ನಾನು ಇಲ್ಲಿ ಕಲಿತ ಬುದ್ಧಿಯನ್ನು ಬಿಟ್ಟು ಹೋಗೋದು ಸಾಧ್ಯವಿದ್ದರೆ ಎಷ್ಟು ಸಂತೋಷದಿಂದ ಹಾಗ್ಮಾಡುತ್ತಿದ್ದೆ ! ಆದರೆ ಆ ಭಾರ ಹೊತ್ತುಕೊಂಡೇ ಹೋಗಿ ಕ್ರಮಕ್ರಮವಾಗಿ ಕಳೆದುಕೋಬೇಕು, ಅಷ್ಟೆ. ವಿಧಿಯಿಲ್ಲ. ( ಬಾಗಿಲಿನ ಕಡೆಗೆ ಹಜ್ಜೆಯಿಡುತ್ತಾನೆ. )

**ಲಕ್ಷಮ್ಮ :** ( ಗೋಳಾಡುತ್ತಾ ) ಮಗು ! ಮಗು ! ಈ ಅಮಾವಾಸ್ಯೆ ಕತ್ತಲೆಯಲ್ಲಿ....

**ರಾಮಚಂದ್ರ :** ಇಲ್ಲಿಗಿಂತ ಕತ್ತಲೆಯೆ ಹೊರಗೆ—ಎಲ್ಲಾದರೂ ನನಗೆ ? ( ಹೋಗುತ್ತಾನೆ )

— ತೆರೆ —

# ಮನೋಹರ ಗ್ರಂಥಮಾಲೆ

## — ಪರಿಚಯ ಪತ್ರ —

**ಪ್ರಾರಂಭ** :

ಈ ಗ್ರಂಥಮಾಲೆಯು ೧೯೩೩ನೆಯ **ಅಗಷ್ಟ** ೧೫ಕ್ಕೆ (ಶ್ರೀ. ಅರವಿಂದರ ಜನ್ಮದಿನವನ್ನು ನೆನೆದು) ಪ್ರಾರಂಭವಾಗಿದೆ.

**ಪ್ರಕಟಿಸುವ ಸಾಹಿತ್ಯ :**

ಕಾದಂಬರಿ, ಸಣ್ಣಕತೆ, ನಾಟಕ, ಏಕಾಂಕ, ಹರಟೆ, ದಿನಚರಿ ಮೊದಲಾದ ಸರಸಸಾಹಿತ್ಯವನ್ನೆ ಈ ಗ್ರಂಥಮಾಲೆಯು ನಿಯತಕಾಲಾವಕಾಶದಲ್ಲಿ ಪ್ರಕಟಿಸುತ್ತಿದೆ.

ಅನುವಾದ, ಭಾಷಾಂತರಗಳಿಗಿಂತಲೂ ಸ್ವತಂತ್ರಗ್ರಂಥಗಳನ್ನೆ ಹೆಚ್ಚಾಗಿ ಪ್ರಕಟಿಸುತ್ತಿದೆ

ಕಾವ್ಯ-ವಿಮರ್ಶೆ-ವಿಜ್ಞಾನ-ವಿಚಾರ ಸಾಹಿತ್ಯವನ್ನೂ ಗ್ರಂಥಮಾಲೆಯು **ಬಿಡಿಮುತ್ತುಗಳೆಂದು** ಆಗೀಗ ಪ್ರಕಟಿಸುತ್ತಿದೆ.

**ನಮ್ಮ ಸಲಹೆಗಾರರು :**

ಶ್ರೀಯುತರಾದ ದ. ರಾ. ಬೇಂದ್ರೆ, ವಿ. ಕೃ. ಗೋಕಾಕ, ರಂ. ಶ್ರೀ. ಮುಗಳಿ ಇವರು ಈ ಗ್ರಂಥಮಾಲೆಗೆ ಪ್ರಾರಂಭದಿಂದಲೂ ಸಾಹಿತ್ಯವಿಷಯದಲ್ಲಿ ಸಲಹೆಗಾರರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ.

**ನಮ್ಮ ಬರೆಹಗಾರರು :**

ಇಡಿ ಕನ್ನಡ ನಾಡಿನ ಸಿದ್ಧಹಸ್ತ ಬರೆಹಗಾರರೆಲ್ಲರೂ ಈ ಗ್ರಂಥಮಾಲೆಗಾಗಿ ಗ್ರಂಥಗಳನ್ನು ಬರೆದುಕೊಟ್ಟು ಅದರ ಗೌರವವನ್ನೂ ಕೀರ್ತಿಯನ್ನೂ ಹೆಚ್ಚಿಸಿದ್ದಾರೆ; ಅದರ ಸಾಹಿತ್ಯಸ್ಥಾನವನ್ನು ಉನ್ನತವಾಗಿಸಿದ್ದಾರೆ.

**ಹೊಸ ವರ್ಷ :**

ಗ್ರಂಥಮಾಲೆಯ ಹೊಸ **ವರ್ಷವು ಅಗಷ್ಟ** ತಿಂಗಳಿಂದ ಪ್ರಾರಂಭವಾಗುತ್ತದೆ; ಜುಲೈ ತಿಂಗಳಿಗೆ ಮುಗಿಯುತ್ತದೆ.

**ಚಂದಾದಾರರಾಗುವದು :**

ವರ್ಷದಲ್ಲಿ ಯಾವಾಗ ಬೇಕಾದರೂ ಹೊಸದಾಗಿ ಚಂದಾದಾರರಾಗಬಹುದು. ಆದರೆ ಆ ಹಿಂದೆ ಪ್ರಕಟವಾದ ಆ ವರ್ಷದ ಗ್ರಂಥಗಳನ್ನು— ಆಗಷ್ಟದಿಂದಲೆ ಪ್ರಾರಂಭವೆಂದು ತಿಳಿದು— ಅವರಿಗೆ ಕಳಿಸಿ ಕೊಡಲಾಗುವುದು.

ಚಂದಾಹಣವನ್ನು ಮುಂಗಡವಾಗಿ ಕೆಳಗೆ ಕಾಣಿಸಿದ ವಿಳಾಸಕ್ಕೆ ಮನಿಯಾರ್ಡರ ಮೂಲಕ ಕಳುಹಿಸಿಕೊಡಬೇಕು.

ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

**ಹಿಂದಿನ ಗ್ರಂಥಗಳು :**

ಗ್ರಂಥಮಾಲೆಯು ನಡೆಯುವ ವರ್ಷದ ಗ್ರಂಥಗಳನ್ನು ಬಿಟ್ಟು ಹಿಂದಿನ ಗ್ರಂಥಗಳಿಗೆ ಚಂದಾಸವಲತ್ತಿಲ್ಲ. ಅವನ್ನು ಮುಖಬೆಲೆ ಕೊಟ್ಟು ಕೊಳ್ಳಬೇಕಾಗುವದು.

**ಅಜೀವಚಂದಾ :**

ಗ್ರಂಥಮಾಲೆಗೆ **ಒಂದೇ ಸಲಕ್ಕೆ ೧೫೦ ರೂಪಾಯಿಗಳನ್ನು** ಸಲ್ಲಿಸಿ ಆಜೀವ ಚಂದಾದಾರರಾಗಬಹುದು. ಅವರಿಗೆ ಅವರ ಆಜನ್ಮಪರ್ಯಂತ ಗ್ರಂಥಮಾಲೆಯಲ್ಲಿ ಪ್ರಕಟವಾಗುವ ಗ್ರಂಥಗಳನ್ನು ಹಾಗೆಯೆ ಸಲ್ಲಿಸಲಾಗುವದು.

ಗ್ರಂಥಮಾಲೆಯ ಬಿಡಿಪುಸ್ತುಗಳನ್ನು ವಿಶೇಷ ಸವಲತ್ತಿನಿಂದ ಅವರಿಗೆ ಪೂರೈಸಲಾಗುವುದು.

**ವಾರ್ಷಿಕ ಚಂದಾ :**

ಗ್ರಂಥಮಾಲೆಯ ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ **ಆರು ರೂಪಾಯಿ ಎಂಟಾಣೆ** ( ೬–೮–೦ ) ಮಾತ್ರ ಇದೆ.

ಗ್ರಂಥಮಾಲೆಯ ಕಾರ್ಯಾಲಯದಲ್ಲಿಯೆ ಬಂದು ತೆಗೆದುಕೊಂಡು ಹೋಗಲಪೇಕ್ಷೆಯುಳ್ಳವರಿಗೆ ಮಾತ್ರ (ಅಂಚೆವೆಚ್ಚ ಬಿಟ್ಟು) ಐದು ರೂಪಾಯಿ ಎಂಟಾಣೆ ( ೫–೮–೦ ) ಮಾತ್ರ ತೆಗೆದುಕೊಳ್ಳಲಾಗುವುದು.

**ವರ್ಷಕ್ಕೆ ಕೊಡುವ ಪುಟಗಳು :**

ಗ್ರಂಥಮಾಲೆಯಿಂದ ಒಂದು ವರ್ಷದಲ್ಲಿ ಚಂದಾದಾರರಿಗೆ ಕ್ರಾ. ಅ. ೯೦೦ ಪುಟಗಳಷ್ಟು ಸರಸಸಾಹಿತ್ಯವನ್ನು ಸಲ್ಲಿಸಲಾಗುತ್ತದೆ.

**ಸೂಚನೆ :**

'ಬೇಡಿಕೆ'ಯನ್ನು ಕೊಡುವಾಗ '**ಸದ್ಯಕ್ಕೆ ಮಾರಾಟಕ್ಕೆ ದೊರೆಯುವ ಗ್ರಂಥಗಳ**' ಪಟ್ಟಿಯೊಳಗಿಂದಲೇ ಆಯ್ದು ಕಳುಹಿಸಬೇಕು.

**— ಪುಸ್ತಕ ವ್ಯಾಪಾರಿಗಳಿಗೆ ಮಾತ್ರ —**

ಪುಸ್ತಕ ವ್ಯಾಪಾರಿಗಳು ತಮ್ಮ ಬೇಡಿಕೆಯನ್ನು ಕಳಿಸುವಾಗ 'ಸದ್ಯಕ್ಕೆ ಮಾರಾಟಕ್ಕೆ ದೊರೆಯುವ ಗ್ರಂಥಗಳ' ಪಟ್ಟಿಯೊಳಗಿಂದ ಮಾತ್ರ **ಆಯ್ದು** ಕಳಿಸಬೇಕು.

**ಬೇಡಿಕೆಯೊಡನೆ ಮುಂಗಡ ಹಣ ಕಳುಹಿಸಬೇಕು.**

ಬೇಡಿಕೆಯ ಒಟ್ಟುಬೆಲೆಯ ಮೇಲೆ ೧೨½% ಕಮಿಶನ್ ಕೊಡಲಾಗುವುದು.

**೧೫೦ ರೂಪಾಯಿಗಳ ಮೇಲ್ಪಟ್ಟು ಬೇಡಿಕೆ ಕಳುಹಿಸಿದಲ್ಲಿ** Free Delivery **ಕೊಡುವ** ಸವಲತ್ತಿದೆ.

ಪ್ಯಾಕಿಂಗ್, ಅಂಚೆವೆಚ್ಚ ಪ್ರತ್ಯೇಕ.

**ವಿಳಾಸ :**

ಸಂಪಾದಕ

**ಮನೋಹರ ಗ್ರಂಥಮಾಲಾ**

**ಧಾರವಾಡ**

**ಮನೋಹರ ಗ್ರಂಥಮಾಲೆಯ ಶತಗ್ರಂಥಪೂರ್ತಿಯಾಗುವ**

ಈ ವರುಷಕ್ಕೆ

**ಚಂದಾದಾರರಿದ್ದವರಿಗೆ—ಮತ್ತು—ಚಂದಾದಾರರಾಗುವವರಿಗೆ**

**ಒಂದು ಸುವರ್ಣಪ್ರಸಂಗ! ವಿಶೇಷ ಸೌಕರ್ಯ!**

# ಆರು ರೂಪಾಯಿ ಎಂಟಾಣೆಯಲ್ಲಿಯೆ

## ಹದಿನೈದುನೂರು ಪುಟಗಳ ಮನೋಹರ ಸರಸಸಾಹಿತ್ಯ!

**ಹೊಸದಾಗಿ ಚಂದಾದಾರರಾಗುವವರು**

**ಈ ಸುಪ್ರಸಂಗವನ್ನು ಕಳೆದುಕೊಳ್ಳಬಾರದು**

ಇದೇ ವರುಷದಲ್ಲಿ ಮನೋಹರ ಗ್ರಂಥಮಾಲೆಯು ಶತಗ್ರಂಥಪೂರ್ತಿಯಾಗುವುದನ್ನು ನೆನೆದು, ನಮ್ಮ ಬರೆಹಗಾರರು ಕೊಟ್ಟ ಉತ್ಸಾಹದ ಆಶ್ವಾಸನಗಳನ್ನು ನಂಬಿ, ನಮ್ಮ ಗ್ರಾಹಕರು ಈ ವರೆಗೂ ಸಲ್ಲಿಸುತ್ತ ಬಂದ ಪ್ರೋತ್ಸಾಹವನ್ನನುಲಕ್ಷಿಸಿ, ಕನ್ನಡ ಸಾಹಿತ್ಯಪ್ರಯೋಗಮಂದಿರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಸಾಹಿತ್ಯಜ್ಞರ ಸಹಕಾರ ಪಡೆದು ಪ್ರಾರಂಭಿಸುವ ಸಾಹಸಕ್ಕೆ ಕೈಹಾಕಿದ್ದೇವೆ. ಸಾಹಿತ್ಯನಿರ್ಮಾಣದ ಈ ಪ್ರಯೋಗದಲ್ಲಿ ಹುಟ್ಟಬಹುದಾದ ಕೃತಿಗಳ ಕಲ್ಪನೆ ನಮಗೂ ಇಲ್ಲ; ಪ್ರಯೋಗ ನಡೆಯಿಸಿದ ಆ ಸಾಹಿತ್ಯಜ್ಞರಿಗೂ ಇರಲಿಕ್ಕಿಲ್ಲ. ಆದರೆ ಉತ್ತಮ ಕೃತಿನಿರ್ಮಾಣಕ್ಕೆ ಈ ಪ್ರಯೋಗ ಅನುವುಮಾಡಿಕೊಟ್ಟೀತು ಎಂಬ ಆಶೆ ನಮ್ಮನ್ನು ಈ ದಾರಿಯಲ್ಲಿ ನಡೆಯಿಸಿದೆ.

**ನಮ್ಮ ಗ್ರಾಹಕರಿಗೆ ವಿಶೇಷಸೂಚನೆ :**

ಸಾಹಿತ್ಯನಿರ್ಮಾಣದ ರೂಪರೇಷೆಯನ್ನು ಓದಿನೋಡಿ ಅದರಲ್ಲಿ ಕಾಣಿಸಿದ ಎಲ್ಲ ಗ್ರಂಥಗಳೂ ಇದೇ ವರುಷದಲ್ಲಿ ಬರುತ್ತವೆಂದಾಗಲಿ, ಅದೇ ಕ್ರಮದಲ್ಲಿ ಬರುತ್ತವೆಂದಾಗಲಿ ದಯವಿಟ್ಟು ತಿಳಿದುಕೊಳ್ಳಬಾರದು.

ಅದರೊಳಗಿಂದ ಈ ವರುಷದಲ್ಲಿ (೧೯೪೯ ರ ಅಗಸ್ಟದಿಂದ ೧೯೫೦ ಜುಲೈ ಅಂತ್ಯದೊಳಗಾಗಿ) ಒಟ್ಟು ೧೫೦೦ ಪುಟಗಳನ್ನು ನಮ್ಮ ಗ್ರಾಹಕರಿಗೆ ಸಲ್ಲಿಸುತ್ತೇವೆ.

ಈ ಸಲ ನಿಯತಾವಕಾಶದ ನಿರ್ಬಂಧವನ್ನೂ ಸ್ವಲ್ಪಮಟ್ಟಿಗೆ ಮೀರ ಬೇಕಾಗಿದ್ದರೂ ಸಲ್ಲಿಸಬೇಕಾದ ಒಟ್ಟು ಪುಟಗಳನ್ನು ಅಗಸ್ಟ ತಿಂಗಳ ಪ್ರಾರಂಭದೊಳಗಾಗಿ ಸಲ್ಲಿಸಿಯೇ ಸಲ್ಲಿಸುತ್ತೇವೆ.

ಈಗ ತೋರಿಸಿದ ಸಾಹಿತ್ಯನಿರ್ಮಾಣದ ಈ ರೂಪರೇಷೆಯನ್ನು-ತೆರೆಯ ಹಿಂದೆ ಒಳಗೆ ಏನು ನಡೆದಿದೆ, ಹೇಗೆ ನಡೆದಿದೆ, ಯಾರು ಯಾರು ಯಾವ ಯಾವ ಕೃತಿನಿರ್ಮಾಣ ನಡೆಯಿಸಿದ್ದಾರೆ—ಎಂಬುದನ್ನು ನಮ್ಮ ಗ್ರಾಹಕರ ಕಲ್ಪನೆಗೆ ತಂದುಕೊಡುವುದಕ್ಕಾಗಿ ಇಲ್ಲಿ ಪ್ರಕಟಿಸಲಾಗಿದೆ.


**ಮನೋಹರ ಗ್ರಂಥಮಾಲೆಯಲ್ಲಿ**

ದ. ರಾ. ಬೇಂದ್ರೆಯವರ

**ನಾಟಕಗಳು**

ಮಹಾಲಕ್ಷ್ಮಿ, ಮಂದೀಮದಿವೆ, ಅಂಗಿವ್ಯಾಲಂಗಿ, ಕಪ್ಪುಹೆಂಡತಿ, ಹೆಣ್ಣಿನಾಸೆ, ಜಾತ್ರೆ, ನಗೆಯಹೊಗೆ, ಉದ್ಧಾರ ಮೊದಲಾದ ಅವರ ಎಲ್ಲ ನಾಟಕಗಳನ್ನೂ ಸೇರಿಸಿ **ಒಂದೇ ಸಂಪುಟದಲ್ಲಿ** ಮನೋಹರ ಗ್ರಂಥಮಾಲೆಯ ಕುಸುಮವನ್ನಾಗಿ ಪ್ರಕಟಿಸುತ್ತೇವೆ.

**ಬೇಗನೇ ಪ್ರಕಟವಾಗುವುದು**

# ಗ್ರಂಥಮಾಲೆಯಲ್ಲಿ ಮುಂದೆ ಬರುವ
# ಸಾಹಿತ್ಯ ನಿರ್ಮಾಣದ ರೂಪರೇಷೆ

## ಕಾದಂಬರಿಗಳು

೧ **ಮಾನಸಪುತ್ರ** (ಸಾಮಾಜಿಕ ಕಾದಂಬರಿ) .... ದ. ರಾ. ಬೇಂದ್ರೆ
೨ **ಮಿದಿನಾಪುರಮಲ್ಲ** (ಸಾಹಸ ಜೀವನಚಿತ್ರ) ... 'ಗುರುರಾಜ'
೩ **ತಾಯಿ** ('ಪರ್ಲ್‌ಬಕ್ಕ'ಳ ಕಾದಂಬರಿಯ ಆಧಾರದಿಂದ) ಕೃಷ್ಣಕುಮಾರ
೪ **ಸಮರಸವೇ ಜೀವನ** (ಇಜ್ಜೋಡಿನಕೊನೆಯಭಾಗ) ವಿ. ಕೃ. ಗೋಕಾಕ
೫ **ನಟಸಾರ್ವಭೌಮ** (ಪೂರ್ತಿಮಾಡಿದ್ದು) .... 'ಕ್ಷ'
೬ **ಮೂಕಬಲಿ** (ಸಾಮಾಜಿ ಕಾದಂಬರಿ) .... ಜಡಭರತ.
೭ **ಸಂಪಾದಕ** (ಕಾದಂಬರಿ) ಜಡಭರತ.

ಅಲ್ಲದೆ

ಕನ್ನಡಸಾಹಿತ್ಯ ಪ್ರಯೋಗಮಂದಿರದಲ್ಲಿ
ಸಾಹಿತ್ಯಜ್ಞರ ಪ್ರಯೋಗಫಲವಾಗಿ
**'ಒಂದು ಕಾದಂಬರಿ'**
ಹೊರಕ್ಕೆ ಬರಲಿದೆ.

ಮತ್ತು

ಐತಿಹಾಸಿಕ ಒಂದು ಸ್ವತಂತ್ರ ಮಹಾಕಾದಂಬರಿಯೂ
ಮುದ್ರಣಕ್ಕಾಗಿ ಸಿದ್ಧವಾಗುತ್ತಲಿದೆ.

**ನಾಟಕಗಳು :**

೯ **ಮಹಾಲಕ್ಷ್ಮಿ ಮತ್ತು ಮುಂದೀ ಮದಿವೆ** .... ದ. ರಾ. ಬೇಂದ್ರೆ
೧೦ **ಪಂಜು** .... .... .... ಜಡಭರತ
೧೧ **ಭೃಗು** .... .... .... ಜಡಭರತ
೧೨ **ಅಂಗಿ ವ್ಯಾಲಂಗಿ** .... .... ದ. ರಾ. ಬೇಂದ್ರೆ
೧೩ **ಕಪ್ಪು ಹೆಂಡತಿ** .... .... ದ. ರಾ. ಬೇಂದ್ರೆ
೧೪ **ಹೆಣ್ಣಿನಾಸೆ** .... .... .... ದ. ರಾ. ಬೇಂದ್ರೆ

ಅಲ್ಲದೆ

ಕಲೋಪಾಸಕ ಮಂಡಲದವರು ತಾವು ರಂಗಭೂಮಿಯ ಮೇಲೆ ಈಗಾಗಲೆ ಪ್ರಯೋಗ ಮಾಡಿದ, ಮಾಡಲಿರುವ (ಪ್ರಯೋಗ ವಾದ ನಂತರ) ಸುಮಾರು ಇಪ್ಪತ್ತೈದು **"ಆಶು ನಾಟಕಗಳನ್ನು"** ಸೇರಿಸಿ ಒಂದು ಸಂಗ್ರಹ ಮಾಡಿ ನಮ್ಮ ಗ್ರಂಥಮಾಲೆಯಲ್ಲಿ ಪವಣಿಸಲು ಕೊಡಲೊಪ್ಪಿ ಸಿದ್ಧತೆ ನಡೆಯಿಸಿದ್ದಾರೆ.

ಮತ್ತು

ಲಕ್ಷ್ಮಣರಾವ ಬೇಂದ್ರೆ, ಎಚ್. ಬಿ. ಕುಲಕರ್ಣಿ, ಆರ್. ವಿ. ಕುಲಕರ್ಣಿ, ಎ. ಎನ್. ಮೂರ್ತಿರಾವ್, ಇವರೂ ಒಪ್ಪಿ ನಾಟಕಗಳನ್ನು ಬರೆಯುವುದರಲ್ಲಿ ತೊಡಗಿದ್ದಾರೆ.

**ಕತೆಗಳು :**

೧೫ **ಮೊದಲ ಹೂ** .... .... ಜಡಭರತ
೧೬ **ನಾನು—ನನ್ನದು** .... .... ಜಡಭರತ
೧೭ **ಜಡಭರತನ ದಿನಚರಿ** .... ಜಡಭರತ
೧೮ **ಚೀನದ ಬಾಳು-ಬದುಕು** .... ದ. ರಾ. ಬೇಂದ್ರೆ ಮತ್ತು ಗುಂಡಪ್ಪ

**ನಡೆದು ಬಂದ ದಾರಿ :**

ಈ ವರೆಗೆ ಕನ್ನಡ ಸಾಹಿತ್ಯ ನಡೆದು ಬಂದ ದಾರಿಯನ್ನು ಗುರುತಿಸಿ ತೋರಿಸುವ ಒಂದು ( ಕ್ರೌ. ೪ ದ) ಒಂದು ಸಾವಿರ ಪುಟದ ವಿಶೇಷ-ಸಾಹಿತ್ಯ-ಸಂಪುಟವನ್ನು ಶ್ರೀಮಾನ್ ದ. ರಾ. ಬೇಂದ್ರೆಯವರ ಮುಖ್ಯ ಸಂಪಾದಕತ್ವದಲ್ಲಿ ಮನೋಹರ ಗ್ರಂಥಮಾಲೆಯ ಶತ ಗ್ರಂಥಪೂರ್ತಿಯ ನೆನಪಿಗಾಗಿ ಪ್ರಕಟಿಸುವದನ್ನು ನಿಶ್ಚಯಿಸಲಾಗಿದೆ.

---


**ಮನೋಹರ ಗ್ರಂಥಮಾಲೆಯ ಬಿಡಿಮುತ್ತು!**

**ಅಚ್ಚಿನಲ್ಲಿ !**

ವರಕವಿ

**ಅಂಬಿಕಾತನಯದತ್ತರ**

# ಕಾವ್ಯಪ್ರವಾಹ

**ಒಂದೇ ಸಂಪುಟದಲ್ಲಿ, ಈ ವರೆಗಿನ ಅವರ**

**ಕವನಗಳ ಸಮಗ್ರ ಸಂಗ್ರಹ !**

**ಶ್ರೀಮಾನ್ ವಿ. ಕೃ. ಗೋಕಾಕರು**

ಬರೆದ ವ್ಯಕ್ತಿಪರಿಚಯ ಕಾವ್ಯಪರಿಚಯಗಳೊಡನೆ.

**ಸುಮಾರು ಒಂದು ಸಾವಿರ ಪುಟಕ್ಕೂ ಮಿಕ್ಕುತ್ತದೆ.**

# ಸದ್ಯಕ್ಕೆ ಮಾರಾಟಕ್ಕೆ ದೊರೆಯುವ ಗ್ರಂಥಗಳು

## ಕಾದಂಬರಿಗಳು

| | | | |
|---|---|---|---|
| ೧. | ಧರ್ಮನೆರೆ | ಜಡಭರತ | ೨—೦-೦ |
| ೨. | ಇಜ್ಜೋಡು ೧,೨,೩,೪,೫ | ವಿ ಕೃ. ಗೋಕಾಕ | ೧೮-೧೬-೦ |
| ೩. | ನಿಸರ್ಗ | ಮಿರ್ಜಿ ಅಣ್ಣಾರಾಯ | ೩—೮-೦ |
| ೪. | ಅನಂತ | ಸತ್ಯಬೋಧ | ೧—೪-೦ |
| ೫. | ಭಗ್ನ ಮಂದಿರ | ಹೇಮಂತ | ೪—೮-೦ |
| ೬. | ರಾಷ್ಟ್ರಪುರುಷ | ಮಿರ್ಜಿ ಅಣ್ಣಾರಾಯ | ೭—೦-೦ |
| ೭. | ಅನ್ನ | ರಂ. ಶ್ರೀ. ಮುಗಳಿ | ೪—೦-೦ |
| ೮. | ಕಾರಣಪುರುಷ | ರಂ ಶ್ರೀ. ಮುಗಳಿ | ೧—೮-೦ |
| ೯. | ಮುನಿಯನ ಮಾದರಿ | ಕೆ. ಎ. ಎನ್. ರಾವ್ | ೨-೧೨-೦ |
| ೧೦. | ಜಡಭರತನ ಕನಸುಗಳು | ಜಡಭರತ | ೧—೮-೦ |
| ೧೧. | ಗಂಗಾಸಾನಿ | ಗಿರಿಮಾತಾ | ೧-೧೨-೦ |
| ೧೨. | ಔರಂಗಜೇಬ | ಕೆರೂರ ವಾಸುದೇವಾಚಾರ್ಯ. | ೩—೦-೦ |
| ೧೩. | ವಾಲ್ಮೀಕಿ ವಿಜಯ | ಕೆರೂರ ವಾಸುದೇವಾಚಾರ್ಯ. | ೧—೦-೦ |

## ನಾಟಕಗಳು

| | | | |
|---|---|---|---|
| ೧೪. | ಜಯಶ್ರೀ | ಚಿ. ಸದಾಶಿವಯ್ಯ | ೨—೪-೦ |
| ೧೫. | ಮಿಂಚಿನ ಹುಡಿ | ಕೃಷ್ಣಕುಮಾರ | ೨—೮-೦ |
| ೧೬. | ಎತ್ತಿದ ಕೈ | ರಂ. ಶ್ರೀ. ಮುಗಳಿ | ೧-೧೪-೦ |
| ೧೭. | ಯುಗಾಂತರ | ವಿ. ಕೃ. ಗೋಕಾಕ | ೦-೧೬-೦ |
| ೧೮. | ಬಿತ್ತಿದ ಬೆಳೆ | ಕೋ. ಶಿ ಕಾರಂತ | ೧—೦-೦ |
| ೧೯. | ಪರಿವರ್ತನ | ಲಕ್ಷ್ಮಣರಾವ ಬೇಂದ್ರೆ | ೦-೧೬-೦ |
| ೨೦. | ವೇಣುಮಾವ | ಪ ಸೀತಾದೇವಿ | ೦-೧೨-೦ |
| ೨೧. | ಆಶುನಾಟಕಗಳು | ಬೇರೆ ಬೇರೆಯವರು | ೦-೧೨-೦ |
| ೨೨. | ವಿಮರ್ಶಕ ವೈದ್ಯ | ವಿ. ಕೃ. ಗೋಕಾಕ | ೦—೬-೦ |
| ೨೩. | ನಲದಮಯಂತಿ | ಕೆರೂರ ವಾಸುದೇವಾಚಾರ್ಯ. | ೧—೮-೦ |
| ೨೪. | ಮಗು | ಕೆ. ಎ. ಎನ್. ರಾವ್ | ೧—೮-೦ |

**ಇತರ**


೨೫. ಸುಳುವು ಹೊಳವು (ಪ್ರಬಂಧಗಳು) ಬೇರೆಬೇರೆಯವರು ೧—೮—೦

೨೬. ಕೆನ್ಸಿಂಗ್‌ಟನ್ ಪಾರ್ಕ್ (ಕತೆ-ಹರಟೆ-ಏಕಾಂಕ ಸಂಗ್ರಹ) ೧—೮—೦

೨೭ ಬಹುಮಾನ ಪಡೆದ ಬರೆಹಗಳು ( ,, ,, ) .... ೧—೧೨—೦

೨೮. ಸಾಹಿತ್ಯ ಸಂಶೋಧನ (ವಿಮರ್ಶನಾತ್ಮಕ) ದ.ರಾ.ಬೇಂದ್ರೆ ೨—೮—೦

೨೯. ದತ್ತವಾಣಿ (ವಿಮರ್ಶಾತ್ಮಕ) ಮಿರ್ಜಿ ಅಣ್ಣಾರಾಯ .... ೧—೪—೦

೩೦. ಮಾತೃವಾಣಿ (ಆಧ್ಯಾತ್ಮಿಕ) ಶಿಶು ಮಧುರಚೆನ್ನ .... ೧—೪—೦

೩೧. ಬಾಸಿಗ (ಕವನ ಸಂಗ್ರಹ) ರಂ. ಶ್ರೀ. ಮುಗಳಿ .... ೧—೪—೦

೩೨. ಸಮುದ್ರಗೀತಗಳು (ಕವನ ಸಂಗ್ರಹ) ವಿ. ಕೃ. ಗೋಕಾಕ ೧—೪—೦

೩೩. ಸಾಹಿತ್ಯ-ವಿಮರ್ಶೆ (ದ. ರಾ. ಬೇಂದ್ರೆ) .... ೧—೮—೦

೩೪. ಯುಗಪ್ರವರ್ತಕ ಬಸವಣ್ಣ (ಚಿಂತಾಮಣಿ) .... ೧—೦—೦

---

**ಮನೋಹರ ಗ್ರಂಥಮಾಲೆಯ ಬಿಡಿಮುತ್ತು!**

**ಅಚ್ಚಿಗಾಗಿ ಸಿದ್ಧವಾಗುತ್ತಲಿದೆ!**

**ಶ್ರೀಮಾನ್ ದ. ರಾ. ಬೇಂದ್ರೆಯವರ**

ಮುಖ್ಯ ಸಂಪಾದಕತ್ವದಲ್ಲಿ

# ನಾಟಕ-ರಂಗ-ಪ್ರಯೋಗ

ಎಂಬ

**ಸುಮಾರು (ಕ್ರಾ. ದ) ಸಾವಿರ ಪುಟದ**

**ಸಚಿತ್ರ ಸಂಪುಟವನ್ನು**

ಕಲೋಪಾಸಕ ಮಂಡಲದವರು ತಯಾರಿಸುತ್ತಲಿದ್ದಾರೆ!

# ಬೇಗನೆ ಪ್ರಕಟವಾಗಲಿರುವ

## ಎರಡನೆಯ ಆವೃತ್ತಿಗಳು

★

| | | | |
|---|---|---|---|
| ೧ | ಕುರಿಹಿಂಡು | (ವಿಡಂಬನಗಳು) | ಜಲಧರ |
| ೨ | ಹೂಬಾಣಗಳು | (ಹಾಸ್ಯ ಪ್ರಬಂಧಗಳು) | ಪ. ರಮಾನಂದ |
| ೩ | ತುಟಿಮೀರಿದುದು | (ಹರಟೆಗಳು) | ರಾ. ಶಿ. |
| ೪ | ನಿರಾಭರಣ ಸುಂದರಿ | (ಕತೆ-ಹರಟೆಗಳು) | ದ. ರಾ. ಬೇಂದ್ರೆ |
| ೫ | ನವಿಲುಗರಿ | (ಕತೆಗಳ ಸಂಗ್ರಹ) | ಬೇರೆಬೇರೆಯವರು |
| ೬ | ಕೋಲ್ಮಿಂಚು | (ಏಕಾಂಕ ಸಂಗ್ರಹ) | ಬೇರೆಬೇರೆಯವರು |
| ೭ | ಸೋಲೋ ಗೆಲುವೋ | (ಕತೆಗಳು) | ದೇವುಡು |
| ೮ | ಸಮುದ್ರದಾಚೆಯಿಂದ | (ದಿನಚರಿ) | ಗೋಕಾಕ |
| ೯ | ಜನನಾಯಕ | (ನಾಟಕ) | ಗೋಕಾಕ |
| ೧೦ | ಗಾಳಿಗೋಪುರ | (ಕಾದಂಬರಿ) | ನಾ. ಕಸ್ತೂರಿ |
| ೧೧ | ಚಕ್ರದೃಷ್ಟಿ | (ಕಾದಂಬರಿ) | ನಾ. ಕಸ್ತೂರಿ |
| ೧೨ | ಬಾಳುರಿ | (ಕಾದಂಬರಿ) | ಶ್ರೀ. ಮುಗುಳಿ |
| ೧೩ | ಮೇಡಂಕ್ಯೂರಿ | (ಚರಿತ್ರ) | ಕೆ. ವಿ. ರತ್ನಮ್ಮ |
| ೧೪ | ತೆನ್ನಾಲಿ ರಾಮಕೃಷ್ಣ | (ನಾಟಕ) | ಸಿ. ಕೆ. ವೆಂಕಟರಾಮಯ್ಯ. |

## ಹೊಸ ಬಿಡಿಮುತ್ತುಗಳು

| | | | |
|---|---|---|---|
| ೧ | ಮಹಾಯುದ್ಧ | (ಖಂಡಕಾವ್ಯ) | ಕೆ. ಎ. ಎನ್. ರಾವ್ |
| ೨ | ಪುಷ್ಪವಿಕ್ಷೇಪ | (ಕಾವ್ಯಸಂಗ್ರಹ) | ಸುಬ್ರಹ್ಮಣ್ಯ ಅಯ್ಯರ |
| ೩ | ತೊಳೆದ ಮುತ್ತು | (ಕತೆಗಳ ಸಂಗ್ರಹ) | 'ಶ್ರೀನಿವಾಸಸುತ' |
| ೪ | ಕಾವ್ಯಲಹರಿ | (ಕವನಗಳ ಸಂಗ್ರಹ) | 'ಶ್ರೀನಿವಾಸಸುತ' |

# ಮನೋಹರ ಗ್ರಂಥಮಾಲೆಯಲ್ಲಿ ಇದುವರೆಗೆ ಅರಳಿದ ಕುಸುಮಗಳು

**ಸೂಚನೆ :**

ಕೆಳಗಿನ ಗ್ರಂಥಗಳಲ್ಲಿ ಈಗ ಮಾರಾಟಕ್ಕೆ ದೊರೆಯುವ ಗ್ರಂಥಗಳ ಪಟ್ಟಿಯೊಂದನ್ನು ಬೇರೆಯಾಗಿಯೆ ಕೊಟ್ಟಿದೆ. ಬೇಡಿಕೆ **ಕೊಡುವವರು ಅದರಿಂದ** ಆಯ್ದು ಕಳಿಸಬೇಕು.

ಅವನ್ನು ಬಿಟ್ಟು ಉಳಿದ ಗ್ರಂಥಗಳ ಪ್ರತಿಗಳು ಮುಗಿದಿವೆಯೆಂದು ತಿಳಿಯಬೇಕು.

ಈ ಪಟ್ಟಿಯನ್ನು ಗ್ರಂಥಗಳು ಪ್ರಕಟವಾದ ಕ್ರಮದಲ್ಲಿಯೆ ಕೊಡಲಾಗಿದೆ.

## ಒಂದನೆಯ ವರ್ಷ

೧ ಸುದರ್ಶನ ( ಕಾದಂಬರಿ ) .... .... ಆನಂದಕಂದ
೨ ನವಿಲುಗರಿ ( ಸಣ್ಣ ಕತೆಗಳ ಸಂಕಲನ ) .... ಬೇರೆಬೇರೆಯವರು
೩ ತ್ರಿಪುರದಹನ (ವಿಚಾರಾತ್ಮಕಸಂವಾದ) ದೊರೆಸ್ವಾಮಿ ಅಯ್ಯಂಗಾರ
೪ ಬಾಳುರಿ ( ಕಾದಂಬರಿ ) .... .... ರಂ. ಶ್ರೀ. ಮುಗಳಿ
೫ ಬ್ರಾಹ್ಮಣರ ಹುಡಿಗಿ (ಶರತ್ ಕಾದಂಬರಿ) ಆರ್. ವ್ಯಾಸರಾಯರು
೬ ವಿಶ್ವಾಮಿತ್ರನ ಸೃಷ್ಟಿ ಭಾಗ ೧ ( ಕಾದಂಬರಿ ) ಶ್ರೀರಂಗ

## ಎರಡನೆಯ ವರ್ಷ

೭ ವಿಶ್ವಾಮಿತ್ರನ ಸೃಷ್ಟಿ ಭಾಗ ೨ (ಕಾದಂಬರಿ) ಶ್ರೀರಂಗ
೮ ಜೀವನ (ಸಣ್ಣ ಕತೆಗಳ ಸಂಗ್ರಹ) .... ಕೃಷ್ಣಕುಮಾರ
೯ ಕಾಳರಾತ್ರಿ ( ಅಧ್ಯಾತ್ಮಿಯ ಆತ್ಮಕಥನ) .... ಮಧುರಚೆನ್ನ
೧೦ ಧರ್ಮಸೆರೆ (ಕಾದಂಬರಿ) .... .... ಜಡಭರತ
೧೧ ರಾಜಯೋಗಿ (ಐತಿಹಾಸಿಕ ಕಾದಂಬರಿ) .... ಆನಂದಕಂದ
೧೨ ಕೋಲ್ಮಿಂಚು ( ಏಕಾಂಕ ಸಂಗ್ರಹ ) ಬೇರೆಬೇರೆಯವರು

## ಮೂರನೆಯ ವರ್ಷ

೧೩ } ಇಜ್ಜೋಡು (ಕಾದಂಬರಿ) .... ವಿ. ಕೃ ಗೋಕಾಕ
೧೪ }
೧೫ ಕುರಿಹಿಂಡು (ವ್ಯಂಗ್ಯಚಿತ್ರಗಳು) .... 'ಜಲಧರ'
೧೬ ಧೂಮಕೇತು (ಕಾದಂಬರಿ) .... ಕೆ. ಶಂಕರಭಟ್ಟ
೧೭ ಧರ್ಮಜ್ಯೋತಿ (ನಾಟಕ) ದೊರೆಸ್ವಾಮಿ ಅಯ್ಯಂಗಾರ್
೧೮ ಸೇವಾಪ್ರದೀಪ (ಐತಿಹಾಸಿಕ ನಾಟಕ) .... ರಂ. ಶ್ರೀ. ಮುಗಳಿ

## ನಾಲ್ಕನೆಯ ವರ್ಷ

೧೯ ದಿಲ್ಲೀಶ್ವರನ ದಿನಚರಿ .... ನಾ. ಕಸ್ತೂರಿ
೨೦ ಪುಷ್ಪಮಾಲೆ (ಸಣ್ಣಕತೆಗಳ ಸಂಗ್ರಹ) .... 'ಶ್ರೀಸ್ವಾಮಿ'
೨೧ ಸೊಲೊ ಗೇಲುವೋ (ಸಣ್ಣ ಕತೆಗಳು) .... ದೇವುಡು
೨೨ ಹಳ್ಳಿಯ ಸಮಾಜ (ಶರತ್ ಕಾದಂಬರಿ) .... ಆರ್. ವ್ಯಾಸರಾಯರು
೨೩ ಪಾವನಪಾವಕ (ಏಕಾಂಕಗಳು) .... ರಂ. ಶ್ರೀ. ಮುಗಳಿ
೨೪ ಸಮುದ್ರದಾಚೆಯಿಂದ ಭಾಗ ೧ (ಪತ್ರಗಳ ಸಂಗ್ರಹ) ಗೋಕಾಕ

## ಐದನೆಯ ವರ್ಷ

೨೫ ಸರಸಮ್ಮನ ಸಮಾಧಿ (ಕಾದಂಬರಿ) .... ಕೋ. ಶಿ. ಕಾರಂತ
೨೬ ಎರಡುಧ್ರುವ ಭಾ. ೧ (ಖಾಂಡೇಕರ ಕಾದಂಬರಿ) ವಿ. ಎಂ. ಇನಾಂದಾರ
೨೭ ಎರಡುಧ್ರುವ ಭಾ. ೨ ( ,, ,, ) ವಿ. ಎಂ. ಇನಾಂದಾರ
೨೮ ಸಮುದ್ರದಾಚೆಯಿಂದ ಭಾಗ ೨ (ಪತ್ರಗಳ ಸಂಗ್ರಹ) ಗೋಕಾಕ
೨೯ ಹೂಬಾಣಗಳು (ಹಾಸ್ಯಕತೆಗಳು) .... ಪ. ರಮಾನಂದ
೩೦ ಮಹಾಪೂರ (ಕಾದಂಬರಿ) .... ಎಸ್. ಜಿ. ಕುಲಕರ್ಣಿ

## ಆರನೆಯ ವರ್ಷ

೩೧ ಸಂಧ್ಯಾರಾಗ (ಕಾದಂಬರಿ) .... ಅ. ನ. ಕೃಷ್ಣರಾಯ
೩೨ ಪ್ರೇಮಾಹುತಿ (ಟಾಲ್ಸ್ಟಾಯರ ಕಾದಂಬರಿ) ಗು. ಭೀ. ಜೋಶಿ
೩೩ ಪ್ರೇಮಾಹುತಿ ( ,, ,, ಗು. ಭೀ. ಜೋಶಿ
೩೪ ಜನನಾಯಕ (ನಾಟಕ) .... ವಿ. ಕೃ. ಗೋಕಾಕ

೩೫ ಸುಳುವು ಹೊಳವು (ಪ್ರಬಂಧಗಳು) .... ಬೇರೆಬೇರೆಯವರು

೩೬ ಕಾರಣಪುರುಷ (ಕಾದಂಬರಿ) .... ರಂ. ಶ್ರೀ. ಮುಗಳಿ

### ಏಳನೆಯ ವರ್ಷ

೩೭ ಹತ್ತು ವರ್ಷ (ಆತ್ಮಕತೆ) .... ಜಿ. ಪಿ. ರಾಜರತ್ನಂ

೩೮ ತುಟಿಮೀರಿದುದು (ಹಾಸ್ಯಕತೆಗಳು) .... ರಾ. ಶಿ.

೩೯ ಭಾರತಮಾರ್ಗ ಭಾಗ ೧ (ಫಾಃಸ್ಟರನ ಕಾದಂಬರಿ) ಗು. ಭೀ. ಜೋಶಿ

೪೦ ಭಾರತಮಾರ್ಗ ಭಾಗ ೨ ( ,, ,, ) ಗು. ಭೀ. ಜೋಶಿ

೪೧ ಗ್ರಾಮಪಂಚಾನನ (ಕಾದಂಬರಿ) .... ಬಾ. ಕೃ. ಲಕ್ಷ್ಮೇಶ್ವರ

೪೨ ಮಾರ್ಗದರ್ಶಕ (ಸಣ್ಣ ಕತೆಗಳು) .... ಎಂ.ವಿ. ಸೀತಾರಾಮಯ್ಯ

### ಎಂಟನೆಯ ವರ್ಷ

೪೩ ಗಾಳಿಗೋಪುರ (ಕಾದಂಬರಿ) .... ನಾ. ಕಸ್ತೂರಿ

೪೪, ೪೫ } ಮಂಗಳಸೂತ್ರ (ಕಾದಂಬರಿ) .... ಅ. ನ. ಕೃಷ್ಣರಾಯ

೪೬ ಬಿಡುಗಡೆಯ ಬೆಲೆ (ರಾಷ್ಟ್ರಸೇವಕನ ಆತ್ಮವೃತ್ತ) ಅಶ್ವತ್ಥನಾರಾಯಣ

೪೭, ೪೮ } ವೈಯಾರಿ (ಕತೆಗಳು) .... ಗೊರೂರ ರಾಮಸ್ವಾಮಿ

### ಒಂಬತ್ತನೆಯ ವರ್ಷ

೪೯ ಮರಳಿಮಣ್ಣಿಗೆ ಭಾಗ ೧ (ಕಾದಂಬರಿ) .... ಕಾರಂತ

೫೦ ಮರಳಿಮಣ್ಣಿಗೆ ಭಾಗ ೨ ( ,, ) .... ,,

೫೧ ಮರಳಿಮಣ್ಣಿಗೆ ಭಾಗ ೩ ( ,, ) .... ,,

೫೨ ಮರಳಿಮಣ್ಣಿಗೆ ಭಾಗ ೪ ( ,, ) .... ,,

೫೩ ಭರಮಪ್ಪನ ಭೂತ (ಪತ್ತೇದಾರಿ ಕಾದಂಬರಿ).... ಶ್ರೀರಂಗ

೫೪ ಜಯಶ್ರೀ (ನಾಟಕ) .... ಚಿ. ಸದಾಶಿವಯ್ಯ

### ಹತ್ತನೆಯ ವರ್ಷ

೫೫ ಪಚ್ಚೇ ಉಂಗುರ (ಪತ್ತೇದಾರಿ ಕಾದಂಬರಿ) .... ಎಂ. ಜಿ. ವೆಂಕಟೇಶಯ್ಯ

೫೬ ಮೇಡಂ ಕ್ಯೂರಿ (ವಿಜ್ಞಾನಿಯ ಚರಿತ್ರೆ) .... ಶ್ರೀಮತಿ ಕೆ.ವಿ. ರತ್ನಮ್ಮ

೫೭ ಮೋಡಗಳು (ಸಣ್ಣ ಕತೆಗಳು) .... 'ಶ್ರೀಸ್ವಾಮಿ'

೫೮ ತೆನ್ನಾಲಿ ರಾಮಕೃಷ್ಣ (ನಾಟಕ) .... ಸಿ. ಕೆ. ವೆಂಕಟರಾಮಯ್ಯ

೫೯ } ಬೆಟ್ಟದ ಜೀವ (ಕಾದಂಬರಿ) .... ಕೋ. ಶಿ. ಕಾರಂತ
೬೦ }

## ಹನ್ನೊಂದನೆಯ ವರ್ಷ

೬೧ ಹೂವಿನ ಹಾಸಿಗೆ (ಮಕ್ಕಳ ಕತೆಗಳು) .... ಹೊಯಿಸಳ

೬೨ ಕನಸಿನ ಕೆಳದಿ (ಸಣ್ಣ ಕತೆಗಳು) .... ರಂ. ಶ್ರೀ. ಮುಗಳಿ

೬೩ ಕೆನ್ಸಿಂಗ್‌ಟನ್ ಪಾರ್ಕ (ಕತೆ-ಹರಟೆ-ನಾಟಕ) ಕೆ. ಗೋಪಾಲಕೃಷ್ಣ

೬೪ ಚಕ್ರದೃಷ್ಟಿ (ಕಾದಂಬರಿ) .... ನಾ. ಕಸ್ತೂರಿ

೬೫ } ಮಿಂಚಿನ ಹುಡಿ (ನಾಟಕಗಳು) .... ಕೃಷ್ಣಕುಮಾರ
೬೬ }

## ಹನ್ನೆರಡನೆಯ ವರ್ಷ

೬೭ ನಕ್ಕುಳಾತಾಯಿ (ಸಾಹಿತ್ಯ ವಿಮರ್ಶಾತ್ಮಕ ಕತೆ) ಜಿ. ಪಿ. ರಾಜರತ್ನಂ

೬೮ ಮಲಮಗಳು (ಕಾದಂಬರಿ) .... ರಾ. ವೆಂ. ಶ್ರೀನಿವಾಸ

೬೯ ನಟಸಾರ್ವಭೌಮ ಭಾಗ ೧ (ಕಾದಂಬರಿ) .... ಅ. ನ. ಕೃಷ್ಣರಾಯ

೭೦ ಇಜ್ಜೋಡು (ಭಾಗ ೨) .... ವಿ. ಕೃ. ಗೋಕಾಕ

೭೧ } ನಿಸರ್ಗ (ಕಾದಂಬರಿ) .... ಮಿರ್ಜಿ ಅಣ್ಣಾರಾಯ
೭೨ }

## ಹದಿಮೂರನೆಯ ವರ್ಷ

೭೩ ಅನಂತ (ಕಾದಂಬರಿ) ... ಸತ್ಯಬೋಧ

೭೪ } ನಟಸಾರ್ವಭೌಮ (ಕಾದಂಬರಿ) .... ಅ. ನ. ಕೃಷ್ಣರಾಯ
೭೫ }

೭೬ } ಪ್ರೀತಿಯು ಯೋಗವಾಯೆ (ಇಜ್ಜೋಡು ೩).... ವಿ. ಕೃ. ಗೋಕಾಕ
೭೭ }

೭೮ ಎತ್ತಿದ ಕೈ (ಏಕಾಂಕ ಸಂಗ್ರಹ) .... ರಂ. ಶ್ರೀ. ಮುಗಳಿ

## ಹದಿನಾಲ್ಕನೆಯ ವರ್ಷ

೭೯, ೮೦ ಭಗ್ನಮಂದಿರ (ಕಾದಂಬರಿ) .... 'ಹೇಮಂತ'

೮೧, ೮೨ ದೇವತಾಮನುಷ್ಯ (ಕಾದಂಬರಿ) .... ಕೆ. ಶಂಕರಭಟ್ಟ

೮೩ ಯುಗಾಂತರ (ನಾಟಕ) .... ವಿ. ಕೃ. ಗೋಕಾಕ

೮೪ ಏರಿಳಿತ (ಇಜ್ಜೋಡು ೪) .... ವಿ. ಕೃ. ಗೋಕಾಕ
ಬಿತ್ತಿದ ಬೆಳೆ (ನಾಟಕ) .... ಕೋ. ಶಿ. ಕಾರಂತ

## ಹದಿನೈದನೆಯ ವರ್ಷ

೮೫, ೮೬, ೮೭, ೮೮, ೮೯ ರಾಷ್ಟ್ರಪುರುಷ (ಕಾದಂಬರಿ) .... ಮಿರ್ಜಿ ಅಣ್ಣಾರಾಯ

೯೦ ಸಮುದ್ರಯಾನ (ಇಜ್ಜೋಡು ೫) .... ವಿ ಕೃ. ಗೋಕಾಕ

## ಹದಿನಾರನೆಯ ವರ್ಷ

೯೧, ೯೨ ಅನ್ನ (ಕಾದಂಬರಿ) .... ರಂ. ಶ್ರೀ. ಮುಗಳಿ

೯೩ ಪರಿವರ್ತನ (ನಾಟಕ) .... ಲಕ್ಷ್ಮಣರಾವ ಬೇಂದ್ರೆ

೯೪ ವೇಣುಮಾವ (ನಾಟಕ) .... ಶ್ರೀಮತಿ ಪ. ಸೀತಾದೇವಿ

೯೫ ಬಹುಮಾನ ಪಡೆದ ಬರೆಹಗಳು .... ಬೇರೆಬೇರೆಯವರು

೯೬ ಮುನಿಯನ ಮಾದರಿ (ಕಾದಂಬರಿ) .... ಕೆ. ಎನ್. ಎ. ರಾವ್

## ಹದಿನೇಳನೆಯ ವರ್ಷ

೯೭ ಜಡಭರತನ ಕನಸುಗಳು .... ಜಡಭರತ

೯೮ ಮಗು (ನಾಟಕ) . ಕೆ. ಎ. ಎನ್. ರಾವ್
ಗಂಗಾಸಾನಿ (ಕಾದಂಬರಿ) .... ಗಿರಿಮಾತಾ